ಬುಧವಾರ, ಡಿಸೆಂಬರ್ 18, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಸನ್ಮಾನ... ತಮಿಳುನಾಡಿನ ಕ್ರೀಡಾ ಪ್ರಾಧಿಕಾರವು ಮಂಗಳವಾರ ಚೆನ್ನೈನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ಅವರನ್ನು ಸನ್ಮಾನಿಸಿದರು



ನೈಜೀರಿಯಾದ ಮಹಿಳೆ ಬಂಧನ: ಎಂಡಿಎಂಎ ಕ್ರಿಸ್ಟಲ್, 70 ಸಿಮ್ ವಶಕ್ಕೆ ಪಡೆದ ಸಿಸಿಬಿ

₹24 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ



ರೋಸೆಲೈಮ್

ಬೆಂಗಳೂರು: ದಿನಸಿ ಅಂಗಡಿಯಲ್ಲಿ ಹಳದಿ ಹಾಗೂ ಬಿಳಿ ಬಣ್ಣದ ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ವಿದೇಶಿ ಮಹಿಳೆಯೊಬ್ಬರನ್ನು ಕೇಂದ್ರ ಅಪರಾಧ ವಿಭಾಗದ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ನೈಜೀರಿಯಾದ ರೋಸೆಲೈಮಾ ಬಂಧಿತ ಮಹಿಳೆ.

'ಆರೋಪಿಯಿಂದ 12 ಕೆ.ಜಿ. ತೂಕದ ಬಿಳಿ ಹಾಗೂ ಹಳದಿ ಬಣ್ಣದ ನಿಷೇಧಿತ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್, ಒಂದು ಮೊಬೈಲ್ ಫೋನ್, 70 ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಇವುಗಳ ಮೌಲ್ಯ ₹24 ಕೋಟಿಯೆಂದು ಅಂದಾಜಿಸಲಾಗಿದೆ. ಮಾದಕ ವಸ್ತುಗಳ ಮಾರಾಟದಲ್ಲಿ ಇದುವರೆಗೂ ನಡೆದ ಕಾರ್ಯಾಚರಣೆಯಲ್ಲಿ ಇದು ಅತ್ಯಂತ ದೊಡ್ಡ ಕಾರ್ಯಾಚರಣೆ. ಕಾರ್ಯಾಚರಣೆ ತಂಡವು ಉತ್ತಮವಾಗಿ ಕೆಲಸ ಮಾಡಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ಆರೋಪಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಮತ್ತೊಬ್ಬ ವಿದೇಶಿ ಮಹಿಳೆ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ. ಆಕೆ ಮುಂಬೈನಲ್ಲಿ ನೆಲಸಿದ್ದು, ರೋಸೆಲೈಮಾಗೆ ಎಂಡಿಎಂಎ ಕ್ರಿಸ್ಟಲ್ ಪೂರೈಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.



ಅಂಗಡಿ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು

ಅಪರಾಧ ಸುದ್ದಿ

'ಕೆ.ಆರ್ ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಟಿಸಿ ಪಾಳ್ಯದಲ್ಲಿ ಆರೋಪಿ ನೆಲಸಿದ್ದರು. ಐದು ವರ್ಷಗಳ ಹಿಂದೆ ಬ್ಯುಸಿನೆಸ್ ವೀಸಾದ ಮೇಲೆ ನಗರಕ್ಕೆ ಬಂದಿದ್ದರು. ವೀಸಾ ಅವಧಿ ಮುಕ್ತಾಯವಾಗಿತ್ತು. ಆದರೂ ಅಕ್ರಮವಾಗಿ ನಗರದಲ್ಲಿ ನೆಲಸಿದ್ದರು. ಸ್ಥಳೀಯವಾಗಿ ಅಂಗಡಿ ನಡೆಸುತ್ತಿದ್ದರು. ಆ ಅಂಗಡಿಯಲ್ಲಿ ವಿದೇಶಿ ಪ್ರಜೆಗಳಿಗೆ ಬೇಕಾದ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲಾಗುತ್ತಿತ್ತು. ಆಹಾರ ಸಾಮಗ್ರಿಗಳ ಒಳಗೆ ಎಂಡಿಎಂಎ ಕ್ರಿಸ್ಟಲ್ ಅನ್ನು ಬಚ್ಚಿಟ್ಟು ಮಾರಾಟ ಮಾಡಲಾಗುತ್ತಿದೆ ಎಂದು ಬಾತ್ಮೀದಾರರು ಖಚಿತ ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

'ಮುಂಬೈಗೆ ತೆರಳಿ ಸಿಂಥೆಟಿಕ್ ಡ್ರಗ್ಸ್ ಅನ್ನು ಖರೀದಿಸಿ ಬಸ್‌ನಲ್ಲಿ ಬೆಂಗಳೂರಿಗೆ ಆರೋಪಿ ಮಹಿಳೆ ತರುತ್ತಿದ್ದರು. ಸೋಪು, ಪೇಸ್ಟ್ ಪೊಟ್ಟಣಗಳಲ್ಲಿ ಬಚ್ಚಿಟ್ಟು ತರಲಾಗುತ್ತಿತ್ತು. ಡ್ರಗ್ಸ್ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಮೋಜು ಮಸ್ತಿ ಮಾಡುತ್ತಿದ್ದರು' ಎಂದು ಹೇಳಿದರು.

'ವಿದೇಶಿ ಪ್ರಜೆಗಳು, ಪರಿಚಿತ ಗಿರಾಕಿಗಳು, ಕಾಲೇಜು ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಆರೋಪಿ ಡ್ರಗ್ಸ್ ಮಾರಾಟ ಮಾಡುತ್ತಿದ್ದರು. 70 ಸಿಮ್‌ಗಳನ್ನು ಯಾವ ಉದ್ದೇಶಕ್ಕೆ ಖರೀದಿಸಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ತಲೆಮರೆಸಿಕೊಂಡಿರುವ ಹಾಗೂ ಬಂಧಿತ ಮಹಿಳೆ ವಿರುದ್ಧ ಎನ್‌ಡಿಪಿಎಸ್ ಹಾಗೂ ವಿದೇಶಿ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ವಿರುದ್ಧ ಕೆ.ಆರ್. ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖ್ಯಾಂಶಗಳು

- ಮಾದಕ ವಸ್ತು ವಿರುದ್ಧದ ಇದುವರೆಗಿನ ಅತಿ ದೊಡ್ಡ ಕಾರ್ಯಾಚರಣೆ
- ಮುಂಬೈನಿಂದ ಬಸ್‌ನಲ್ಲಿ ಮಾದಕ ವಸ್ತು ಸಾಗಿಸುತ್ತಿದ್ದ ಆರೋಪಿ

₹1.21 ಕೋಟಿ ಮೌಲ್ಯದ 190 ಕೆ.ಜಿ. ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟದ ವಿರುದ್ಧ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ 11 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ 190 ಕೆ.ಜಿ. ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ. ಇದರ ಮೌಲ್ಯ ₹1.21 ಕೋಟಿಯೆಂದು ಅಂದಾಜಿಸಲಾಗಿದೆ.

ಅಶೋಕ ನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕಿನ ಮನೆಪಲ್ಲೆ ನಿವಾಸಿ, ಬೆಂಗಳೂರು ವೀರೇಶ್ ನಗರದಲ್ಲಿ ನೆಲಸಿದ್ದ ಶ್ರೀಕಾಂತ್(24), ಆರ್‌.ಟಿ. ನಗರದ ನಿವಾಸಿ ಮುನಿರಾಜ್(27), ಚಾಮುಂಡೇಶ್ವರಿ ನಗರದ ಚಂದ್ರಕಾಂತ್(24) ಹಾಗೂ ಆನೇಕಲ್ ತಾಲ್ಲೂಕು ಕಲ್ಲಬಾಳು ಗ್ರಾಮದ ವಿ.ಬಾಲಕೃಷ್ಣ ಬಂಧಿತರು.

ಕೊಲೆ ಪ್ರಕರಣದಲ್ಲಿ ಬಾಲಕೃಷ್ಣ ಅವರು ಈಗಾಗಲೇ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಸಜಾ ಬಂಧಿ ಆಗಿದ್ದಾನೆ. ಅವನನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಲಾಗಿದೆ.

ಬಂಧಿತರಿಂದ 76 ಕೆ.ಜಿ. ಗಾಂಜಾ, ಮೂರು ಮೊಬೈಲ್ ಫೋನ್ ಹಾಗೂ ಗಾಂಜಾ ಸಾಗಣೆಗೆ ಬಳಸುತ್ತಿದ್ದ ಒಂದು ವಾಹನ ವಶಕ್ಕೆ ಪಡೆದುಕೊಳ್ಳಲಾಗಿದೆ. ಇವುಗಳ ಮೌಲ್ಯ ₹30 ಲಕ್ಷ ಎಂದು ಅಂದಾಜಿಸಲಾಗಿದೆ.

ಬನ್ನೇರುಘಟ್ಟದಿಂದ ಹೊಸೂರು ಕಡೆಗೆ ತೆರಳುವ ರಸ್ತೆಯ ರುದ್ರಭೂಮಿ ಬಳಿ ಮೂವರು ಆರೋಪಿಗಳು ವಾಹನದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.


'ಜೈಲಿನಲ್ಲಿರುವ ಬಾಲಕೃಷ್ಣ ಎಂಬಾತ ನೀಡಿದ ಸೂಚನೆ ಮೇರೆಗೆ ಮೂವರು ಆರೋಪಿಗಳು ಆಂಧ್ರಪ್ರದೇಶದ ವಿಶಾಖಪಟ್ಟಣ ಬಳಿಯ ತುನಿ ಗ್ರಾಮದಲ್ಲಿ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.



ಸ್ಟಾಲಿನ್



ಜೋನ್ಸ್



ಮರಿಯಾ ಸೆಲ್ವಾ

ಗಾಂಜಾ ಮಾರಾಟ ಮಾಡುತ್ತಿದ್ದ ಜೋನ್ಸ್, ಸ್ಟಾಲಿನ್, ಮರಿಯಾ ಸೆಲ್ವಾ ಎಂಬುವವರನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹15 ಲಕ್ಷ ಮೌಲ್ಯದ 15 ಕೆ.ಜಿ ಗಾಂಜಾ ಹಾಗೂ ಮೂರು ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ.

'ಆರೋಪಿಗಳು, ಕನಕದಾಸ ಲೇಔಟ್‌ನ ಆರ್‌ಎಸ್ ಪಾಳ್ಯದ ಮನೆಯೊಂದರಲ್ಲಿ ಗಾಂಜಾ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಇನ್ನು ಯಲಹಂಕ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ 93 ಕೆ.ಜಿ. ಗಾಂಜಾ, ಟ್ರಕ್, ಇನ್ನೋವಾ ಕಾರು, ನಾಲ್ಕು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹74.53 ಲಕ್ಷವೆಂದು ಅಂದಾಜಿಸಲಾಗಿದೆ.

ಠಾಣಾ ವ್ಯಾಪ್ತಿಯ ಕಾಲೇಜೊಂದರ ಬಳಿ ಆರೋಪಿಗಳು ಗಾಂಜಾ ಮಾರಾಟ ಮಾಡುತ್ತಿದ್ದರು. ಬಾತ್ಮೀದಾರರು ನೀಡಿದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು. ಹೊಸ ವರ್ಷದ ಪಾರ್ಟಿಗಳಿಗೆ ಗಾಂಜಾ ಪೂರೈಸಲು ದಾಸ್ತಾನು ಮಾಡಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 5 ಕೆ.ಜಿ. ಗಾಂಜಾ ವಶಕ್ಕೆ ಪಡೆದುಕೊಳ್ಳಲಾಗಿದೆ.

ಸುದ್ದಿ 2 ನಿಮಿಷ

ಎಲ್ಲ ರಾಜ್ಯಗಳಲ್ಲಿ ಯುಸಿಸಿ: ಶಾ

ನವದೆಹಲಿ: 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಲ್ಲೂ ಏಕರೂಪದ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸಲು ಕ್ರಮವಹಿಸಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ರಾಜ್ಯಸಭೆಯಲ್ಲಿ ತಿಳಿಸಿದರು.

ಸಂವಿಧಾನ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಅವರು 'ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕಲು' ಮತ್ತು 'ಅಧಿಕಾರದಲ್ಲಿ ಉಳಿಯಲು' ಈ ಹಿಂದೆ ಕಾಂಗ್ರೆಸ್ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದಿತ್ತು ಎಂದು ವಾಗ್ದಾಳಿ ನಡೆಸಿದರು.


ಕಾಂಗ್ರೆಸ್ ಪಕ್ಷವು ಸಂವಿಧಾನವನ್ನು 'ಖಾಸಗಿ ಆಸ್ತಿ' ಎಂಬಂತೆ ನೋಡಿದೆ. ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವ ಸಲುವಾಗಿ ಶೇ 50 ಮಿತಿಯನ್ನು ದಾಟಲು ಯತ್ನಿಸಿತ್ತು. ಆ ಪಕ್ಷವು ಎಂದಿಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಆದ್ಯತೆ ನೀಡಲಿಲ್ಲ ಎಂದು ಆರೋಪಿಸಿದರು.

'ಯುಸಿಸಿ ಕುರಿತಂತೆ ಪ್ರಸ್ತುತ ಕಾನೂನು ಮತ್ತು ಸಾಮಾಜಿಕ ಚರ್ಚೆ ನಡೆದಿದೆ. ಸಲಹೆಗಳೂ ಬರುತ್ತಿವೆ. ನಾವು ಕೆಲವನ್ನು ಒಪ್ಪಲೂಬಹುದು. ಆ ಬಳಿಕ ಪ್ರತಿ ರಾಜ್ಯದಲ್ಲೂ ಯುಸಿಸಿ ಅನ್ನು ಜಾರಿಗೆ ತರುತ್ತೇವೆ' ಎಂದು ಪ್ರತಿಪಾದಿಸಿದರು.

ರಾಜ್ಯಸಭೆಯಲ್ಲಿ ಸಂವಿಧಾನ ಕುರಿತ ಚರ್ಚೆಗೆ ಒಂದೂವರೆ ಗಂಟೆ ಕಾಲ ಉತ್ತರಿಸಿದ ಅವರು, 1973ರಿಂದ 2016ರವರೆಗೆ ಸುಪ್ರೀಂ ಕೋರ್ಟ್ ಮತ್ತು ರಾಜ್ಯಗಳಿಂದ ಯುಸಿಸಿ ಜಾರಿಗೆ 11 ಬಾರಿ ಸಲಹೆ ಬಂದಿತ್ತು. ಕಾಂಗ್ರೆಸ್ ನೇತೃತ್ವದ ಆಗಿನ ಸರ್ಕಾರ ಎಲ್ಲವನ್ನೂ ತಳ್ಳಿಹಾಕಿತ್ತು ಎಂದರು.

ಕಳೆದ 75 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಸಂವಿಧಾನದ ಹೆಸರಿನಲ್ಲಿ ವಂಚಿಸಿದೆ. ನೆಹರೂ–ಗಾಂಧಿ ಕುಟುಂಬವು ಪಕ್ಷವನ್ನಷ್ಟೇ ಅಲ್ಲ, ಸಂವಿಧಾನವನ್ನೂ ಖಾಸಗಿ ಆಸ್ತಿ ಎಂಬಂತೆ ಪರಿಗಣಿಸಿತ್ತು. ಸಂಸತ್ತಿನ ಅನುಮೋದನೆ ಇಲ್ಲದೆ ವಿಧಿ 35ಎ ಸೇರಿಸಲಾಗಿತ್ತು ಎಂದು ಆರೋಪಿಸಿದರು.

ನಗರದಲ್ಲಿ ತಾಪಮಾನ ಕುಸಿತ



ಬೆಂಗಳೂರು: ನಗರದಲ್ಲಿ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶ ಕುಸಿತವಾಗುತ್ತಿದೆ. ಇದರಿಂದಾಗಿ ಚಳಿ ಹೆಚ್ಚಳವಾಗುತ್ತಿದೆ.

ವಿವಿಧೆಡೆ ಮುಂಜಾನೆ ದಟ್ಟವಾದ ಮಂಜು ಕಾಣಿಸಿಕೊಳ್ಳುತ್ತಿದೆ. ಕೆಲವೆಡೆ ಶೀತ ಗಾಳಿ ಬೀಸುತ್ತಿದೆ. ಪರಿಣಾಮ ತಾಪಮಾನ ತಗ್ಗುತ್ತಿದೆ. ಮಂಗಳವಾರ ಸಂಜೆ 5.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 28.3 ಡಿಗ್ರಿ ಸೆಲ್ಸಿಯಸ್ ವರದಿಯಾದರೆ, ಕನಿಷ್ಠ ಉಷ್ಣಾಂಶ 15.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ.

ಕಳೆದೊಂದು ವಾರದಿಂದ ಕನಿಷ್ಠ ಉಷ್ಣಾಂಶ ಇಳಿಮುಖ ಆಗುತ್ತಿದೆ. ಡಿ.11ರಂದು ಕನಿಷ್ಠ ಉಷ್ಣಾಂಶ 19.2 ಡಿಗ್ರಿ ಸೆಲ್ಸಿಯಸ್ ನಷ್ಟಿತ್ತು. ವಾರದಿಂದ ತಾಪಮಾನ ಮೂರರಿಂದ ನಾಲ್ಕು ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗುತ್ತಿದೆ.

ಗುರುವಾರದಿಂದ ತುಂತುರು ಮಳೆಯಾಗುವ ಸಾಧ್ಯತೆಯಿದ್ದು, ತಾಪಮಾನವೂ ಕೊಂಚ ಏರಿಕೆಯಾಗುವ ಸಂಭವವಿದೆ. ಮುಂದಿನ ಒಂದು ವಾರ ಗರಿಷ್ಠ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹಿಂದಿ ಹೇರಿಕೆ: ಒಂದು ಲಕ್ಷ ಕರಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ಹೇರಿಕೆ ವಿರೋಧಿ ಕರ್ನಾಟಕ ಒಕ್ಕೂಟವು ಹಿಂದಿ ಹೇರಿಕೆ ವಿರುದ್ಧ ಜಾಗೃತಿ ಮೂಡಿಸಲು ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಲಕ್ಷ ಕರಪತ್ರಗಳನ್ನು ವಿತರಿಸಲಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಪಾರ್ವತೀಶ ಬಿಳಿದಾಳೆ, 'ಭಾರತವು ಹಲವಾರು ಭಾಷೆ, ಸಂಸ್ಕೃತಿ ಹಾಗೂ ಜೀವನಕ್ರಮ ಒಳಗೊಂಡಿರುವ ವಿಭಿನ್ನ ಸಮುದಾಯಗಳ ಒಂದು ಒಕ್ಕೂಟವಾಗಿದೆ. ಹಿಂದಿ ಹೇರಿಕೆಯ ಮೂಲಕ ನಾವೆಲ್ಲ ಒಂದು ಎಂಬ ಭಾವನೆ ಮೂಡಿಸಲು ಸಾಧ್ಯವಿಲ್ಲ. ಈ ಬಗ್ಗೆ ಜನಜಾಗೃತಿ ಮೂಡಬೇಕಿದೆ. ಆದ್ದರಿಂದ ಸಾಹಿತ್ಯ ಸಮ್ಮೇಳನದಲ್ಲಿ ಕರಪತ್ರ ವಿತರಣೆ ಮೂಲಕ ಹಿಂದಿ ಹೇರಿಕೆಯ ಅಪಾಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ' ಎಂದರು.

'ರಾಜ್ಯ ಸರ್ಕಾರವು ತ್ರಿಭಾಷಾ ಶಿಕ್ಷಣ ನೀತಿಯನ್ನು ಕೂಡಲೇ ರದ್ದುಪಡಿಸಿ, ದ್ವಿಭಾಷಾ ನೀತಿ ಜಾರಿಗೆ ತರಬೇಕಿದೆ. ಕೇಂದ್ರ ಸರ್ಕಾರವು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಂಚಿಕೆಯಲ್ಲಿ ರಾಜ್ಯಕ್ಕೆ ನ್ಯಾಯಬದ್ಧ ಪಾಲು ನೀಡಬೇಕಿದೆ. ಈ ವಿಚಾರಗಳನ್ನು ಒಳಗೊಂಡ ಕರಪತ್ರಗಳನ್ನು ಸಮ್ಮೇಳನದ ಅವಧಿಯಲ್ಲಿ ವಿತರಿಸಲಾಗುತ್ತದೆ. ನೂರಾರು ಕನ್ನಡಪರ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಈ ಘೋಷ ವಾಕ್ಯಗಳಿರುವ ಟೀ ಶರ್ಟ್‌ಗಳನ್ನು ಧರಿಸಿ, ಕರಪತ್ರ ನೀಡುತ್ತಾರೆ' ಎಂದು ಹೇಳಿದರು.

ಕನ್ನಡ ಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ, ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ಕವಿ ಕಾ.ವೆಂ. ಶ್ರೀನಿವಾಸಮೂರ್ತಿ, ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ, ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಶೆ.ಬೊ.ರಾಧಾಕೃಷ್ಣ, ಶಂಕರ್ ಹೂಗಾರ್, ಯಮುನಾ ಮೈಸೂರು, ನಾವು ದ್ರಾವಿಡ ಕನ್ನಡ ಕನ್ನಡಿಗರು ಚಳವಳಿಯ ಅಭಿ ಗೌಡ, ರೈತ ಸಂಘಟನೆಯ ವೀರಸಂಗಯ್ಯ ಇದ್ದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಎಲ್ಲ ಕ್ಷೇತ್ರಗಳಿಗೂ ₹2,000 ಕೋಟಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಎಲ್ಲಾ ಪಕ್ಷಗಳ ಶಾಸಕರ ಕ್ಷೇತ್ರಗಳಿಗೂ ₹2,000 ಕೋಟಿ ಅನುದಾನ ಹಂಚಿಕೆ ಮಾಡುತ್ತೇವೆ. ಪಕ್ಷದ ಶಾಸಕರು ಎದೆಯೆತ್ತಿ ಮಾತನಾಡಿ. ವಿರೋಧ ಪಕ್ಷಗಳ ಬಾಯಿ ಮುಚ್ಚಿಸಿ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಇಲ್ಲಿ ಮಂಗಳವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಅವರು ಮಾತನಾಡಿದರು.

'ಅಭಿವೃದ್ಧಿ ಪರ್ವ ರಾಜ್ಯದಲ್ಲಿ ನಿರಂತರತೆ ಕಾಯ್ದುಕೊಂಡಿದೆ. ವಿಧಾನಸಭೆ- ಪರಿಷತ್‌ನಲ್ಲಿ ಮತ್ತು ಸದನದ ಹೊರಗೆ ನಮ್ಮ ಅಭಿವೃದ್ಧಿಯ ದಾಖಲೆಗಳನ್ನು, ಅಂಕಿ ಅಂಶಗಳನ್ನು ಮನೆ ಮನೆ ತಲುಪಿಸಿ' ಎಂದು ಪಕ್ಷದ ಶಾಸಕರಿಗೆ ಕರೆ ನೀಡಿದರು.

ಜನ ಸಂಪರ್ಕ ಸಭೆ ಹೆಚ್ಚು ಹೆಚ್ಚು ಮಾಡಿ: 'ನಮ್ಮ ಸಚಿವರು ಮತ್ತು ಶಾಸಕರು ಅವರವರ ಉಸ್ತುವಾರಿಯ ಜಿಲ್ಲೆಗಳಲ್ಲಿ, ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಜನಸಂಪರ್ಕ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಬಗೆಹರಿಸಿ. ಹಣಕ್ಕೆ ಸಮಸ್ಯೆ ಇಲ್ಲ. ಹಣ ಇದೆ. ಜನರ ಕೆಲಸ ಮಾಡಿ' ಎಂದರು.



ಸಿದ್ದರಾಮಯ್ಯ

'ನನ್ನ ಮೇಲೆ, ನಮ್ಮ ಸರ್ಕಾರದ ಮೇಲೆ ಮಾಡಿದ ಸರಣಿ ಸುಳ್ಳು ಆರೋಪ, ಅಪಪ್ರಚಾರ ಮಾಡಿದರೂ ಅದೆಲ್ಲವನ್ನೂ ತಿರಸ್ಕರಿಸಿ ರಾಜ್ಯದ ಜನತೆ ಉಪ ಚುನಾವಣೆಯಲ್ಲಿ ನಮ್ಮ ಕೈ ಹಿಡಿದಿದ್ದಾರೆ. ಇತ್ತೀಚೆಗೆ ಹಾಸನದಲ್ಲಿ ನಾವು ಮಾಡಿದ ಸ್ವಾಭಿಮಾನಿ ಸಮಾವೇಶ ಐತಿಹಾಸಿಕ. ರಾಜ್ಯದ ಜನತೆ ಈಗಲೂ ನಮ್ಮ ಪರವಾಗಿದ್ದಾರೆ. ನಾಳೆಯೂ ನಮ್ಮ ಪರವಾಗಿರುತ್ತಾರೆ. ಮುಂದಿನ ಚುನಾವಣೆಯಲ್ಲೂ ನಮ್ಮ ಪರವಾಗಿರಲಿದ್ದಾರೆ' ಎಂದರು.

'ವಕ್ಫ್ ವಿಚಾರ ಬಿಜೆಪಿಗೆ ತಿರುಗುಬಾಣವಾಗಿದೆ. ಅತಿ ಹೆಚ್ಚು ನೋಟಿಸ್ ಕೊಟ್ಟಿರುವುದು, ವಕ್ಫ್ ಆಸ್ತಿ ಒತ್ತುವರಿ ತೆರವುಗೊಳಿಸುವುದಾಗಿ ಬಿಜೆಪಿ ತನ್ನ ಪ್ರಣಾಳಿಕೆಯಲ್ಲೇ ಹೇಳಿದೆ. ಯಡಿಯೂರಪ್ಪ, ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ವಕ್ಫ್ ಆಸ್ತಿ ತೆರವುಗೊಳಿಸಲು ನೋಟಿಸ್ ಗಳನ್ನು ಕೊಡಲಾಗಿದೆ. ಹೀಗಾಗಿ ಬಿಜೆಪಿಗೆ ಈ ಬಗ್ಗೆ ಮಾತನಾಡುವವ ನೈತಿಕತೆ ಇಲ್ಲ' ಎಂದು ಹೇಳಿದರು.

'ಬಿಜೆಪಿ ಒಂಬತ್ತು ವರ್ಷಗಳ ಕಾಲ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ, ಸಮ್ಮಿಶ್ರ ಸರ್ಕಾರದಲ್ಲಿದ್ದಾಗಲೂ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬಿಜೆಪಿ ಕೆಲಸ ಮಾಡಲಿಲ್ಲ. ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಬಿಜೆಪಿ ಪ್ರಯತ್ನವನ್ನೇ ಮಾಡಲಿಲ್ಲ. ನಂಜುಂಡಪ್ಪ ಅವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಇರುವುದೇ ಉತ್ತರ ಕರ್ನಾಟಕದಲ್ಲಿ' ಎಂದರು.

'ಉತ್ತರ ಕರ್ನಾಟಕದ ಅಭಿವೃದ್ಧಿಗೆ 371ಜೆ ಸಂವಿಧಾನ ತಿದ್ದುಪಡಿ ಮಾಡಲು ಸಾಧ್ಯವೇ ಇಲ್ಲ ಎಂದು ಕೇಂದ್ರದಲ್ಲಿದ್ದ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಎಲ್‌.ಕೆ.ಅಡ್ವಾಣಿ ಅವರು ತಿರಸ್ಕರಿಸಿದ್ದರು. ಇದು ಬಿಜೆಪಿಯ ಸತ್ಯವಾದ ಮುಖ' ಎಂದು ಟೀಕಿಸಿದರು.

'ಮಹದಾಯಿ ಸಮಸ್ಯೆ ಬಗೆಹರಿಸುವುದಾಗಿ ರಕ್ತದಲ್ಲಿ ಬರೆದು ಕೊಡ್ತೀನಿ ಎಂದು ಬಸವರಾಜ ಬೊಮ್ಮಾಯಿ ಅವರು ಭರವಸೆ ನೀಡಿದ್ದರು. ಆದರೆ, ಅವರು ಮುಖ್ಯಮಂತ್ರಿಯಾಗಿ, ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇದ್ದರೂ ತಮ್ಮ ಭರವಸೆ ಉಳಿಸಿಕೊಳ್ಳಲಿಲ್ಲ. ಅವರಿಗೆ ಅವಕಾಶ ಇದ್ದಾಗ ಏನೂ ಮಾಡಲಿಲ್ಲ. ಈಗಲೂ ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದ್ದರೂ ಮಹದಾಯಿ ಸಮಸ್ಯೆ ಬಗೆಹರಿಸಲು ಏನೂ ಮಾಡುತ್ತಿಲ್ಲ. ಹೀಗಾಗಿ ಬಿಜೆಪಿ ಬರೀ ಬೊಗಳೆ' ಎಂದು ಹರಿಹಾಯ್ದರು.

'ಸಿಬಿಐ ಈವರೆಗೂ ಏನೂ ಮಾಡಿಲ್ಲ'

ಸುವರ್ಣ ವಿಧಾನಸೌಧ (ಬೆಳಗಾವಿ): 'ಬೆಂಗಳೂರಿನ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್, ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ಮತ್ತು ಶ್ರೀ ವಸಿಷ್ಠ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟಡ್‌ಗಳಲ್ಲಿ ನಡೆದಿರುವ ಬಹುಕೋಟಿ ಹಗರಣಗಳನ್ನು ಸಿಬಿಐಗೆ ವಹಿಸಿದರೂ ಇನ್ನೂ ತನಿಖೆ ಆರಂಭ ಆಗಿಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ 'ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಮಸೂದೆ ಮಂಡಿಸಿ ಮಾತನಾಡಿದ ಅವರು, ' ಈ ಮೂರೂ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಿರುವ ಅಕ್ರಮಗಳ ತನಿಖೆಯನ್ನು ಎಲ್ಲ ಶಾಸಕರ ಒತ್ತಾಯದ ಮೇರೆಗೆ ಕಳೆದ ಡಿಸೆಂಬರ್‌ನಲ್ಲಿಯೇ ಸಿಬಿಐಗೆ ವಹಿಸಲಾಗಿದೆ. ಆದರೆ, ಸಿಬಿಐ ಈವರೆಗೂ ಏನೂ ಮಾಡಿಲ್ಲ' ಎಂದು ಅವರು ತಿಳಿಸಿದರು.

'ಮೀಸಲಾತಿಗೆ ಆರ್ಥಿಕ ಮಾನದಂಡ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ಮುಂದುವರಿಸಬೇಕೇ ಅಥವಾ ಆರ್ಥಿಕ ಮಾನದಂಡಕ್ಕೆ ತಕ್ಕಂತೆ ಬದಲಾಯಿಸಬೇಕೇ ಎಂಬ ಬಗ್ಗೆ ಸಂಸತ್ ಚರ್ಚೆ ನಡೆಸುವ ಅಗತ್ಯ ಇದೆ' ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಸಲಹೆ ನೀಡಿದರು.

ರಾಜ್ಯಸಭೆಯಲ್ಲಿ 'ಭಾರತದ ಸಂವಿಧಾನದ 75 ವರ್ಷಗಳ ವೈಭವದ ಪಯಣ' ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಈ ಹಿಂದೆ ನಾವು ನೀಡಿದ್ದ ಮೀಸಲಾತಿಯಿಂದಲೂ ಜನರ ಸ್ಥಿತಿಯಲ್ಲಿ ಭಾರಿ ಬದಲಾವಣೆ ಆಗಿಲ್ಲ. ಎರಡು ಹೊತ್ತಿನ ಊಟಕ್ಕೆ ಸಂಕಟಪಡುವ ಜನರು ಇದ್ದಾರೆ' ಎಂದರು.



ದೇವೇಗೌಡ

'ಅತ್ಯಂತ ಬಡ ರೈತನ ಮಗನಾದ ನನಗೆ ಈ ದೇಶದ ಸಂವಿಧಾನ ಎಲ್ಲವನ್ನೂ ಕೊಟ್ಟಿದೆ. ಸಂವಿಧಾನದ ಬಲದಿಂದಲೇ ನಾನು ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿ ಆಗುವಂತೆ ಆಯಿತು' ಎಂದರು.

'ಆಧುನಿಕ ಭಾರತವನ್ನು ರೂಪಿಸುವಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ದೂರದೃಷ್ಟಿಯ ಸಂವಿಧಾನ ಅಸಾಧಾರಣ ಕೊಡುಗೆ ನೀಡಿದೆ. ಬಾಬಾ ಸಾಹೇಬ್ ಅವರ ನೇತೃತ್ವದಲ್ಲಿ ರಚನೆಯಾದ ನಮ್ಮ ಸಂವಿಧಾನವು ಅನೇಕ ಒತ್ತಡಗಳು ಮತ್ತು ನಮ್ಮ ಕಾಲದ ರಾಜಕೀಯವನ್ನು ತಡೆದುಕೊಂಡು ನಿಂತಿದೆ' ಎಂದು ಅವರು ಹೇಳಿದರು.

ದೇವೇಗೌಡ ಸಲಹೆ

'ತುರ್ತು ಪರಿಸ್ಥಿತಿ ಸಂದರ್ಭವನ್ನು ನೆನಪು ಮಾಡಿಕೊಂಡ ಅವರು, ತುರ್ತು ಪರಿಸ್ಥಿತಿಯ ಕಾಲ ಕರಾಳ ಅವಧಿ. ಐವತ್ತು ವರ್ಷಗಳ ಹಿಂದೆ ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ, ಈ ರಾಷ್ಟ್ರದ ಬಹುತೇಕ ರಾಜಕೀಯ ವಿರೋಧಿಗಳೆಲ್ಲರೂ ಜೈಲು ಪಾಲಾದರು. ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿದ್ದ ಎಲ್ಲರನ್ನೂ ಜೈಲಿಗೆ ಕಳುಹಿಸಲಾಯಿತು' ಎಂದು ಹೇಳಿದರು.

'ನನ್ನನ್ನೂ ಜೈಲಿಗೆ ಕಳುಹಿಸಲಾಯಿತು. ನನ್ನ ಸೆರೆವಾಸವು ನನ್ನ ತಂದೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿ ಕುಟುಂಬದ ಮೇಲೆ ಮಾನಸಿಕ ಒತ್ತಡ ಉಂಟು ಮಾಡಿತು. ಕೊನೆಗೆ ಆ ನೋವಿನಲ್ಲಿಯೇ ತಂದೆಯವರು ವಿಧಿವಶರಾದರು. ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಮತ್ತು ತಮ್ಮ ರಾಜಕೀಯ ನಂಬಿಕೆಗಳ ಜತೆ ನಿಂತಿದ್ದ ಅನೇಕರಿಗೆ ಇದು ಆಘಾತಕಾರಿ ಸಮಯವಾಗಿತ್ತು' ಎಂದು ದೇವೇಗೌಡರು ಭಾವುಕರಾಗಿ ಹೇಳಿದರು.

ಡಿಸಿಪಿ ಮುತ್ತುರಾಜು ವಿರುದ್ಧ ಸ್ನೇಹಮಯಿ ಕೃಷ್ಣ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಆಣತಿಯಂತೆ ಮೈಸೂರು ನಗರ ಡಿಸಿಪಿ ಮುತ್ತುರಾಜು ನನ್ನ ವಿರುದ್ಧ ಕೆ.ಆರ್. ಠಾಣೆಯಲ್ಲಿ ದುರುದ್ದೇಶಪೂರ್ವಕ ಪ್ರಕರಣ ದಾಖಲಿಸಿ ನನ್ನ ಬಂಧನಕ್ಕೆ ಮುಂದಾಗಿದ್ದು, ಅವರ ಮೇಲೆ ಕ್ರಮ ಜರುಗಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಮಂಗಳವಾರ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ನೀಡಿದ್ದಾರೆ.

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಿಗೂ ಇದೇ ದೂರು ಸಲ್ಲಿಸಿದ್ದಾರೆ.

'ಶಾಸ್ತ್ರೀಯ ಕನ್ನಡ ಕೇಂದ್ರದ ಬಲವರ್ಧನೆಗೆ ಕೇಂದ್ರ ಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮೈಸೂರಿನಲ್ಲಿರುವ ಕೇಂದ್ರ ಭಾರತೀಯ ಭಾಷಾ ಸಂಸ್ಥೆಯ (ಸಿಐಐಎಲ್) ಅಧೀನದಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಪ್ರತ್ಯೇಕಿಸಲಾಗುತ್ತದೆ. ಜತೆಗೆ, ಈ ಸಂಸ್ಥೆಗೆ ಕೇಂದ್ರ ಸರ್ಕಾರದ ಎಲ್ಲ ಆರ್ಥಿಕ ಸಹಕಾರ ಒದಗಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭರವಸೆ ನೀಡಿದ್ದಾರೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದೊಂದಿಗೆ ಸಚಿವರು ಸಂಸತ್ ಭವನದಲ್ಲಿ ಸಭೆ ನಡೆಸಿ ಈ ಮಾಹಿತಿ ನೀಡಿದ್ದಾರೆ ಎಂದು ಬಿಳಿಮಲೆ ಮಾಹಿತಿ ನೀಡಿದರು. 'ಕೇಂದ್ರ ಭಾರತೀಯ ಭಾಷಾ ಸಂಸ್ಥೆಯ ಉದ್ದೇಶವನ್ನು ಅರ್ಥಪೂರ್ಣವಾಗಿಸಲು ಇನ್ನಷ್ಟು ತಂತ್ರಜ್ಞಾನಸ್ನೇಹಿಯಾಗಬೇಕಾದ ಅನಿವಾರ್ಯ ಇದೆ. ಹೀಗಾಗಿ, ಕೇಂದ್ರ ಸರ್ಕಾರವು ಬೆಂಗಳೂರಿನಲ್ಲಿ ಈ ಸಂಸ್ಥೆಯ ತಂತ್ರಜ್ಞಾನ ಕಚೇರಿ ತೆರೆಯಲು ಸಚಿವರು ಸೂಚಿಸಿದ್ದಾರೆ' ಎಂದರು.

ಕನ್ನಡ ಭಾಷಾ ಕಲಿಕಾ ಕಾಯ್ದೆಯ ಅನುಸಾರ ಕನ್ನಡವನ್ನು ಕಡ್ಡಾಯವಾಗಿ ಕಲಿಸಲು ರಾಜ್ಯದ ಎಲ್ಲಾ ಕೇಂದ್ರ ಪಠ್ಯಕ್ರಮದ ಶಾಲೆಗಳಿಗೆ ವಾರದೊಳಗೆ ನಿರ್ದೇಶನ ನೀಡುವುದಾಗಿಯೂ ಪ್ರಧಾನ್ ಭರವಸೆ ನೀಡಿದ್ದಾರೆ ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ನಿಯೋಗವು ದೆಹಲಿಯ ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ಆಡಳಿತ ಸಮಿತಿಯ ಸದಸ್ಯರೊಂದಿಗೆ ಸಂವಾದ ನಡೆಸಿತು.

ಸಂಸದರ ಜತೆ ಸಮಾಲೋಚನೆ: ನಿಯೋಗವು ಕೇಂದ್ರ ಸರ್ಕಾರದ ಸಚಿವರು, ಸಂಸದರನ್ನು ಭೇಟಿ ಮಾಡಿ ಪ್ರಾದೇಶಿಕ ಭಾಷೆಗಳ ಜ್ವಲಂತ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟಿತು. ನಿಯೋಗದ ಪ್ರಯತ್ನಕ್ಕೆ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯವನ್ನು ಪ್ರತಿನಿಧಿಸುವ ಎಲ್ಲ ಸಂಸದರು ಪಕ್ಷಾತೀತವಾಗಿ ಬೆಂಬಲ ವ್ಯಕ್ತಪಡಿಸಿದ್ದು, ಈ ಕುರಿತಂತೆ ಸಂಘಟಿತ ಹೋರಾಟ ಮಾಡಲಿದ್ದಾರೆ ಎಂದು ಬಿಳಿಮಲೆ ತಿಳಿಸಿದರು.

ನಿಯೋಗದಲ್ಲಿ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಸಂಸದ ಎಲ್‌.ಹನುಮಂತಯ್ಯ, ಶಿಕ್ಷಣ ತಜ್ಞರಾದ ಹಿ.ಚಿ.ಬೋರಲಿಂಗಯ್ಯ, ಸಾಹಿತಿಗಳಾದ ಅಗ್ರಹಾರ ಕೃಷ್ಣಮೂರ್ತಿ, ಶಂಕರ ಹಲಗತ್ತಿ, ಪ್ರಾಧಿಕಾರದ ಸದಸ್ಯರಾದ ವಿ.ಪಿ. ನಿರಂಜನಾರಾಧ್ಯ, ಎ.ಬಿ. ರಾಮಚಂದ್ರಪ್ಪ, ದಾಕ್ಷಾಯಿಣಿ ಹುಡೇದ, ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಮತ್ತು ಅಧ್ಯಕ್ಷರ ಆಪ್ತಕಾರ್ಯದರ್ಶಿ ಟಿ.ಎಸ್. ಫಣಿಕುಮಾರ್ ಇದ್ದರು.

ಚಿತ್ರಾವಳಿ



ಕೆಎಸ್‌ಆರ್‌ಟಿಸಿ ಕನ್ನಡ ಕ್ರಿಯಾ ಸಮಿತಿ ಬೆಂಗಳೂರು ಕೇಂದ್ರೀಯ ವಿಭಾಗ ಮಂಗಳವಾರ ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಕನ್ನಡ ಪರ ಹೋರಾಟಗಾರ ಮ.ಚಂದ್ರಶೇಖರ್, ಲೇಖಕಿ ಎಚ್‌.ಆರ್.ಸುಜಾತ, ಸಾಹಿತಿ ಬೇಲೂರು ರಾಮಮೂರ್ತಿಅವರಿಗೆ 'ಕನ್ನಡಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು



ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು 'ಅನ್ವೇಷಣೆ' ಸಾಹಿತ್ಯ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಮಂಗಳವಾರ ಬಿಡುಗಡೆ ಮಾಡಿದರು. ಕವಿ ಮೂಡ್ನಾಕೂಡು ಚಿನ್ನಸ್ವಾಮಿ, ಪತ್ರಿಕೆ ಸಂಪಾದಕ ಆರ್‌.ಜಿ. ಹಳ್ಳಿ ನಾಗರಾಜ, ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಉಪಸ್ಥಿತರಿದ್ದರು

ವಕ್ಫ್ ಆಸ್ತಿ : ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕ್ಫ್ ಆಸ್ತಿಗಳ ಒತ್ತುವರಿದಾರರಿಗೆ ನೀಡಿದ್ದ ನೋಟಿಸ್‌ಗಳನ್ನು ಹಿಂಪಡೆದ ರಾಜ್ಯ ಸರ್ಕಾರದ ಆದೇಶವನ್ನು ರದ್ದುಪಡಿಸಬೇಕು. ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಎಲ್ಲ ಆಸ್ತಿಗಳ ಸಂರಕ್ಷಣೆ ಮಾಡಬೇಕು ಮತ್ತು ವಕ್ಫ್ ಆಸ್ತಿ ಒತ್ತುವರಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಬೆಂಗಳೂರಿನ ಸೈಯದ್ ಎಜಾಜ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಈ ಅರ್ಜಿ ರಾಜಕೀಯ ಪ್ರೇರಿತ ಮತ್ತು ಪ್ರಚಾರಕ್ಕಾಗಿ ಸಲ್ಲಿಸಿದಂತಿದೆ. ಅರ್ಜಿದಾರರ ಪ್ರಾಮಾಣಿಕತೆ ಪ್ರಶ್ನಾರ್ಹವಾಗಿದೆ. ವಿಚಾರಣೆಗೆ ಅರ್ಹವಾದ ಯಾವ ಅಂಶಗಳು ಈ ಅರ್ಜಿಯಲ್ಲಿ ಇಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಮೇನ್ ಗಾರ್ಡ್ ರಸ್ತೆಯಲ್ಲಿ ಕುಂಟುತ್ತಾ ಸಾಗಿದ ವೈಟ್‌ಟಾಪಿಂಗ್, ಕೊಳವೆ ಮಾರ್ಗದ ಕಾಮಗಾರಿ

ಕಳೆಗುಂದಿದ ಕಮರ್ಷಿಯಲ್ ಸ್ಟ್ರೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ವಾಣಿಜ್ಯ ಕೇಂದ್ರದಲ್ಲಿ ಒಂದಾದ ಕಮರ್ಷಿಯಲ್ ಸ್ಟ್ರೀಟ್‌ಗೆ ಸಂಪರ್ಕ ಕಲ್ಪಿಸುವ ಮೇನ್ ಗಾರ್ಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಮತ್ತು ಕೊಳವೆ ಮಾರ್ಗದ ಕಾಮಗಾರಿ ಕುಂಟುತ್ತಾ ಸಾಗಿದೆ. ಇದರಿಂದ, ವ್ಯಾಪಾರ–ವಹಿವಾಟಿಗೆ ಪೆಟ್ಟು ಬಿದ್ದಿದ್ದು, ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆಯ ಸಂಭ್ರಮ ಮಂಕಾಗಿದೆ!

ರಸ್ತೆ ದುಃಸ್ಥಿತಿಯಿಂದ ವ್ಯಾಪಾರಿಗಳು, ಖರೀದಿಗೆ ಬರುವ ಗ್ರಾಹಕರು, ಸ್ಥಳೀಯ ನಿವಾಸಿಗಳು ಹೈರಾಣಾಗಿದ್ದಾರೆ. ರಸ್ತೆಯ ಒಂದು ಬದಿಯನ್ನು ಅಗೆದು ಮಣ್ಣನ್ನು ಮುಖ್ಯರಸ್ತೆಯಲ್ಲಿ ಸುರಿಯಲಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಅಗೆದಿರುವುದರಿಂದ ವ್ಯಾಪಾರಿಗಳಿಗೂ, ಸಂಚರಿಸುವವರಿಗೂ ದೂಳಿನ ಮಜ್ಜನವಾಗುತ್ತಿದೆ.

'ಇಲ್ಲಿ ಜವಳಿ, ಪಾದರಕ್ಷೆಗಳು, ಮಹಿಳೆಯರ ಅಲಂಕಾರಿಕ ವಸ್ತುಗಳ ಮಳಿಗೆಗಳಿವೆ. ಕಾಮಗಾರಿಯಿಂದಾಗಿ ಪ್ರತಿನಿತ್ಯ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಒಂದಿಲ್ಲೊಂದು ಅಪಘಾತಗಳಿಗೆ ಆಸ್ಪದವಾಗಿದೆ. ಕಾಮಗಾರಿ ಮುಗಿಸಲು ಬಿಬಿಎಂಪಿ ಅಧಿಕಾರಿಗಳನ್ನು ಕೇಳಿದರೆ, ಜಲಮಂಡಳಿಯತ್ತ ಬೊಟ್ಟು ಮಾಡುತ್ತಾರೆ' ಎಂದು ವ್ಯಾಪಾರಿಗಳು ದೂರಿದರು.



ಮೇನ್ ಗಾರ್ಡ್ ರಸ್ತೆಯಲ್ಲಿನ ಪೈಪ್ ಅಳವಡಿಕೆ ಕಾಮಗಾರಿ
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ವ್ಯಾಪಾರ ಕುಸಿದಿದೆ. ವಾಹನಗಳ ಸಂಚಾರದಿಂದ ಹರಡಿರುವ ದೂಳು ಸ್ವಚ್ಛಗೊಳಿಸಲು ನೌಕರನ ನಿಯೋಜಿಸಿದ್ದೇನೆ. ತಿಂಗಳಿಗೆ ಪ್ರತಿ ಮಳಿಗೆಗೆ ₹80 ಸಾವಿರದಿಂದ ₹1 ಲಕ್ಷ ಬಾಡಿಗೆ ಇದೆ. ಕಾರ್ಮಿಕರ ವೇತನ, ಮಳಿಗೆ ಬಾಡಿಗೆ ನೀಡಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಬಟ್ಟೆ ಅಂಗಡಿ ವ್ಯಾಪಾರಿ ಅಬ್ದುಲ್ ಮತೀನ್ ಅಳಲು ತೋಡಿಕೊಂಡರು.


'ಬಿಬಿಎಂಪಿ ಮತ್ತು ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಸಿಬ್ಬಂದಿ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ರಸ್ತೆಯ ಸ್ಥಿತಿ ಹೀಗಿರುವುದರಿಂದ ಖರೀದಿಗೆ ಬರುವ ಗ್ರಾಹಕರ ಸಂಖ್ಯೆ ವಿರಳವಾಗಿದೆ. ಈಗ ಕ್ರಿಸ್‌ಮಸ್, ಹೊಸ ವರ್ಷಾಚರಣೆ ವೇಳೆ ವಾರಾಂತ್ಯ ಸಾವಿರಾರು ಗ್ರಾಹಕರನ್ನು ಸೆಳೆಯುತ್ತಿದ್ದ ಈ ಮಾರುಕಟ್ಟೆ ಈಗ ದಯನೀಯ ಸ್ಥಿತಿಯಲ್ಲಿದೆ' ಎಂದು ವಿಷಾದಿಸಿದರು.

'ವೈಟ್ ಟಾಪಿಂಗ್ ಕಾಮಗಾರಿ ನಡೆದಿದೆ. ಜಲಮಂಡಳಿಯಿಂದ ಒಳಚರಂಡಿ ಕೊಳವೆ ಜೋಡಿಸುವ ಕಾಮಗಾರಿ ನಡೆಯುತ್ತಿದೆ. ಇನ್ನೆರಡು ದಿನಗಳಲ್ಲಿ ಪೂರ್ಣವಾಗಲಿದೆ' ಎಂದು ಮಂಡಳಿಯ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ತಿಳಿಸಿದರು.

ವ್ಯಾಪಾರಿಗಳು ಏನಂತಾರೆ!



ರಸ್ತೆ ಕಾಮಗಾರಿಯಿಂದಾಗಿ ನಿತ್ಯ ದೂಳಿನ ಸಮಸ್ಯೆ ಇದೆ. ವ್ಯಾಪಾರಿಗಳು ನಾನಾ ರೋಗಗಳಿಂದ ಬಳಲುತ್ತಿದ್ದಾರೆ. ಶೀಘ್ರ ಕಾಮಗಾರಿ ಮುಗಿಸಲು ಶಾಸಕ ರಿಜ್ವಾನ್ ಅರ್ಷದ್ ಅವರು ಕ್ರಮವಹಿಸಬೇಕು.
ಅಬ್ದುಲ್ ಮತೀನ್, ಬಟ್ಟೆ ವ್ಯಾಪಾರಿ



ರಸ್ತೆ ಅಗೆದು ಹಾಗಿಯೇ ಬಿಡಲಾಗಿದೆ. ಇದರಿಂದ, ವ್ಯಾಪಾರಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಸ್ಥಳೀಯ ಶಾಸಕರು ಕಷ್ಟ ಆಲಿಸುತ್ತಿಲ್ಲ. ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸಬೇಕು.
ಅಬ್ದುಲ್ ರೆಹಮಾನ್, ಜ್ಯೂಸ್ ಅಂಗಡಿ ಮಾಲೀಕ

ಬುಧವಾರ, ಡಿಸೆಂಬರ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 349 | ಪುಟ 14

www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಟಿಪ್ಪಣಿ ಮಾಡಿಕೊಳ್ಳಲು ಗೂಗಲ್‌ನ ಹೊಸ ಆ್ಯಪ್‌ವೊಂದು ಸಿದ್ಧವಾಗಿದೆ. 'ನೋಟ್‌ಬುಕ್‌ಎಲ್‌ಎಂ' ನಿಮ್ಮ ಬರವಣಿಗೆಯ ಹಲವು ಅಗತ್ಯಗಳನ್ನು ಪೂರೈಸುತ್ತದೆ.



ಆಳ-ಅಗಲ ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯಲ್ಲೇನಿದೆ?

ಒತ್ತುವರಿ ತೆರವು ಅಧಿಕಾರ ತಹಶೀಲ್ದಾರ್‌ಗೆ 8

ಎಸ್‌ಐಟಿ ತಂಡ ಸ್ಥಿರೀಕರಿಸಿದ ಹೈಕೋರ್ಟ್ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,684	24,336	₹80,340 (ಬೆಂಗಳೂರು)	₹94,700 (ಬೆಂಗಳೂರು)	84.91

'ಇಂಡಿಯಾ' ಮೈತ್ರಿಕೂಟದ ತೀವ್ರ ವಿರೋಧ: ಮತ ವಿಭಜನೆಯ ಆಧಾರದ ಮೇಲೆ ಮಸೂದೆ ಮಂಡನೆ

ಒಂದು ಚುನಾವಣೆ: ಚರ್ಚೆಗೆ ಮಣೆ


ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ತೀವ್ರ ವಿರೋಧದ ನಡುವೆಯೇ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಅವಕಾಶ ಕಲ್ಪಿಸುವ ಎರಡು ಮಸೂದೆಗಳನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿತು.

'ಮಸೂದೆಯು ಒಕ್ಕೂಟ ವ್ಯವಸ್ಥೆಯ ವಿರೋಧಿ ಹಾಗೂ ಸರ್ವಾಧಿಕಾರಕ್ಕೆ ಅನುವು ಮಾಡಿಕೊಡುತ್ತದೆ' ಎಂದು ವಿಪಕ್ಷಗಳ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರೆ, 'ಪ್ರಸ್ತಾಪಿತ ಮಸೂದೆಯು ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸುವುದಿಲ್ಲ' ಎಂದು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಸಮರ್ಥಿಸಿಕೊಂಡರು.

ವಿವಾದಿತ ಮಸೂದೆಯನ್ನು ಮಂಡಿಸಲೇಬಾರದು ಎಂದು ವಿಪಕ್ಷ ಸದಸ್ಯರು ಹಟ ಹಿಡಿದರು. ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಪರಾಮರ್ಶೆಗೆ ಕಳುಹಿಸಲು ಸರ್ಕಾರ ಇಂಗಿತ ವ್ಯಕ್ತಪಡಿಸಿತು.

'ಮಸೂದೆಯನ್ನು ಈಗ ಸಮಿತಿಗೆ ಕಳುಹಿಸೋಣ. ಸಮಿತಿಯು ವಿಸ್ತೃತ ಚರ್ಚೆ ನಡೆಸಲಿದೆ. ಆ ಬಳಿಕ ಮಸೂದೆ ಸದನಕ್ಕೆ ಬರಲಿದೆ. ಆಗ ಮಸೂದೆಯ ಸಾಧಕ-ಬಾಧಕಗಳ ಬಗ್ಗೆ ಎಷ್ಟು ದಿನ ಬೇಕಾದರೂ ಚರ್ಚೆ ನಡೆಸೋಣ' ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ವಿರೋಧ ಪಕ್ಷಗಳ ಸದಸ್ಯರನ್ನು ಮನವೊಲಿಸಲು ಪ್ರಯತ್ನಿಸಿದರು. ಅದಕ್ಕೆ ಒಪ್ಪದ ವಿಪಕ್ಷ ಸದಸ್ಯರು ಮತ ವಿಭಜನೆಗೆ ಪಟ್ಟು ಹಿಡಿದರು. ಮಸೂದೆಯನ್ನು ಸದನದಲ್ಲಿ ಮಂಡಿಸಬಹುದೇ ಎಂದು ಪ್ರಶ್ನಿಸಿ ಮತಕ್ಕೆ ಹಾಕಲಾಯಿತು. ಪರವಾಗಿ 269 ಮತಗಳು ಹಾಗೂ ವಿರುದ್ಧವಾಗಿ 198 ಮತಗಳು ಬಿದ್ದವು.



ಅಕಾಲಿದಳ	1
ಎಎಸ್‌ಪಿ (ಕಾನ್ಶಿ ರಾಮ್)	1
ಎಐಎಂಐಎಂ	1
ವೈಎಸ್‌ಆರ್ ಕಾಂಗ್ರೆಸ್	4
ವಿಒಟಿಟಿಪಿ	1
ಝಡ್‌ಪಿಎಂ	1
ಪಕ್ಷೇತರರು	4



ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕಾಗಿ ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವ, 'ಸಂವಿಧಾನ (129ನೇ ತಿದ್ದುಪಡಿ) ಮಸೂದೆ-2024' ಅಂಗೀಕಾರಗೊಳ್ಳಲು ಮೂರನೇ ಎರಡರಷ್ಟು ಬಹುಮತ ಬೇಕು. ಆದರೆ, ಮಸೂದೆ ಮಂಡನೆ ಪರವಾಗಿ ಬಿದ್ದ ಮತಗಳ ಪ್ರಮಾಣ, ಮೂರನೇ ಎರಡರಷ್ಟು ಬಹುಮತಕ್ಕಿಂತ ತುಂಬಾ ಕಡಿಮೆ ಇದೆ.

ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆಗಳ (ತಿದ್ದುಪಡಿ) ಮಸೂದೆ-2024 ಲೋಕಸಭೆಯಲ್ಲಿ ಮಂಗಳವಾರ ಮಂಡಿಸಲಾದ ಮತ್ತೊಂದು ಮಸೂದೆ. ಕೇಂದ್ರಾಡಳಿತ ಪ್ರದೇಶಗಳಲ್ಲೂ ಏಕಕಾಲಕ್ಕೆ ಚುನಾವಣೆ ನಡೆಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಈ ಮಸೂದೆಯ ಅಂಗೀಕಾರಕ್ಕೆ ಸರಳ ಬಹುಮತ ಸಾಕು.

ಮಸೂದೆಗಳ ಮಂಡನೆ ಸಂದರ್ಭದಲ್ಲಿ ಪ್ರಧಾನಿ ಮೋದಿ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹಾಜರಿರಲಿಲ್ಲ.

11ನೇ ಪುಟ ನೋಡಿ

ಈ ಮಸೂದೆಗೆ ಕೆಲವು ದಿನಗಳ ಹಿಂದೆ ಸಂಪುಟದಲ್ಲಿ ಅಂಗೀಕಾರ ನೀಡಲಾಗಿತ್ತು. ಆಗ ಪ್ರಧಾನಿಯವರು ವಿಸ್ತೃತ ಚರ್ಚೆಗಾಗಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಬೇಕು ಎಂದು ಹೇಳಿದ್ದರು. ಜೆಪಿಸಿಯಲ್ಲಿ ವಿವರವಾದ ಚರ್ಚೆಗಳು ನಡೆಯಲಿವೆ. ಜೆಪಿಸಿಯ ವರದಿಯನ್ನು ಸಂಪುಟ ಅನುಮೋದಿಸುತ್ತದೆ. ಮತ್ತೆ ಸದನದಲ್ಲಿ ಮಸೂದೆ ಬಗ್ಗೆ ಚರ್ಚೆ ನಡೆಯಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಈ ಮಸೂದೆ ಸಂವಿಧಾನ ಹಾಗೂ ದೇಶದ ನಾಗರಿಕರ ಮತದಾನದ ಹಕ್ಕುಗಳಿಗೆ ವಿರುದ್ಧವಾಗಿದೆ. ಈ ಮಸೂದೆ ಚುನಾವಣಾ ಆಯೋಗಕ್ಕೆ ಅಸಾಂವಿಧಾನಿಕ ಅಧಿಕಾರ ನೀಡುತ್ತದ. ಚುನಾವಣೆ ನಡೆಸಲು ರಾಷ್ಟ್ರಪತಿ ಅವರಿಗೆ ಸಲಹೆ ನೀಡುವ ಅಧಿಕಾರವನ್ನು ಆಯೋಗಕ್ಕೆ ನೀಡಲಾಗಿದೆ

ಗೌರವ್ ಗೊಗೊಯ್, ಲೋಕಸಭೆಯ ವಿರೋಧ ಪಕ್ಷದ ಉಪನಾಯಕ

ಅಂಗೀಕಾರಕ್ಕೆ ಸದನದಲ್ಲಿ ಬೇಕು ಮೂರನೇ ಎರಡರಷ್ಟು ಬಹುಮತ

ಮಸೂದೆಗಳಲ್ಲಿ ಒಂದಾದ 'ಸಂವಿಧಾನ (129 ನೇ ತಿದ್ದುಪಡಿ) ಮಸೂದೆ- 2024' ಅಂಗೀಕಾರಕ್ಕೆ ಮೂರನೇ ಎರಡರಷ್ಟು ಬಹುಮತ ಬೇಕಿದೆ. ಹೀಗಾಗಿ, ಮೂರು ಪ್ರಮುಖ ವಿರೋಧ ಪಕ್ಷಗಳಾದ ಡಿಎಂಕೆ, ಸಮಾಜವಾದಿ ಪಕ್ಷ ಅಥವಾ ತೃಣಮೂಲ ಕಾಂಗ್ರೆಸ್‌ಗೆ ಮನವರಿಕೆ ಮಾಡಿಕೊಟ್ಟು ಬೆಂಬಲ ಪಡೆಯದಿದ್ದರೆ ಸಂವಿಧಾನ ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆಯುವುದು ಕೇಂದ್ರ ಸರ್ಕಾರಕ್ಕೆ ಕಷ್ಟವಾಗಬಹುದು. ಆದರೆ, ಈ ಪಕ್ಷಗಳು ಈಗಾಗಲೇ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿವೆ.

ಲೋಕಸಭೆಯಲ್ಲಿ ಎನ್‌ಡಿಎ 293 ಸದಸ್ಯರ ಬಲ (ಸ್ಪೀಕರ್ ಸೇರಿ) ಹೊಂದಿದೆ. ಪ್ರತಿಪಕ್ಷ ಇಂಡಿಯಾ ಮೈತ್ರಿಕೂಟವು 236 ಸಂಸದರ ಬೆಂಬಲ (ಮೂವರು ಪಕ್ಷೇತರ ಸದಸ್ಯರು ಸೇರಿ) ಹೊಂದಿದೆ. ಒಂಬತ್ತು ಸಂಸದರನ್ನು ಹೊಂದಿರುವ ಆರು ಪಕ್ಷಗಳು ಯಾವುದೇ ಮಿತ್ರಕೂಟದಲ್ಲಿ ಗುರುತಿಸಿಕೊಂಡಿಲ್ಲ. ಇದರಲ್ಲಿ ಅಕಾಲಿದಳ, ಎಐಎಂಐಎಂ ಮತ್ತು ಎಎಸ್‌ಪಿ (ಕಾನ್ಶಿ ರಾಮ್) ಸಂಸದರು ಮಸೂದೆಗಳನ್ನು ವಿರೋಧಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

11ನೇ ಪುಟ ನೋಡಿ



ಅಬ್ಬಾ ಏನ್ ಚಳಿ...

ಚಳಿ ಹೆಚ್ಚಿರುವ ಕಾರಣ ವಿಜಯಪುರದಲ್ಲಿ ಜನರು ಮಂಗಳವಾರ ನಸುಕಿನಲ್ಲಿ ಬೆಂಕಿ ಕಾಯಿಸಿ, ಮೈ ಬೆಚ್ಚಗೆ ಮಾಡಿಕೊಂಡರು ಚಿತ್ರ/ಸಂಜೀವ ಅಕ್ಕಿ

ರಾಜ್ಯದಲ್ಲಿ ಹೆಚ್ಚಿದ ಶೀತದ ಅಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಶೀತದ ಅಲೆ ಕಾಣಿಸಿಕೊಳ್ಳುತ್ತಿರುವುದರಿಂದ ಚಳಿಯ ತೀವ್ರತೆ ಹೆಚ್ಚುತ್ತಿದ್ದು, ಬುಧವಾರವೂ ಮೂರು ಜಿಲ್ಲೆಗಳಿಗೆ ಶೀತದ ಅಲೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ವಿಜಯಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಬುಧವಾರವೂ ಶೀತ ಅಲೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಎರಡು ದಿನಗಳ ಬಳಿಕ ಕನಿಷ್ಠ ತಾಪಮಾನ ಹೆಚ್ಚಳವಾಗುವ ಸಂಭವವಿದೆ. ಮಂಗಳವಾರ ರಾಜ್ಯದ ವಿವಿಧೆಡೆ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶ ಕುಸಿತವಾಗಿದೆ. ಸಾಮಾನ್ಯಕ್ಕಿಂತ 3ರಿಂದ 5 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಕಡಿಮೆಯಾದ್ದರಿಂದ ಚಳಿ ಹೆಚ್ಚಳವಾಗಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಕನಿಷ್ಠ ಉಷ್ಣಾಂಶವು ವಿಜಯ ಪುರದಲ್ಲಿ 8 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾದರೆ, ಬೀದರ್‌ನಲ್ಲಿ 8.2 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು. ರಾಜ್ಯದ 27 ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶವು 15 ಡಿಗ್ರಿ ಸೆಲ್ಸಿಯಸ್ ಒಳಗೆ ವರದಿಯಾಗಿದೆ.



ಗುರುವಾರ ಹಾಗೂ ಶುಕ್ರವಾರ ರಾಜ್ಯದ ಕೆಲವೆಡೆ ತುಂತುರು ಮಳೆಯಾಗುವ ಸಾಧ್ಯತೆಯಿದೆ. ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ ತುಂತುರು ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬಡಾವಣೆ ನಿರ್ಮಾಣಕ್ಕೆ ಹೊಸ ಕಾನೂನು

ಸುವರ್ಣ ವಿಧಾನಸೌಧ (ಬೆಂಗಳೂರು): ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಬಡಾವಣೆ ನಿರ್ಮಿಸಲು ಕೆಲ ತಿದ್ದುಪಡಿ ಒಳಗೊಂಡ ಹೊಸ ಕಾನೂನು ಜಾರಿಗೆ ತರಬೇಕು ಎಂದು ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಶಿಫಾರಸು ಮಾಡಿದೆ. 8

ನೀಟ್ ಸ್ವರೂಪ ಶೀಘ್ರ ನಿರ್ಧಾರ


ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿನ ಪರೀಕ್ಷೆಯನ್ನು (ನೀಟ್) ಆನ್‌ಲೈನ್ ಅಥವಾ ಭೌತಿಕ ವಿಧಾನದಲ್ಲಿ ನಡೆಸಬೇಕೇ ಎಂಬ ಬಗ್ಗೆ ಶೀಘ್ರವೇ ನಿರ್ಧರಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ಹೇಳಿದ್ದಾರೆ.

ಪರೀಕ್ಷೆಯನ್ನು ಯಾವ ವಿಧಾನದಲ್ಲಿ ನಡೆಸಬೇಕು ಎಂಬ ಬಗ್ಗೆ ಶಿಕ್ಷಣ ಮತ್ತು ಆರೋಗ್ಯ ಸಚಿವಾಲಯಗಳು ಸಮಾಲೋಚನೆ ನಡೆಸುತ್ತಿವೆ. ಮುಂದಿನ ವರ್ಷದಿಂದಲೇ ಇದು ಜಾರಿಗೆ ಬರಲಿದೆ ಎಂದು ಹೇಳಿದ್ದಾರೆ.

ಶಿಕ್ಷಣ ಸಚಿವಾಲಯವು ಆರೋಗ್ಯ ಸಚಿವಾಲಯ ದೊಂದಿಗೆ ಎರಡು ಸುತ್ತಿನ ಮಾತುಕತೆ ನಡೆಸಿದೆ. ಪ್ರಸ್ತುತ, 'ನೀಟ್' ಅನ್ನು ಭೌತಿಕವಾಗಿ ನಡೆಸಲಾಗುತ್ತಿದ್ದು, ಬಹು ಆಯ್ಕೆ ಪ್ರಶ್ನೆಗಳಿಗೆ ಒಎಂಆರ್ ಶೀಟ್‌ನಲ್ಲಿ ವಿದ್ಯಾರ್ಥಿಗಳು ಉತ್ತರ ಬರೆಯಬೇಕಿದೆ.

11ನೇ ಪುಟ ನೋಡಿ

'ಎನ್‌ಟಿಎ ನೇಮಕಾತಿ ಪರೀಕ್ಷೆ ನಡೆಸದು'



ಮುಂದಿನ ವರ್ಷದಿಂದ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಯಾವುದೇ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದಿಲ್ಲ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಪ್ರವೇಶ ಪರೀಕ್ಷೆಗಳನ್ನು ಮಾತ್ರ ನಡೆಸಲಿದೆ ಎಂದು ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಮುಂದಿನ ವರ್ಷ ಎನ್‌ಟಿಎ ಅನ್ನು ಪುನರ್ ರಚಿಸ ಲಾಗುವುದು. ಕನಿಷ್ಠ 10 ಹೊಸ ಹುದ್ದೆಗಳನ್ನು ಸೃಜಿಸಲಾ ಗುವುದಲ್ಲದೇ, ಕಾರ್ಯವೈಖರಿಯಲ್ಲಿಯೂ ಬದಲಾವಣೆ ಮಾಡಲಾಗುವುದು. 'ಸಿಯುಇಟಿ-ಯುಜಿ ಅನ್ನು ವರ್ಷದಲ್ಲಿ ಒಂದು ಬಾರಿ ಮಾತ್ರ ನಡೆಸಲಾಗುವುದು' ಎಂದಿದ್ದಾರೆ.

'ಕೆಲ ಪಠ್ಯಪುಸ್ತಕ ಬೆಲೆ ಕಡಿತ'

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ)ಯ ಕೆಲ ತರಗತಿಗಳ ಪಠ್ಯಪುಸ್ತಕಗಳ ಬೆಲೆಯನ್ನು ಕಡಿತಗೊಳಿಸಲಾಗುತ್ತಿದ್ದು, ಮುಂದಿನ ವರ್ಷದಿಂದ ಇದು ಅನ್ವಯವಾಗಲಿದೆ ಎಂದು ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

11ನೇ ಪುಟ ನೋಡಿ

ವ್ಯವಸ್ಥೆಯ ಲೋಪ, 'ಔಷಧ ಲಾಬಿ'ಗೆ ಕಡಿವಾಣ ಅಗತ್ಯ: ದಿನೇಶ್ ಗುಂಡೂರಾವ್

ಬಾಣಂತಿಯರ ಸಾವು: ಉನ್ನತ ತನಿಖೆಗೆ ಒಲವು

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಐವರು ಬಾಣಂತಿಯರು ಮೃತಪಟ್ಟ ಪ್ರಕರಣದ ತನಿಖೆಯನ್ನು ನ್ಯಾಯಾಂಗ ಅಥವಾ ವಿಶೇಷ ತನಿಖಾ ತಂಡಕ್ಕೆ ವಹಿಸಲು ಸರ್ಕಾರ ಸಿದ್ಧವಿದೆ. ಮುಖ್ಯಮಂತ್ರಿ ಜತೆ ಚರ್ಚಿಸಿದ ನಂತರ ನಿರ್ಧಾರ ಪ್ರಕಟಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಈ ಕುರಿತು ವಿಧಾನಪರಿಷತ್‌ನಲ್ಲಿ ನಡೆದ ವಿಶೇಷ ಚರ್ಚೆಯಲ್ಲಿ ಭಾಗವಹಿಸಿ, ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಬಾಣಂತಿಯರಲ್ಲಿ ಹಿಮೋಡಯಾಲಿಸಿಸ್ ಮತ್ತು ಮೂತ್ರಪಿಂಡದ ಸೋಂಕು ಕಾಣಿಸಿಕೊಂಡು, ತೀವ್ರ ಸ್ವರೂಪದ ಅನಾರೋಗ್ಯಕ್ಕೆ ಒಳಗಾಗಿದ್ದರು. ಬಾಣಂತಿಯರ



ದಿನೇಶ್ ಗುಂಡೂರಾವ್

ಸರಣಿ ಸಾವಿನ ಕಾರಣಗಳನ್ನು ಅರಿಯಲು ಎರಡು ಸಮಿತಿಗಳು ಈಗಾಗಲೇ ತನಿಖೆ ನಡೆಸುತ್ತಿವೆ. 'ಪಶ್ಚಿಮ್ ಬಂಗಾ ಫಾರ್ಮಾಸ್ಯೂಟಿಕಲ್'ಎಂಬ ಕಂಪನಿ ಪೂರೈಸಿದ 'ರಿಂಗರ್ ಲ್ಯಾಕ್ಟೇಟ್ ಐ.ವಿ. ದ್ರಾವಣ'ದಿಂದಾಗಿ ಬಾಣಂತಿಯರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಅದರಿಂದಾಗಿಯೇ ಬಹು ಅಂಗಾಂಗಗಳ ವೈಫಲ್ಯವೂ ಸಂಭವಿಸಿದೆ ಎಂದು ವೈದ್ಯಕೀಯ ತಜ್ಞರು ಅಂದಾಜು ಮಾಡಿದ್ದಾರೆ ಎಂದರು.

ವ್ಯವಸ್ಥೆಯ ವೈಫಲ್ಯ: ಬಾಣಂತಿಯರ ಸಾವು ಪ್ರಕರಣಗಳು ರಾಜ್ಯದ ಇತರೆ ಜಿಲ್ಲೆಗಳಲ್ಲೂ ನಡೆದಿರುವುದು ಗಮನಕ್ಕೆ ಬಂದಿದೆ. ಬಳ್ಳಾರಿ ಪ್ರಕರಣ ಗಮನಕ್ಕೆ ಬಂದ ತಕ್ಷಣ ರಾಜ್ಯದ ಔಷಧ ಗುಣಮಟ್ಟ ನಿಯಂತ್ರಣ ಪ್ರಾಧಿಕಾರ ಪರೀಕ್ಷೆ ನಡೆಸಿತ್ತು. ದ್ರಾವಣದಲ್ಲಿ ದೋಷ ಇರುವುದನ್ನು ದೃಢಪಡಿಸಿತ್ತು. ಆದರೆ, ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಪ್ರಾಧಿಕಾರ ಗುಣಮಟ್ಟದ ಖಾತ್ರಿ ನೀಡಿದೆ. ಇದುನಮ್ಮ ವ್ಯವಸ್ಥೆಯ ಲೋಪ. ಇಂತಹ ಲೋಪವನ್ನು ಬಳಸಿಕೊಳ್ಳುವ 'ಔಷಧ ಲಾಬಿ' ನ್ಯಾಯಾಲಯದಿಂದಲೂ ಸುಲಭವಾಗಿ ಹೊರಬರುತ್ತಾರೆ. ಕ್ರಮ ತೆಗೆದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಮೊದಲು ಪ್ರಯೋಗಾಲಯಗಳ ಮೇಲೆ ನಿಯಂತ್ರಣ ಸಾಧಿಸಬೇಕು ಎಂದು ಹೇಳಿದರು.



ಬಹುತೇಕ ಔಷಧ ಉತ್ಪಾದಕ ಕಂಪನಿಗಳು ಉತ್ತರ ಭಾರತದಲ್ಲಿ ನೆಲೆಸಿವೆ. ತಾವು ಉತ್ಪಾದಿಸುವ ಉನ್ನತ ಗುಣಮಟ್ಟದ ಔಷಧಗಳನ್ನು ವಿದೇಶಕ್ಕೆ ಕಳುಹಿಸುತ್ತವೆ. ಕಡಿಮೆ ಗುಣಮಟ್ಟದ ಔಷಧಗಳನ್ನು ಭಾರತದ ರಾಜ್ಯಗಳಿಗೆ ಪೂರೈಸುತ್ತಾರೆ. ಇಂತಹ ಧೋರಣೆ ನಿಯಂತ್ರಣಕ್ಕೆ ಕೇಂದ್ರ ಮುಂದಾಗಬೇಕು. ಈ ಕುರಿತು ಪತ್ರವನ್ನೂ ಬರೆಯಲಾಗಿದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಸೇರಿದಂತೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ 21 ಸದಸ್ಯರು ಈ ಕುರಿತು ಆರೋಗ್ಯ ಸಚಿವರಿಗೆ ಸಲಹೆ, ಸೂಚನೆಗಳನ್ನು ನೀಡಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಜಾಮೀನು ಸಿಕ್ಕರೂ ಬಿಡುಗಡೆ ಇಲ್ಲ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣದ 6ನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನಿಗೆ ಜಾಮೀನು ಸಿಕ್ಕಿದ್ದರೂ ಭದ್ರತೆಗಾಗಿ ಅಗತ್ಯ ಬಾಂಡ್ ಒದಗಿಸಲು ಆಸ್ತಿ ಇಲ್ಲದ ಕಾರಣ ಜೈಲಿನಿಂದ ಹೊರಗೆ ಕರೆತರಲು ಸಾಧ್ಯವಾಗುತ್ತಿಲ್ಲ ಎಂದು ಕುಟುಂಬ ಸದಸ್ಯರು ಹೇಳಿದ್ದಾರೆ.

ಇಲ್ಲಿನ ಮಹಾವೀರ ನಗರ ನಿವಾಸಿ ಜಗದೀಶ್, ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕುಟುಂಬಕ್ಕೆ ಆತನೇ ಆಸರೆ. ಹೈಕೋರ್ಟ್ ಜಾಮೀನು ನೀಡಿದ್ದು ಭದ್ರತೆಗಾಗಿ ಇಬ್ಬರು ತಮ್ಮ ಆಸ್ತಿಯ ಪಹಣಿಯೊಂದಿಗೆ ಸಹಿ ಮಾಡಿದ ಬಾಂಡ್ ನೀಡಬೇಕಾಗಿದೆ. ಕುಟುಂಬ ಸದಸ್ಯರಲ್ಲಿ ಯಾರ ಬಳಿಯೂ ಆಸ್ತಿ ಇಲ್ಲ. ಜೊತೆಗೆ ಆಸ್ತಿ ಇರುವ ಸಂಬಂಧಿಕರೂ ಸಹಿ ಮಾಡಲು ಮುಂದೆ ಬರುತ್ತಿಲ್ಲ. ಅಂತೆಯೇ ನಟ ದರ್ಶನ್ ಅವರೇ ಯಾರ ಕಡೆಯಿಂದಾದರೂ ವ್ಯವಸ್ಥೆ ಮಾಡಬೇಕು ಎಂದು ಜಗದೀಶ್ ತಾಯಿ ಸುಲೋಚನಮ್ಮ ಮೊರೆ ಇಟ್ಟಿದ್ದಾರೆ.

'ಬೆಂಗಳೂರಿಗೆ ಹೋಗಿ ದರ್ಶನ್ ಭೇಟಿ ಮಾಡಿ ಬರಲೂ ನಮ್ಮ ಬಳಿ ಹಣ ಇಲ್ಲ. ದುಡಿಯುವ ಮಗ ಜೈಲು ಸೇರಿದ ನಂತರ ಕಷ್ಟ ಅನುಭವಿಸಿದ್ದೇವೆ. ದರ್ಶನ್ ಅವರೇ ಮಗನ ಬಿಡುಗಡೆಗೆ ವ್ಯವಸ್ಥೆ ಮಾಡಬೇಕು' ಎಂದು ಅವರು ಕೋರಿದ್ದಾರೆ.

'ನಾವು ಅವರಿವರಲ್ಲಿ ಮನವಿ ಮಾಡಿ ಭದ್ರತೆಗಾಗಿ ₹ 1 ಲಕ್ಷ ಹೊಂದಿಸಿ, 1 ಪಹಣಿ ವ್ಯವಸ್ಥೆ ಮಾಡಿಕೊಂಡು ಬೆಂಗಳೂರಿಗೆ ತೆರಳಿದ್ದೆವು. ಆದರೆ, ಇನ್ನೊಂದು ಪಹಣಿ ತರುವಂತೆ ಕೋರ್ಟ್ ಸಿಬ್ಬಂದಿ ವಾಪಸ್ ಕಳುಹಿಸಿದರು' ಎಂದು ಆರೋಪಿಯ ಸಂಬಂಧಿ ಮೂರ್ತಿ ತಿಳಿಸಿದ್ದಾರೆ.

ಪ್ರಕರಣದ ಆರೋಪಿಗಳಾದ ಜಗದೀಶ್ ಹಾಗೂ ಎಂ.ಲಕ್ಷ್ಮಣ್ ಶಿವಮೊಗ್ಗದ ಕಾರಾಗೃಹದಲ್ಲಿದ್ದು, ಲಕ್ಷ್ಮಣ್‌ನನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ.

ಪವಿತ್ರಾ, ಪ್ರದೋಷ್ ಬಿಡುಗಡೆ

ಇನ್ನಷ್ಟು ಸುದ್ದಿಗಳು 5

ಬೀದಿ ನಾಯಿಗಳಿಗೆ ಆಹಾರ: ತಡೆಯುವುದು ಅಪರಾಧ

ಬೆಂಗಳೂರು: ಬೀದಿ ನಾಯಿಗಳಿಗೆ ನಿಗದಿತ ಪ್ರದೇಶದಲ್ಲಿ ಆಹಾರ ಹಾಕುವುದನ್ನು ನಿಷೇಧಿಸುವಂತಿಲ್ಲ, ವಿರೋಧಿಸುವಂತಿಲ್ಲ. ಅಪಾರ್ಟ್‌ಮೆಂಟ್‌ಗಳಲ್ಲಿ ಸಾಕು ಪ್ರಾಣಿಗಳಿಗೆ ಸೌಲಭ್ಯ ಕಲ್ಪಿಸಬೇಕು. ಸಮುದಾಯ ಪ್ರಾಣಿಗಳನ್ನು ಹೊಡೆದರೆ ಅಥವಾ ಹಿಂಸಿಸಿದರೆ ದಂಡ ಅಥವಾ ಜೈಲು ಶಿಕ್ಷೆಯಾಗುತ್ತದೆ.

'ಸಮುದಾಯ ಪ್ರಾಣಿಗಳ' ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿರುವ ಬಿಬಿಎಂಪಿ, ಜನವರಿ 15ರಿಂದ ಮಾರ್ಗಸೂಚಿಗಳನ್ನು ಪಾಲಿಸದವರ ವಿರುದ್ಧ ಪ್ರಕರಣ ದಾಖಲಿಸಲು ಸನ್ನದ್ಧವಾಗಿದೆ 3

ಹೆಚ್ಚುತ್ತಲೇ ಇದೆ ಅಪರಾಧ ಜಗತ್ತಿಗೆ ತೆರೆದುಕೊಳ್ಳುತ್ತಿರುವ ಪೋರರ ಸಂಖ್ಯೆ

'ತಪ್ಪು' ಮಾಡಿದ ಮಕ್ಕಳಿಗೂ 'ರಾಜಧಾನಿ'!

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯದಲ್ಲಿ 2020ರಿಂದ 2023ರವರೆಗೆ ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ, ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಲ್ಲಿ ಹೆಚ್ಚಿನವರು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲೇ ಇದ್ದಾರೆ. ಇಂತಹ 1,665 ಮಕ್ಕಳಿರುವ ಬೆಂಗಳೂರು ಬಿಟ್ಟರೆ, ಸಾಂಸ್ಕೃತಿಕ ರಾಜಧಾನಿಯಾದ ಮೈಸೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಶಿವಮೊಗ್ಗ 3ನೇ ಸ್ಥಾನದಲ್ಲಿದೆ.

ನಾಲ್ಕು ವರ್ಷಗಳ ಅವಧಿಯಲ್ಲಿ, ವರ್ಷದಿಂದ ವರ್ಷಕ್ಕೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರ ಸಂಖ್ಯೆಯು ಹೆಚ್ಚುತ್ತಲೇ ಇದೆ. ಬಾಲಕಿಯರ ಸಂಖ್ಯೆ ಕಳೆದ ಎರಡು ವರ್ಷಗಳಿಂದ ಹೆಚ್ಚಿಲ್ಲ. ಮೂರಂಕಿ ದಾಟಿಲ್ಲ. ಒಟ್ಟಾರೆ 8,941 ಬಾಲಕರು ಹಾಗೂ 930 ಬಾಲಕಿಯರಿದ್ದಾರೆ.

ನಗರದ 'ಒಡನಾಡಿ' ಸೇವಾ ಸಂಸ್ಥೆಯು ಮಾಹಿತಿ ಹಕ್ಕಿನಡಿ ಸಲ್ಲಿಸಿದ್ದ ಅರ್ಜಿಗೆ ರಾಜ್ಯ ಅಪರಾಧ ದಾಖಲಾತಿ ವಿಭಾಗವು ಈ ಅಂಕಿ ಅಂಶವನ್ನು ನೀಡಿದೆ. ರಾಜ್ಯದ 31 ಜಿಲ್ಲೆಗಳು, ಪ್ರಮುಖ ನಗರಗಳು, ಸಿಐಡಿ, ಕರಾವಳಿ ಭದ್ರತಾ ಪಡೆ, ರಾಜ್ಯ ರೈಲ್ವೆಯಲ್ಲಿ ದಾಖಲಾಗಿರುವ ಪ್ರಕರಣಗಳೂ ಇದರಲ್ಲಿ ಸೇರಿವೆ. ಈ ಮಕ್ಕಳಲ್ಲಿ ಬಾಲಕಿಯರಿಗಿಂತ ಬಾಲಕರೇ ಹೆಚ್ಚಿದ್ದಾರೆ.



ದರೋಡೆ, ಅತ್ಯಾಚಾರ, ಕೊಲೆಯಂಥ ಪ್ರಕರಣಗಳು ಮಕ್ಕಳ ಮೇಲೆ ದಾಖಲಾಗುತ್ತಿವೆ. ಅವರನ್ನು ಅಪರಾಧ ಜಗತ್ತಿನಿಂದ ದೂರ ತರುವ ಪ್ರಯತ್ನ ತುರ್ತಾಗಿ ಆಗಬೇಕು


ಎಂ.ಎಲ್.ಪರಶುರಾಂ

'ಒಡನಾಡಿ' ನಿರ್ದೇಶಕ

ಮೈಸೂರು, ಶಿವಮೊಗ್ಗದಲ್ಲಿ 400ಕ್ಕೂ ಹೆಚ್ಚು ಮಕ್ಕಳಿದ್ದರೆ, ತುಮಕೂರು, ಚಿತ್ರದುರ್ಗ, ಬೆಳಗಾವಿ, ತುಮಕೂರು, ಮತ್ತು ಬೆಂಗಳೂರು ಜಿಲ್ಲೆ, ಬೀದರ್, ಚಿಕ್ಕಮಗಳೂರಿನಲ್ಲಿ 300ಕ್ಕೂ ಹೆಚ್ಚು ಮಕ್ಕಳಿದ್ದಾರೆ. ಇವನ್ನು ಬಿಟ್ಟರೆ, ಬಹುತೇಕ ಜಿಲ್ಲೆಗಳಲ್ಲಿ ನೂರಕ್ಕೂ ಹೆಚ್ಚು ಮಕ್ಕಳಿದ್ದಾರೆ. ಸಿಐಡಿಯಲ್ಲಿ ಕೇವಲ ಒಂದು ಪ್ರಕರಣ ದಾಖಲಾಗಿದ್ದು, ಒಬ್ಬ ಬಾಲಕನಿದ್ದಾನೆ. ರಾಜ್ಯ ರೈಲ್ವೆಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಹತ್ತು ಮಕ್ಕಳಿದ್ದಾರೆ. ಕರಾವಳಿ ಭದ್ರತಾ ಪಡೆಯಲ್ಲಿ ಪ್ರಕರಣ ದಾಖಲಾಗಿಲ್ಲ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಂ, 'ಅಂಕಿ ಅಂಶಗಳು, ಸಮಾಜದ ಆರೋಗ್ಯ ಹದಗೆಡುತ್ತಿರುವುದರ ಸೂಚನೆಯಂತೆ ಕಾಣುತ್ತವೆ. ಮಕ್ಕಳು ಹೆಚ್ಚಿನ ಮಟ್ಟದಲ್ಲಿ ಅಪರಾಧ ಜಗತ್ತಿಗೆ ತೆರೆದು ಕೊಳ್ಳುತ್ತಿರುವುದನ್ನು ಎಚ್ಚರಿಕೆಯ ಗಂಟೆ ಎಂದೇ ಸರ್ಕಾರ ಭಾವಿಸಬೇಕು' ಎಂದು ಪ್ರತಿಪಾದಿಸಿದರು.

ವರ್ಷವಾರು ಪ್ರಕರಣಗಳ ಸಂಖ್ಯೆ





'ಅಪರಾಧ ಜಗತ್ತಿನಲ್ಲಿ ಮಕ್ಕಳು ಕಾಣಬಾರದು. ಆದರೆ, ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ನ್ಯಾಯಾಲಯಗಳು, ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯ ಮಂಡಳಿಗಳು ಸಮಾಜದಲ್ಲಿ ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿ ಇನ್ನಷ್ಟು ಕಾರ್ಯಪ್ರವೃತ್ತರಾಗಬೇಕು' ಎಂದು ಅಭಿಪ್ರಾಯಪಟ್ಟರು.

'ಪೋಷಕರ ಸಾಲ, ಟಿವಿ ಮಾಧ್ಯಮಗಳು, ಮೊಬೈಲ್ ಫೋನ್ ದುರ್ಬಳಕೆಯು ಮಕ್ಕಳನ್ನು ಕೆಟ್ಟದಾಗಿ ಬೆಳೆಯಲು ಪ್ರೇರೇಪಿಸುತ್ತಿದೆ. ಏಕಪೋಷಕ ಕುಟುಂಬ, ವ್ಯಸನಿಗಳ ಕುಟುಂಬ, ಬಡ ಕುಟುಂಬಗಳ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಬೇಕು. ಮಕ್ಕಳು-ಪೋಷಕರಿಗೆ ಆಪ್ತಸಮಾಲೋಚನೆ ಅಗತ್ಯ. ಮಕ್ಕಳು ತಪ್ಪು ಮಾಡಿದಾಗ ತಿದ್ದಬೇಕು. ದಂಡಿಸಬಾರದು' ಎಂದು ಹೇಳಿದರು.

ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳು ಹೆಚ್ಚಿರುವ ಜಿಲ್ಲೆಗಳು

ಜಿಲ್ಲೆ	ಮಕ್ಕಳು
ಬೆಂಗಳೂರು ನಗರ	1,665
ಮೈಸೂರು ಜಿಲ್ಲೆ	495
ಶಿವಮೊಗ್ಗ	467
ಮಂಡ್ಯ	403
ತುಮಕೂರು	378
ಚಿತ್ರದುರ್ಗ	363
ಬೆಳಗಾವಿ	362
ಬೆಂಗಳೂರು ಜಿಲ್ಲೆ	358
ಬೀದರ್	326
ಚಿಕ್ಕಮಗಳೂರು	310

ದೊಡ್ಡಬನಹಳ್ಳಿ ಗ್ರಾ.ಪಂ ನೂತನ ಅಧ್ಯಕ್ಷ ಎನ್. ಲೋಕೇಶ್



ನೂತನ ಅಧ್ಯಕ್ಷರನ್ನು ಗ್ರಾ.ಪಂ.ಸದಸ್ಯರು ಹಾಗೂ ಬಿಜೆಪಿ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪುರ: ದೊಡ್ಡಬನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಕೋನದಾಸಪುರ ಎನ್. ಲೋಕೇಶ್ ಆಯ್ಕೆಯಾಗಿದ್ದಾರೆ.

ಅನಿಲ್ ಕುಮಾರ್ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೋನದಾಸಪುರ ಎನ್. ಲೋಕೇಶ್ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕಾಟಂನಲ್ಲೂರು ಎಲ್. ಜಯರಾಂ ನಾಮಪತ್ರ ಸಲ್ಲಿಸಿದ್ದರು. 33 ಸದಸ್ಯ ಬಲದ ಪಂಚಾಯಿತಿಯಲ್ಲಿ ಲೋಕೇಶ್ 25 ಮತ ಹಾಗೂ ಜಯರಾಂ 8 ಮತ ಪಡೆದಿದ್ದಾರೆ ಎಂದು ಚುನಾವಣಾ ಅಧಿಕಾರಿ ರಮೇಶ್ ತಿಳಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನೂತನ ಅಧ್ಯಕ್ಷ ಕೋನದಾಸಪುರ ಎನ್. ಲೋಕೇಶ್ ಮಾತನಾಡಿ, ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಲಿಂಬಾವಳಿಯವರ ಜೊತೆಗೂಡಿ ಪಂಚಾಯತಿ ವ್ಯಾಪ್ತಿಯ ಪ್ರತಿ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತೇನೆ. ಎಲ್ಲ ಸದಸ್ಯರನ್ನು ಒಟ್ಟುಗೂಡಿಸಿಕೊಂಡು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತೇನೆ ಎಂದು ಹೇಳಿದರು.

ಬಿಜೆಪಿ ಮುಖಂಡ ಪಾಪಣ್ಣ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ನಟರಾಜ್, ಕೆಎಂಎಫ್ ಉಪಾಧ್ಯಕ್ಷ, ಮಂಜುನಾಥ್ ವಾರ್ಡ್ ಅಧ್ಯಕ್ಷ ನಾ. ಮಂಜುನಾಥ್, ಮಾಜಿ ಅಧ್ಯಕ್ಷ ಅನಿಲ್ ಕುಮಾರ್ ಇದ್ದರು.

ನಂದಿ ಬೆಟ್ಟಕ್ಕೆ ಪ್ರವೇಶ ನಿಷೇಧ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ತಾಲ್ಲೂಕಿನ ನಂದಿ ಗಿರಿಧಾಮ ಪ್ರವೇಶಕ್ಕೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ನಿಷೇಧ ವಿಧಿಸಲಾಗಿದೆ.

ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ನಂದಿ ಗಿರಿಧಾಮಕ್ಕೆ ಡಿಸೆಂಬರ್ 31ರ ಸಂಜೆ 6ರಿಂದ 2025ರ ಜನವರಿ 1ರ ರಾತ್ರಿ 11ರವರೆಗೆ ಸಾರ್ವಜನಿಕರಿಗೆ ಪ್ರವೇಶಕ್ಕೆ ನಿಷೇಧ ವಿಧಿಸಲಾಗಿದೆ.

ಅತಿಥಿ ಗೃಹಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸುವುದನ್ನು ಕೂಡ ರದ್ದು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ರಾಜ್ಯ ಮಾಹಿತಿ ಆಯೋಗದಲ್ಲಿ ಖಾಲಿ ಹುದ್ದೆ

ಭರ್ತಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮಂಗಳವಾರ ಆದೇಶಿಸಿದೆ.

'ವಿಚಾರಣೆ ನಡೆಸಿ ನನ್ನ ವಾದ ಆಲಿಸದೆ ₹10 ಸಾವಿರ ದಂಡ ಹಾಕಲಾಗಿದೆ' ಎಂದು ಆಕ್ಷೇಪಿಸಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಮತ್ತು ಸಿಪಿಐಒ (ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ) ಸಿ.ಪುಷ್ಪಲತಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ₹10 ಸಾವಿರ ದಂಡವನ್ನು ನಿಮ್ಮ ಸಂಬಳದ ಮೊತ್ತದಿಂದ ಪಾವತಿ ಮಾಡಬೇಕು' ಎಂದು ಪುಷ್ಪಲತಾ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಆಯುಕ್ತರು ಹೊರಡಿಸಿದ್ದ ಪ್ರಶ್ನಿತ ಆದೇಶವನ್ನು ನ್ಯಾಯಪೀಠ ರದ್ದುಪಡಿಸಿದೆ.

'ಆಯೋಗದ ಮುಂದಿರುವ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕು' ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿರುವ ನ್ಯಾಯಪೀಠ, 'ಹಾಲಿ ಪ್ರಕರಣದಲ್ಲಿ ಅರ್ಜಿದಾರರೂ ಆದ ವಕೀಲ ಕೆ.ಎಸ್.ರವಿಕುಮಾರ್ ಅವರ ಮನವಿಯನ್ನು ಪುನಃ ಆಲಿಸಿ ಹೊಸ ಆದೇಶ ಹೊರಡಿಸಿ' ಎಂದು ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರಿಗೆ ತಾಕೀತು ಮಾಡಿದೆ.

'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿದ್ದ ಎಸ್.ಬಸವಣ್ಣ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಆಯ್ಕೆಗೊಂಡರು. ಬಸವಣ್ಣ ಪೊಲೀಸ್ ಇಲಾಖೆಯಲ್ಲಿದ್ದ ವೇಳೆ ನನ್ನ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದರಲ್ಲದೆ ಹಲ್ಲೆ ನಡೆಸಿದ್ದರು. ಈ ಕುರಿತಂತೆ ಎಫ್‌ಐಆರ್ ದಾಖಲಿಸಿದ್ದೇನೆ. ಆದರೆ, ಪೊಲೀಸ್ ಇಲಾಖೆಯಿಂದ ವಾಣಿಜ್ಯ ತೆರಿಗೆ ಇಲಾಖೆಗೆ ಆಯ್ಕೆ ಆಗುವಾಗ ಬಸವಣ್ಣ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿವರ ಮುಚ್ಚಿಟ್ಟಿದ್ದಾರೆ' ಎಂದು ಆರೋಪಿಸಿ ಕೆ.ಎಸ್. ರವಿಕುಮಾರ್ ಅವರು ವಾಣಿಜ್ಯ ಇಲಾಖೆ ಮೇಲಧಿಕಾರಿಗೆ ದೂರು ಕೊಟ್ಟಿದ್ದರು.

'ಈ ಕುರಿತಂತೆ ವಾಣಿಜ್ಯ ಇಲಾಖೆ ಆಯುಕ್ತರು 92 ಪುಟಗಳ ವಿವರಣೆ ನೀಡಿರುವರಾದರೂ ಅದು ಅಸಮರ್ಪಕವಾಗಿದೆ' ಎಂದು ಆಕ್ಷೇಪಿಸಿ ರವಿಕುಮಾರ್, ಕರ್ನಾಟಕ ಮಾಹಿತಿ ಆಯೋಗಕ್ಕೆ ಎರಡನೇ ಮೇಲ್ಮನವಿ ಸಲ್ಲಿಸಿದ್ದರು.

ಬಿಬಿಎಂಪಿ: 38 ಅಧಿಕಾರಿಗಳ ವಿರುದ್ಧ ಆರೋಪಪಟ್ಟಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 2006ರಿಂದ 2012ರ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಮಳೆ ನೀರು ಕಾಲುವೆಗಳ ಕಾಮಗಾರಿಗಳಲ್ಲಿ ಅಕ್ರಮ ಎಸಗಿರುವ ಆರೋಪ ಎದುರಿಸುತ್ತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 38 ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಿ, ಕ್ರಮ ಜರುಗಿಸುವಂತೆ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಶಿಫಾರಸು ಮಾಡಿದೆ.

ಬೆಂಗಳೂರು ನಗರದಲ್ಲಿನ ಮಳೆ ನೀರು ಕಾಲುವೆಗಳ ನಿರ್ವಹಣೆ ಕುರಿತು ಮಹಾಲೇಖಪಾಲರ ವರದಿಯಲ್ಲಿ ವ್ಯಕ್ತವಾಗಿದ್ದ ಆಕ್ಷೇಪಗಳ ಕುರಿತು ಪರಿಶೀಲನೆ ನಡೆಸಿ ಸಿದ್ಧಪಡಿಸಿರುವ ವರದಿಯನ್ನು ಸಮಿತಿಯ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದರು.

ಒಟ್ಟು 39 ಅಧಿಕಾರಿಗಳ ವಿರುದ್ಧ ಆರೋಪವಿದೆ. ಅವರಲ್ಲಿ ಒಬ್ಬರು ಮೃತಪಟ್ಟಿದ್ದಾರೆ. 13 ಮಂದಿ ನಿವೃತ್ತರಾಗಿದ್ದು, 25 ಮಂದಿ ಸೇವೆಯಲ್ಲಿದ್ದಾರೆ. ನಿವೃತ್ತರೂ ಸೇರಿದಂತೆ 38 ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಅಡಿ ವಿನಾಯಿತಿ ನೀಡಿ, ಟೆಂಡರ್ ಇಲ್ಲದೇ ಕಾಮಗಾರಿ ಕೈಗೊಂಡಿರುವುದು, ತಾಂತ್ರಿಕವಾಗಿ ಅರ್ಹರಲ್ಲದ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಿರುವುದು, ತುರ್ತು ಅಗತ್ಯದ ಹೆಸರಿನಲ್ಲಿ ಕಾರ್ಯಾದೇಶ ನೀಡಿದ್ದರೂ ಗಡುವು ಮುಗಿದ ಬಳಿಕವೇ ಕಾಮಗಾರಿ ಆರಂಭಿಸಿರುವುದು, ಪಾಲಿಕೆಗೆ ನಷ್ಟ ಉಂಟುಮಾಡಿರುವುದು ಸೇರಿದಂತೆ ಹಲವು ಆರೋಪಗಳು ಈ ಅಧಿಕಾರಿಗಳ ವಿರುದ್ಧ ಇವೆ.

ನಗರದಲ್ಲಿ ಇಂದು

ಕೃಷಿ ತಂತ್ರಜ್ಞರ ಸಂಸ್ಥೆಯ 56ನೇ ಸಂಸ್ಥಾಪನಾ ದಿನಾಚರಣೆಯ ಉದ್ಘಾಟನೆ: ಸಿ. ವಾಸುದೇವಪ್ಪ, ಅಧ್ಯಕ್ಷತೆ: ಸಿ.ಎನ್. ನಂದಿನಿ ಕುಮಾರಿ, ಆಯೋಜನೆ ಮತ್ತು ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಬೆಳಿಗ್ಗೆ 11

ವಕೀಲ ಭೂಷಣ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎನ್.ವಿ. ಅಂಜಾರಿಯಾ, 'ವಕೀಲರ ವಾಹಿನಿ' ಪತ್ರಿಕೆ ಬಿಡುಗಡೆ: ಕೆ. ಶಶಿಕಿರಣ್ ಶೆಟ್ಟಿ, ಅತಿಥಿ: ಕೆ. ಅರವಿಂದ್ ಕಾಮತ್, ಅಧ್ಯಕ್ಷತೆ: ಉದಯ್ ಹೊಳ್ಳ, ಪ್ರಶಸ್ತಿ ಪುರಸ್ಕೃತರು: ಸಿ.ಎಂ. ನಾಗಭೂಷಣ, ಸಿ.ಎಚ್. ಹನುಮಂತರಾಯ, ಕೆ.ಎನ್. ಸುಬ್ಬಾರೆಡ್ಡಿ, ಹೇಮಲತಾ ಮಹಿಷಿ, ಎಚ್. ಕಾಂತರಾಜ, ಆಯೋಜನೆ: ವಕೀಲರ ವಾಹಿನಿ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5

ತಿಂಗಳ ಉಪನ್ಯಾಸ ಕಾರ್ಯಕ್ರಮ: 'ಬಿ.ಎಂ.ಶ್ರೀ ಅವರ ಅನುವಾದಗಳು' ಉಪನ್ಯಾಸ: ಎಚ್.ಎಸ್. ರಾಘವೇಂದ್ರ ರಾವ್, ಪ್ರಸ್ತಾವನೆ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5

ಕಾವ್ಯ ಕಾರಣ-16 'ದೇವನೂರ ಮಹಾದೇವರಿಗೆ ತಮಿಳುನಾಡಿನ 'ವೈಕಂ ಪ್ರಶಸ್ತಿ' ಸಂದ ಕಾರಣ 'ಸಂಬಜಕ್ಕೆ ಅವಾರ್ಡು' ಕವಿತೆ, ಮಾತು, ಸಂಭ್ರಮ: ಆಯೋಜನೆ: ಅವಿರತ ಪುಸ್ತಕ, ಬೆಂಗಳೂರು ಆರ್ಟ್ ಫೌಂಡೇಶನ್, ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ ಚಾವಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ತಬಲಾ ರಂಗಮಂಚ ಪ್ರವೇಶ: ಪ್ರಸ್ತುತಿ: ಓಜಾಸ್ ಪಾಟೀಲ್, ಅತಿಥಿಗಳು: ರಾಮದಾಸ್ ಪಲ್ಸುಳೆ, ಯು. ರಾಜೇಶ್, ಉಪಸ್ಥಿತಿ: ದೇವ ಬಾಬಾಜಿ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ಎರಡನೇ ಕ್ರಾಸ್ ರಸ್ತೆ, ಯಲಹಂಕ, ಸಂಜೆ 6

'ಅಪರಾಧಿ ನಾನಲ್ಲ' ನಾಟಕ ಪ್ರದರ್ಶನ: ರಚನೆ: ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ರಂಗಚಕ್ರ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.20

ನಾಯಿ, ಬೆಕ್ಕು ಸಾಕಲು ಅಪಾರ್ಟ್‌ಮೆಂಟ್‌ಗಳಲ್ಲಿ ಸಂಸ್ಥೆಗಳು ಅವಕಾಶ ನೀಡಬೇಕು: ಬಿಬಿಎಂಪಿ ಮಾರ್ಗಸೂಚಿ

ಬೀದಿ ನಾಯಿಗೆ ಆಹಾರ: ತಡೆಯುವುದು ಅಪರಾಧ

• ಆರ್. ಮಂಜುನಾಥ್

ಬೆಂಗಳೂರು: ಬೀದಿ ನಾಯಿಗಳಿಗೆ ನಿಗದಿತ ಪ್ರದೇಶದಲ್ಲಿ ಆಹಾರ ಹಾಕುವುದನ್ನು ನಿಷೇಧಿಸುವಂತಿಲ್ಲ, ವಿರೋಧಿಸುವಂತಿಲ್ಲ. ಅಪಾರ್ಟ್‌ಮೆಂಟ್‌ಗಳಲ್ಲಿ ಸಾಕು ಪ್ರಾಣಿಗಳಿಗೆ ಸೌಲಭ್ಯ ಕಲ್ಪಿಸಬೇಕು. ಸಮುದಾಯ ಪ್ರಾಣಿಗಳನ್ನು ಹೊಡೆದರೆ ಅಥವಾ ಹಿಂಸಿಸಿದರೆ ದಂಡ ಅಥವಾ ಜೈಲು ಶಿಕ್ಷೆಯಾಗುತ್ತದೆ.

'ಸಮುದಾಯ ಪ್ರಾಣಿಗಳ' ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿರುವ ಬಿಬಿಎಂಪಿ, ಜನವರಿ 15ರಿಂದ ಮಾರ್ಗಸೂಚಿಗಳನ್ನು ಪಾಲಿಸದವರ ವಿರುದ್ಧ ಪ್ರಕರಣ ದಾಖಲಿಸಲು ಸನ್ನದ್ಧವಾಗಿದೆ.

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ-1960, ಪ್ರಾಣಿಗಳ ಜನನ ನಿಯಂತ್ರಣ ನಿಯಮಗಳು-2023 ಮತ್ತು ಭಾರತೀಯ ಜೀವಜಂತು ಕಲ್ಯಾಣ ಮಂಡಳಿಯ (ಎಡಬ್ಲ್ಯುಬಿಐ) ನಿಯಮಗಳು ಹಾಗೂ ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳ ಆದೇಶದಂತೆ ಬಿಬಿಎಂಪಿ ನಿಯಮ ರೂಪಿಸಿದೆ. ಇದನ್ನು ಉಲ್ಲಂಘಿಸಿದವರಿಗೆ ಮೂರು ತಿಂಗಳಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆಯಾಗಲಿದೆ.

ಪ್ರಾಣಿಗಳು ಹಾಗೂ ಪಕ್ಷಿಗಳಿಗೆ ಆಹಾರ, ಆಶ್ರಯ, ಔಷಧ, ಸುರಕ್ಷಿತ ಸ್ಥಳಗಳು ಅಗತ್ಯವಾಗಿದ್ದು, ಅವುಗಳನ್ನು ಒದಗಿಸಬೇಕು. ಪ್ರಾಣಿಗಳಿಗೂ ಐದು ಸ್ವಾತಂತ್ರ್ಯಗಳಿವೆ. ಪ್ರಾಣಿಗಳು ದಾಹ, ಹಸಿವು, ಅಪೌಷ್ಟಿಕತೆ ಹೊಂದಿರದ; ಅಸ್ವಸ್ಥತೆ ಹೊಂದಿರದ; ನೋವು, ಗಾಯ, ರೋಗಗಳನ್ನು ಹೊಂದಿರದ; ಭಯ, ಸಂಕಟ ಹೊಂದಿರದ; ಸಾಮಾನ್ಯ ನಡವಳಿಕೆಯನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತವೆ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.



ಬೀದಿ ನಾಯಿಗಳಿಗೆ ಆಹಾರ–ನಿಯಮಗಳು:

- ಪ್ರತಿದಿನ ಆಹಾರ ನೀಡಲು ಆರ್ಥಿಕವಾಗಿ ಸಬಲರಾಗಿದ್ದರೆ, ದೈಹಿಕವಾಗಿ ಸಮರ್ಥರಾಗಿದ್ದರೆ ಮಾತ್ರ ಬೀದಿ ನಾಯಿಗಳಿಗೆ ಆಹಾರ ನೀಡುವ ಕಾರ್ಯ ಪ್ರಾರಂಭಿಸಬೇಕು
- ಬೀದಿ ನಾಯಿಗಳಿಗೆ ರಾತ್ರಿ 11.30ರಿಂದ ಬೆಳಿಗ್ಗೆ 5ರವರೆಗೆ ಆಹಾರ ನೀಡುವಂತಿಲ್ಲ. ಪೊದೆಗಳು ಸೇರಿದಂತೆ ದೂರದ ಪ್ರದೇಶದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ನೀಡಲು ಹೋಗಬಾರದು
- ಬೇರೆಯವರ ಮನೆ ಮುಂದೆ, ಆಸ್ತಿಯಲ್ಲಿ, ಪಾರ್ಕಿಂಗ್ ಪ್ರದೇಶದಲ್ಲಿ ಆಹಾರ ಹಾಕಬಾರದು. ಮರುಬಳಸುವ ತಟ್ಟೆಗಳನ್ನು ಬಳಸಿ ಆಹಾರ ನೀಡಬೇಕು
- ಬೀದಿ ನಾಯಿಗಳು ತಿಂದು ಉಳಿದ ಆಹಾರವನ್ನು ಅಲ್ಲೇ ಬಿಡದೆ ಸ್ವಚ್ಛಗೊಳಿಸಬೇಕು. ಹೆಚ್ಚು ನಾಗರಿಕರು ಓಡಾಡುವ ಪ್ರದೇಶದಲ್ಲಿ ಆಹಾರವನ್ನು ಹಾಕಬಾರದು
- ಶಿಕ್ಷಣ ಸಂಸ್ಥೆ, ಟೆಕ್ ಪಾರ್ಕ್ ಅಥವಾ ಯಾವುದೇ ಸಂಘ– ಸಂಸ್ಥೆಗಳ ಪ್ರದೇಶದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ನೀಡುವ ಮೊದಲು ಸಮ್ಮತಿ ಪಡೆದುಕೊಳ್ಳಬೇಕು


ಅಪಾರ್ಟ್‌ಮೆಂಟ್ ಮಾಲೀಕರ ಸಂಘಗಳಿಗೆ ಸೂಚನೆ


- ಸಂಘ–ಅಸೋಸಿಯೇಷನ್‌ಗಳ ಬೈ-ಲಾದಲ್ಲಿ ಸಾಕುಪ್ರಾಣಿಗಳ ಪಾಲನೆಗೆ ವಿರುದ್ಧ ಅಥವಾ ನಿಷೇಧಿಸುವ ಯಾವುದೇ ನಿಯಮ ರೂಪಿಸುವಂತಿಲ್ಲ
- ಎಲ್ಲರೂ ಉಪಯೋಗಿಸುವ ಸ್ಥಳದಲ್ಲಿ ಸಾಕುಪ್ರಾಣಿಗೆ ಅವಕಾಶವಿರಬೇಕು. ಲಿಫ್ಟ್‌ನಲ್ಲಿ ಬೆಲ್ಟ್‌ನೊಂದಿಗೆ ಸಾಕುಪ್ರಾಣಿಯನ್ನು ಕೊಂಡೊಯ್ಯಲು ಅನುಮತಿಸಬೇಕು
- ಮನುಷ್ಯರು ಮಾತನಾಡುವಂತೆ ನಾಯಿಗಳು ಬೊಗಳುವುದು ಭಾವನಾತ್ಮಕ ಪ್ರಕ್ರಿಯೆ. ಅದನ್ನು ತಡೆಯುವಂತೆ ಸಾಕುಪ್ರಾಣಿ ಮಾಲೀಕರನ್ನು ಒತ್ತಾಯಿಸುವಂತಿಲ್ಲ
- ಸಂಘ– ಸಂಸ್ಥೆಗಳು ಸಾಕು ಪ್ರಾಣಿಗಳ ಅಗತ್ಯ ವ್ಯಾಯಾಮಕ್ಕೆ ಅವುಗಳು ಓಡಾಡಲು, ಆಟವಾಡಲು ಬೆಳಿಗ್ಗೆ ಹಾಗೂ ಸಂಜೆ ಸಮಯವನ್ನು ಪ್ರತ್ಯೇಕವಾಗಿ ನಿಗದಿಪಡಿಸಬೇಕು
- ಸಾಕು ನಾಯಿಗಳಿಗೆ ಯಾವುದೇ ರೀತಿಯ ಪಂಜರದಲ್ಲಿ ಇರಿಸುವಂತಿಲ್ಲ. ಸಾಕು ನಾಯಿಗಳ ಬಾಯಿಗೆ ಕವಚ ಧರಿಸಬೇಕು ಎಂದು ಸೂಚಿಸುವಂತಿಲ್ಲ.

ಮಾಲೀಕರೇನು ಮಾಡಬೇಕು?

- ಮನೆಯಲ್ಲಿ ನಾಯಿಗಾಗಿ ಹೆಚ್ಚು ಸ್ಥಳವನ್ನು ನಾಯಿ ಸಾಕುವವರು ಖಚಿತಪಡಿಸಿಕೊಳ್ಳಬೇಕು. ಎಷ್ಟು ನಾಯಿಗಳಿವೆ ಎಂದು ನಿವಾಸಿಗಳ ಸಂಘಕ್ಕೆ ಮಾಹಿತಿ ನೀಡಬೇಕು
- ಸಾಕು ನಾಯಿಗೆ ಅಗತ್ಯ ಲಸಿಕೆ ಕೊಡಿಸಬೇಕು, ನೆರೆಯವರಿಗೆ ಸಮಸ್ಯೆಯಾಗದ ರೀತಿಯಲ್ಲಿ ಮನೆ, ಬಾಲ್ಕನಿ, ಟೆರೇಸ್‌ನಲ್ಲಿ ಯಾವಾಗಲೂ ಸ್ವಚ್ಛತೆ ಕಾಪಾಡಿಕೊಳ್ಳಬೇಕು
- ಸಾಕು ನಾಯಿಗೆ ಸ್ವಚ್ಛ ಸ್ಥಳ ಹಾಗೂ ಸೂಕ್ತ ಹಾಸಿಗೆ ಒದಗಿಸಬೇಕು. ಯಾವುದೇ ರೀತಿಯ ಚಾವಣಿ ಇಲ್ಲದ ಪ್ರದೇಶದಲ್ಲಿ ಸಾಕು ನಾಯಿಯನ್ನು ಬಿಟ್ಟಿರಬಾರದು
- 18 ವರ್ಷದ ಒಳಗಿನವರು ಸಾಕು ನಾಯಿಯನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗುವಂತಿಲ್ಲ. ಸಾಕು ನಾಯಿಯ ಉತ್ತಮ ನಡವಳಿಕೆಗೆ ತರಬೇತಿ ನೀಡಬೇಕು
- ಸಾಕು ನಾಯಿಗಳು ರಸ್ತೆ, ಪಾದಚಾರಿ ಮಾರ್ಗದಲ್ಲಿ ಮಲಮೂತ್ರ ಮಾಡಿದರೆ, ಇತರರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಮಾಲೀಕರೇ ಸ್ವಚ್ಛ ಮಾಡಬೇಕು


ಕಬ್ಬನ್ ಉದ್ಯಾನದಲ್ಲಿ ವ್ಯಕ್ತಿಯೊಬ್ಬರು ಬೀದಿ ನಾಯಿಗಳಿಗೆ ಆಹಾರ ನೀಡಿದರು (ಸಂಗ್ರಹ ಚಿತ್ರ)






ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಯಿ ಸಾಕಲು ಪರವಾನಗಿ: ಚಿಂತನೆ

'ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಯಿಗಳನ್ನು ಸಾಕುವ ವಿಚಾರಕ್ಕೆ ಸಂಬಂಧಿಸಿದಂತೆ ಪರವಾನಗಿ ನೀಡುವ ಚಿಂತನೆ ಇದೆ. ಈ ವಿಚಾರವಾಗಿ ಕೈಗೊಳ್ಳಬೇಕಾದ ಕ್ರಮಗಳ ಸ್ಪಷ್ಟ ಸೂಚನೆ ನೀಡುವಂತೆ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲಾಗಿದೆ. ಅಲ್ಲಿಂದ ಮಾಹಿತಿ ಬಂದ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಪಶು ಸಂಗೋಪನೆ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಕು ನಾಯಿಗಳನ್ನು ಹೇಗೆ ನೋಡಿಕೊಳ್ಳಬೇಕು ಎಂಬುದರ ಬಗ್ಗೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಆದರೆ ಸಾಕಲು ಅನುಮತಿ ಹಾಗೂ ಅವುಗಳ ಗಣತಿ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ. ಬೀದಿ ನಾಯಿಗಳ ಗಣತಿಯಾಗಿದ್ದರೂ ಅದೇ ಅಂತಿಮವಲ್ಲ. ಶೇ 20ರಷ್ಟು ಹೆಚ್ಚು ಕಡಿಮೆ ಇರಬಹುದು' ಎಂದರು.

ಸಂಸ್ಥೆಗಳು ಏನೆಲ್ಲ ಮಾಡಬೇಕು?

- ಸಮುದಾಯ ಪ್ರಾಣಿಗಳಿಗೆ ಲಸಿಕೆ ನೀಡಬಹುದು ಮತ್ತು ಆಹಾರ ನೀಡಬಹುದು. ಆದರೆ, ಅವುಗಳ ಮೂಲ ಸ್ಥಳದಿಂದ ಬೇರೆಡೆಗೆ ಸ್ಥಳಾಂತರಿಸುವಂತಿಲ್ಲ
- ಸಮುದಾಯ ಪ್ರಾಣಿಗಳಿಗೆ ಆಹಾರ, ಸ್ವಚ್ಛ ನೀರು ಸಿಗುವಂತೆ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳು ಸಂಚರಿಸದ ಪ್ರದೇಶದಲ್ಲಿ ಅವುಗಳಿಗೆ ನೆಲೆ ಕಲ್ಪಿಸಬೇಕು
- ಸಮುದಾಯ ಪ್ರಾಣಿಗಳಿಗೆ ಆಹಾರ ನೀಡಲು ವಿದ್ಯಾರ್ಥಿಗಳು, ಸಿಬ್ಬಂದಿ ಅಥವಾ ನಾಗರಿಕರಿಗೆ ಪ್ರತ್ಯೇಕ ಸ್ಥಳವನ್ನು ಪಾಲಿಕೆಯೊಂದಿಗೆ ಚರ್ಚಿಸಿ ನಿಗದಿಪಡಿಸಬೇಕು
- ಬೀದಿ ನಾಯಿಗಳನ್ನು ಓಡಿಸಿಕೊಂಡು ಹೋಗುವುದು, ಕಲ್ಲು, ಕಡ್ಡಿಯಿಂದ ಹೊಡೆಯುವುದು ಕಾನೂನುಬಾಹಿರ. ಬೀದಿ ನಾಯಿಗಳ ನಿರ್ವಹಣೆಗೆ ಭದ್ರತಾ ಸಿಬ್ಬಂದಿಗೆ ತರಬೇತಿ ಕೊಡಿಸಬೇಕು
- ಸಂಸ್ಥೆಗಳ ಆವರಣದಲ್ಲಿ ಸಮುದಾಯ ಪ್ರಾಣಿಗಳಿದ್ದಾಗ ಅವುಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಅಗತ್ಯ ಫಲಕಗಳನ್ನು ಹಾಕಬೇಕು



ಏನು ಶಿಕ್ಷೆ?

- ಸಮುದಾಯ ಪ್ರಾಣಿಗಳನ್ನು ಸಾಯಿಸಿದರೆ ₹75 ಸಾವಿರದವರೆಗೆ ದಂಡದ ಜೊತೆಗೆ ಮೂರು ವರ್ಷಗಳಿಂದ ಐದು ವರ್ಷದವರೆಗೆ ಜೈಲು ಶಿಕ್ಷೆ
- ಪ್ರಾಣಿಗಳ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದರೆ ₹50 ಸಾವಿರ ದಂಡ, ಒಂದು ವರ್ಷದಿಂದ ಮೂರು ವರ್ಷದವರೆಗೆ ಜೈಲು ಶಿಕ್ಷೆ
- ಪ್ರಾಣಿಗಳ ಜನನಾಂಗಕ್ಕೆ ಯಾವುದೇ ರೀತಿಯಲ್ಲಿ ಹಲ್ಲೆ ನಡೆಸಿದರೆ ₹1 ಸಾವಿರದ ವರೆಗೆ ದಂಡ ಹಾಗೂ ಎರಡು ವರ್ಷದವರೆಗೆ ಜೈಲು ಶಿಕ್ಷೆ
- ಪ್ರಾಣಿಗಳ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆ– 1960ರಂತೆ ಯಾವುದೇ ನಿಯಮಗಳನ್ನು ಉಲ್ಲಂಘಿಸಿದರೆ ₹50 ದಂಡ ಹಾಗೂ ಮೂರು ತಿಂಗಳವರೆಗೆ ಜೈಲು ಶಿಕ್ಷೆ

ಬೆಂಗಳೂರಿನ 10 ಮಂದಿ ಬಂಧನ: ಸೈಬರ್ ಠಾಣೆ ಪೊಲೀಸರ ಕಾರ್ಯಾಚರಣೆ

ದುಬೈ ವಂಚನೆ ಜಾಲಕ್ಕೆ ಸ್ಥಳೀಯರ ನೆರವು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮೂಲಕ ಲಕ್ಷಾಂತರ ರೂಪಾಯಿ ವಂಚಿಸುತ್ತಿದ್ದ ಹತ್ತು ಮಂದಿ ಆರೋಪಿಗಳನ್ನು ಉತ್ತರ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಶ್ರೀನಿವಾಸರೆಡ್ಡಿ(43), ಆಕಾಶ್ (27), ಪ್ರಕಾಶ್(43), ಸುನಿಲ್ ಕುಮಾರ್(45), ಸಾಯಿ ಪ್ರಜ್ವಲ್(38), ರವಿಶಂಕರ್(24), ಮಧುಸೂದನ್ ರೆಡ್ಡಿ(41), ಸುರೇಶ್(43), ಕಿಶೋರ್ ಕುಮಾರ್(29) ಮತ್ತು ಅಬುಲ್ ರೆಡ್ಡಿ (29)ಬಂಧಿತರು. ಆರೋಪಿಗಳೆಲ್ಲರೂ ಬೆಂಗಳೂರಿನ ವಿವಿಧ ಬಡಾವಣೆಗಳ ನಿವಾಸಿಗಳು.

ಪ್ರಮುಖ ಆರೋಪಿಗಳು ದುಬೈನಲ್ಲಿ ನೆಲಸಿದ್ದಾರೆ. ಇವರು ದುಬೈನಲ್ಲಿ ಇದ್ದುಕೊಂಡೇ ವಂಚನೆ ಜಾಲ ರೂಪಿಸಿದ್ದರು. ಖಾತೆಗಳಿಗೆ ಒಂದು ಕೋಟಿ ರೂಪಾಯಿ ವರ್ಗಾವಣೆ ಆಗುತ್ತಿದ್ದಂತೆಯೇ ಆರೋಪಿಗಳಿಗೆ ₹1 ಲಕ್ಷ ಕಮಿಷನ್ ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಬಂಧಿತರಿಂದ 51 ಮೊಬೈಲ್ ಫೋನ್‌ಗಳು, 27 ಡೆಬಿಟ್ ಕಾರ್ಡ್‌ಗಳು, 108 ಬ್ಯಾಂಕ್ ಪಾಸ್‌ಬುಕ್ ಮತ್ತು ಚೆಕ್‌ಗಳು, 480 ಸಿಮ್ ಕಾರ್ಡ್‌ಗಳು, ಎರಡು ಲ್ಯಾಪ್‌ಟಾಪ್‌ಗಳು, 2 ಸಿಪಿಯು,


ಶ್ರೀನಿವಾಸ ರೆಡ್ಡಿ


ಸುರೇಶ್


ಅಬುಲ್ ರೆಡ್ಡಿ


ಸಾಯಿ ಪ್ರಜ್ವಲ್


ಪ್ರಕಾಶ್


ಮಧುಸೂದನ್


ರವಿ ಶಂಕರ್


ಸುನಿಲ್ ಕುಮಾರ್

ಅಪರಾಧ ಸುದ್ದಿ

48 ಅಕೌಂಟ್ ಕ್ಯೂಆರ್ ಕೋಡ್, 42 ಮೊಹರುಗಳು, 103 ಉದ್ಯಮ್ ಮತ್ತು ಜಿಎಸ್‌ಟಿ ದಾಖಲೆಗಳು, ಚಾಲ್ತಿ ಖಾತೆಗೆ ಸಂಬಂಧಿಸಿದ 230 ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಹಾಲಕ್ಷ್ಮಿ ಲೇಔಟ್‌ನ 8ನೇ ಕ್ರಾಸ್‌ನ ನಿವಾಸಿ, ಟೆಕಿಗೆ ಆರೋಪಿಗಳು


ಕಿಶೋರ್

ಆಮಿಷವೊಡ್ಡಿ ₹88.83 ಲಕ್ಷ ವಂಚಿಸಿದ್ದರು. ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು.

ದೂರುದಾರರು ಕೆಲವು ದಿನಗಳ ಹಿಂದೆ ಫೇಸ್‌ಬುಕ್ ಪೇಜ್‌ವೊಂದರಲ್ಲಿ ಬಂದ ಜಾಹೀರಾತಿನ ಲಿಂಕ್ ಮೂಲಕ ಬ್ರ್ಯಾಂಡ್‌ವೈನ್ ಗ್ರೂಪ್ ಮತ್ತು ಇ-8 ಬ್ರ್ಯಾಂಡ್‌ವೈನ್ ಗ್ರೂಪ್ ಮಾರ್ಕೆಟಿಂಗ್ ಗಳನ್ನು ಡೌನ್‌ಲೋಡ್ ಮಾಡಿಕೊಂಡಿದ್ದರು. ಬಳಿಕ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಕೊಂಡಿದ್ದರು. ನಂತರ ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ ಹೆಚ್ಚಿನ ಲಾಭ ಬರಲಿದೆ ಎಂದು ಆಮಿಷ ಒಡ್ಡಲಾಗಿತ್ತು. ಅ.10ರಿಂದ ನ.9ರವರೆಗೆ ವಿವಿಧ ಹಂತದಲ್ಲಿ ಟೆಕಿ ₹88.83 ಲಕ್ಷ ಹಣವನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ಬಳಿಕ ಅವರು ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದರು ಎಂದರು.

ಬಂಧಿತ ಆರೋಪಿ ರವಿಶಂಕರ್ ದುಬೈನಲ್ಲಿ ನೆಲಸಿದ್ದ. ಆಗ ಸೈಬರ್ ವಂಚಕರ ಪರಿಚಯವಾಗಿತ್ತು. ಅಲ್ಲಿಂದ ಕೆಲಸ ಬಿಟ್ಟು ಬಂದಮೇಲೆ ಇತರೆ ಆರೋಪಿಗಳ ಜತೆ ಸೇರಿಕೊಂಡು ಕೆಲವರಿಗೆ ಕಮಿಷನ್ ಆಮಿಷವೊಡ್ಡಿ ಅವರ ಆಧಾರ್ ಕಾರ್ಡ್, ಪಾನ್ ಕಾರ್ಡ್ ಪಡೆದು ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿತ್ತು. ಈ ದುಬೈನ ವಂಚಕರಿಂದ ಹಣ ಪಡೆದು ಈ ಖಾತೆಗಳ ವಿವರವನ್ನು ನೀಡುತ್ತಿದ್ದರು. ವಂಚಕರು ಸಾಮಾಜಿಕ ಜಾಲತಾಣ ಬಳಸಿಕೊಂಡು ಹೂಡಿಕೆ ಲಿಂಕ್ ಕಳುಹಿಸುತ್ತಿದ್ದರು. ಲಿಂಕ್ ತೆರೆದು ಹಣ ಹೂಡಿಕೆ ಮಾಡಿದರೆ ಹಣ ದುಪ್ಪಟ್ಟು ಆಗಲಿದೆ ಎಂದು ಆಮಿಷ ಒಡ್ಡಲಾಗುತ್ತಿತ್ತು ಎಂದು ಸೈಬರ್ ಠಾಣೆ ಪೊಲೀಸರು ಹೇಳಿದರು.

ನಗರದಲ್ಲಿ ಎರಡು ಪ್ರತ್ಯೇಕ ಕಚೇರಿ

ಆರೋಪಿಗಳು ನಗರದ ತ್ಯಾಗರಾಜನಗರ ಮತ್ತು ಸದಾಶಿವನಗರದಲ್ಲಿ ಎರಡು ಪ್ರತ್ಯೇಕ ಕಚೇರಿಗಳನ್ನು ತೆರೆದಿದ್ದರು. ನಿರ್ದಿಷ್ಟ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಗುತ್ತಿದ್ದಂತೆ ದುಬೈನಲ್ಲಿರುವ ವ್ಯಕ್ತಿಗಳ ಖಾತೆಗೆ ವರ್ಗಾವಣೆ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

1,467 ದೂರುಗಳು ಪತ್ತೆ

ಆರೋಪಿಗಳು ಬಳಸುತ್ತಿದ್ದ ಬ್ಯಾಂಕ್ ಖಾತೆಗಳ ವಿರುದ್ಧ ದೇಶದಾದ್ಯಂತ 1,467 ಎನ್‌ಸಿಆರ್‌ಪಿ ದೂರುಗಳು ದಾಖಲಾಗಿವೆ ಎಂಬುದು ಗೊತ್ತಾಗಿದೆ. ಉತ್ತರ ವಿಭಾಗದ ಸೆನ್ ಠಾಣೆಯ 15 ಎನ್‌ಸಿಪಿಆರ್ ಪ್ರಕರಣಗಳು ದಾಖಲಾಗಿವೆ.

ಕುಪ್ಪಂ ಗ್ಯಾಂಗ್ ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರ ಗಮನವನ್ನು ಬೇರೆಡೆಗೆ ಸೆಳೆದು ಚಿನ್ನ, ಬೆಳ್ಳಿ ಸಾಮಗ್ರಿ ಹಾಗೂ ನಗದು ಕಳ್ಳತನ ಮಾಡಿ ಪರಾರಿ ಆಗುತ್ತಿದ್ದ ಕುಪ್ಪಂ ಗ್ಯಾಂಗ್‌ನ ಮಹಿಳೆಯನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.


ಜ್ಯೋತಿ

ಆರೋಪಿ ಜ್ಯೋತಿ (30) ಎಂಬಾಕೆಯನ್ನು ಬಂಧಿಸಿ ₹50 ಸಾವಿರ ನಗದು ಸೇರಿದಂತೆ ₹11.54 ಲಕ್ಷ ಬೆಲೆಬಾಳುವ 153 ಗ್ರಾಂ ಚಿನ್ನಾಭರಣ, 21 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ನಾಪತ್ತೆಯಾಗಿರುವ ಇಬ್ಬರು ಮಹಿಳೆಯರ ಪತ್ತೆ ಕಾರ್ಯ ಮುಂದುವರಿದಿದೆ.

'ಸೊಣ್ಣೇನಹಳ್ಳಿಯ ನಿವಾಸಿಯೊಬ್ಬರು ಕೃಷ್ಣಗಿರಿಗೆ ಹೋಗಿ ವಾಪಸ್ ನಗರಕ್ಕೆ ಬರುತ್ತಿದ್ದ ವೇಳೆ ಹೆಬ್ಬಗೋಡಿಯ ನಾರಾಯಣ ಆಸ್ಪತ್ರೆ ಬಸ್ ನಿಲ್ದಾಣದ ಬಳಿ ಇಬ್ಬರು ಮಹಿಳೆಯರು ಪ್ರಯಾಣಿಕರಂತೆ ಬಸ್ ಹತ್ತಿ, ಇವರ ಬಳಿ ಕುಳಿತುಕೊಂಡರು. ಸ್ವಲ್ಪ ದೂರ ಕ್ರಮಿಸಿದ ಬಳಿಕ ಅವರ ಗಮನ ಬೇರೆಡೆ ಸೆಳೆದು ಆಭರಣ, ಹಣ ಇದ್ದ ಪರ್ಸ್ ಅನ್ನು ಕಳವು ಮಾಡಿ ಮುಂದಿನ ನಿಲ್ದಾಣದಲ್ಲಿ ಇಳಿದು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಸ್ ನಿಲ್ದಾಣ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ಮಹಿಳೆಯನ್ನು ಚಿನ್ನಾಭರಣ ಹಾಗೂ ನಗದು ಸಮೇತ ವಶಕ್ಕೆ ಪಡೆಯಲಾಯಿತು. ಕೃತ್ಯದಲ್ಲಿ ಇನ್ನೂ ಇಬ್ಬರು ಮಹಿಳೆಯರು ಭಾಗಿಯಾಗಿದ್ದು, ನಗರದ ವಿವಿಧೆಡೆ ಪ್ರಯಾಣಿಕರ ಸೋಗಿನಲ್ಲಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾಳೆ' ಎಂದು ಹೇಳಿದರು. ಒಟ್ಟು 9 ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ತೆಲುಗು ಸ್ಮಾರ್ತ ವೇದಿಕಾದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳು ಡಿಸೆಂಬರ್ 25ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 78920 28600 ಸಂಪರ್ಕಿಸಿ.


ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾವೇರಿ ಕರಕುಶಲ ಎಂಪೋರಿಯಂ ಮೇಲೆ ದಾಳಿ ನಡೆಸಿ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ

'ಕಾವೇರಿ'ಯಲ್ಲಿ ಗಂಧ ಕಳ್ಳಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಜಿ.ರಸ್ತೆಯಲ್ಲಿರುವ 'ಕಾವೇರಿ ಎಂಪೋರಿಯಂ' ಮೇಲೆ ಮಂಗಳವಾರ ರಾತ್ರಿ ದಾಳಿ ನಡೆಸಿರುವ ಅರಣ್ಯ ಇಲಾಖೆ ಅಧಿಕಾರಿಗಳು ಗಂಧದ ಮರದ ಕಳ್ಳಸಾಗಣೆಯನ್ನು ಪತ್ತೆ ಮಾಡಿದ್ದಾರೆ.

ಗಂಧದ ಮರ ಖರೀದಿ, ಸಂಗ್ರಹ ಮತ್ತು ಮಾರಾಟ ಸಂಬಂಧ 'ಎಂಪೋರಿಯಂ'ಗೆ ನೀಡಿರುವ ಪರವಾನಗಿಯನ್ನು ರದ್ದುಪಡಿಸಲಾಗುತ್ತದೆ ಎಂದು ಅರಣ್ಯಾಧಿಕಾರಿ ಹೇಳಿದ್ದಾರೆ.

'ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧೀನ ಸಂಸ್ಥೆ 'ಕಾವೇರಿ ಎಂಪೋರಿಯಂ' ಮೇಲೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಲಾಯಿತು ಎಂದು ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ರವೀಂದ್ರ ಕುಮಾರ್ ತಿಳಿಸಿದರು. 'ಎಂಪೋರಿಯಂನ ವ್ಯವಸ್ಥಾಪಕ ನಾರಾಯಣ ಮೂರ್ತಿ ಮತ್ತು ಗೌರವ್ ಸರಗೋಯಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದರು.

'4 ಕೆ.ಜಿ.ಗಿಂತ ಕಡಿಮೆ ತೂಕದ ಗಂಧದ ಮರ ಅಥವಾ ಗಂಧದ ಕಲಾಕೃತಿ/ಉತ್ಪನ್ನಗಳನ್ನು ಖರೀದಿಸಿದ ವ್ಯಕ್ತಿಯು, ಅದನ್ನು ಸಾಗಿಸಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಿಲ್ಲ ಎಂದು ನಿಯಮಗಳು ಹೇಳುತ್ತವೆ. ಈ ವಿನಾಯಿತಿಯನ್ನು ದುರುಪಯೋಗ ಪಡಿಸಿಕೊಂಡಿರುವ ಗೌರವ್ ಸರಗೋಯಿ, ಆರು ತಿಂಗಳಲ್ಲಿ ಒಟ್ಟು 435 ಕೆ.ಜಿ.ಯಷ್ಟು ಗಂಧದ ಮರವನ್ನು ಪೂರೈಕೆ ಮಾಡಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ಟೆಕಿ ಅತುಲ್ ಆತ್ಮಹತ್ಯೆ: ಮೂವರ ಬಂಧನ ಪ್ರಕರಣ

ಕರೆ ಸುಳಿವು ಆಧರಿಸಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದ ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಗಳ ಬಂಧನಕ್ಕೆ ಮಾರತ್ ಹಳ್ಳಿ ಪೊಲೀಸರು ನಡೆಸಿದ ಕಾರ್ಯಾಚರಣೆ ರೋಚಕ ಹಾಗೂ ರಹಸ್ಯವಾಗಿತ್ತು.


ಅತುಲ್ ಸುಭಾಷ್

ಕರೆಯೊಂದನ್ನು ಆಧರಿಸಿ ಅತುಲ್ ಪತ್ನಿ ನಿಖಿತಾ ಸಿಂಘಾನಿಯಾ ಅವರನ್ನು ಹರಿಯಾಣದ ಗುರುಗ್ರಾಮದ ಪಿ.ಜಿಯಲ್ಲಿ ಬಂಧಿಸಿದ್ದರೆ, ಅವರ ತಾಯಿ ನಿಶಾ ಸಿಂಘಾನಿಯಾ ಹಾಗೂ ಸಹೋದರ ಅನುರಾಗ್ ಸಿಂಘಾನಿಯಾ ಅವರನ್ನು ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ರಾಮೇಶ್ವರ ಹೋಟೆಲ್ ಬಳಿ ಡಿ.14 ರಂದು ಬಂಧಿಸಿದ್ದರು.

ಆರೋಪಿಗಳು ಪದೇ ಪದೇ ಸ್ಥಳ ಬದಲಾವಣೆ ಹಾಗೂ ವಾಟ್ಸ್‌ಆ್ಯಪ್‌ನಲ್ಲಿ ಕರೆ ಮಾಡುತ್ತಿದ್ದರು. ಇದರಿಂದ ಕಾರ್ಯಾಚರಣೆಗೆ ತೆರಳಿದ್ದ ಪೊಲೀಸರಿಗೆ ಆರೋಪಿಗಳ ಪತ್ತೆ ಹಾಗೂ ಬಂಧನ ಸವಾಲಾಗಿತ್ತು. ಕೊನೆಗೆ ಒಂದು ಕರೆಯ ಜಾಡು ಹಿಡಿದು ಆರೋಪಿಗಳನ್ನು ಬಂಧಿಸಿದ್ದಾರೆ.

ಸಂಬಂಧಿಕರೊಬ್ಬರು ಜಾಮೀನು ಅರ್ಜಿ ಸಲ್ಲಿಕೆ ಸಂಬಂಧ ನಿಖಿತಾ ಹಾಗೂ ಆಕೆಯ ತಾಯಿ ನಿಶಾ ಅವರನ್ನು ಸಂಪರ್ಕಿಸಿದ್ದರು. ಕೂಡಲೇ ಆ ಇಬ್ಬರ ಮೊಬೈಲ್ ಕರೆಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದರು. ತನ್ನ ಸಂಬಂಧಿಗೆ ಶುಕ್ರವಾರ ರಾತ್ರಿ ನಿಖಿತಾ ಕರೆ ಮಾಡಿ ಮಾತನಾಡಿದ್ದರು. ಈ ಕರೆ ನೀಡಿದ ಸುಳಿವು ಆಧರಿಸಿ ಕಾರ್ಯಾಚರಣೆಗೆ ಇಳಿದ ಪೊಲೀಸರು, ಮೂವರನ್ನೂ ಬಂಧಿಸಿ ನಗರಕ್ಕೆ ಕರೆ ತಂದಿದ್ದರು.

ಅತುಲ್ ಆತ್ಮಹತ್ಯೆ ಬಳಿಕ ಬಂಧನದ ಭೀತಿಯಿಂದ ಆರೋಪಿಗಳು ಹೊರ ರಾಜ್ಯಕ್ಕೆ ಪರಾರಿ ಆಗಿದ್ದರು. ಪದೇ ಪದೇ ಸ್ಥಳ ಬದಲಾವಣೆ ಮಾಡುತ್ತಿದ್ದರು.

ಮಾರತ್‌ಹಳ್ಳಿ ಇನ್‌ಸ್ಪೆಕ್ಟರ್ ಪಿ.ಎನ್. ಅನಿಲ್ ಕುಮಾರ್ ಉಸ್ತುವಾರಿಯಲ್ಲಿ ಪಿಎಸ್‌ಐಗಳಾದ ರಂಜಿತ್, ಚೇತನ್, ಜ್ಞಾನದೇವ ಹಾಗೂ ವಿದ್ಯಾ ಅವರ ಸಾರಥ್ಯದಲ್ಲಿ ನಾಲ್ಕು ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು. ಹರಿಯಾಣ ಹಾಗೂ ಉತ್ತರ ಪ್ರದೇಶ ರಾಜ್ಯಗಳಲ್ಲಿ ಈ ತಂಡಗಳು ರಹಸ್ಯ ಕಾರ್ಯಾಚರಣೆ ನಡೆಸಿದ್ದವು. ಐದು ದಿನಗಳ ನಂತರ ಆರೋಪಿಗಳನ್ನು ಬಂಧಿಸಲಾಗಿತ್ತು.


ಸಂಬಂಧಿಕರಿಂದಲೇ ರೌಡಿಶೀಟರ್ ಹತ್ಯೆ


ಬೆಂಗಳೂರು: ಮದ್ಯದ ಅಮಲಿನಲ್ಲಿ ಗಲಾಟೆ ಮಾಡಿ ಬೈಕ್‌ಗೆ ಬೆಂಕಿ ಹಚ್ಚಿ, ತನ್ನ 20 ದಿನದ ಮಗುವನ್ನು ಸಾಯಿಸುವುದಾಗಿ ಬೆದರಿಸಿದ್ದ ವ್ಯಕ್ತಿಯನ್ನು ಆತನ ಪತ್ನಿಯ ಸಹೋದರರೇ ಕೊಲೆ ಮಾಡಿದ್ದಾರೆ. ಮೂವರೂ ಆರೋಪಿಗಳನ್ನು ನಗರದ ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಸಲ್ಮಾನ್ ಖಾನ್

ಸಲ್ಮಾನ್ ಖಾನ್ (29) ಹತ್ಯೆಯಾದ ವ್ಯಕ್ತಿ. ಹತ್ಯೆ ಮಾಡಿದ ಆರೋಪದಡಿ ಸಲ್ಮಾನ್ ಪತ್ನಿಯ ಸೋದರರಾದ ಉಮರ್, ಶೋಯೆಬ್ ಹಾಗೂ ಅನ್ವರ್ ಅವರನ್ನು ಬಂಧಿಸಲಾಗಿದೆ.

'ಸಿದ್ದಾಪುರದ ನಿವಾಸಿ ಸಲ್ಮಾನ್ ಖಾನ್, ಬೀರು ತಯಾರಿಸುವ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ. ದಂಪತಿಗೆ 20 ದಿನದ ಮಗುವಿದೆ. ಕೆಲವು ತಿಂಗಳಿಂದ ಕೆಲಸಕ್ಕೆ ಹೋಗುತ್ತಿರಲಿಲ್ಲ. ಸೋಮವಾರ ರಾತ್ರಿ ಮದ್ಯ ಸೇವಿಸಿ, ಪತ್ನಿಯೊಂದಿಗೆ ಜಗಳ ಮಾಡಿದ್ದ. ಪೊಲೀಸರನ್ನು ಕರೆಯಿಸಿದಾಗ ಸ್ಥಳದಿಂದ ಪರಾರಿಯಾಗಿದ್ದ. ಬೆಳಗಿನ ಜಾವ ಮನೆಗೆ ಬಂದು ಮಗುವನ್ನು ಕೊಲ್ಲುವುದಾಗಿ ಚಾಕು ತೋರಿಸಿ, ಬೆದರಿಸಿದ. ಆಗ ಅವನ ಮೇಲೆ ಹಲ್ಲೆ ನಡೆಸಿ, ಆರೋಪಿಗಳು ಮಗುವನ್ನು ರಕ್ಷಿಸಿದರು. ಸಲ್ಮಾನ್, ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ತಿಳಿಸಿದ್ದಾರೆ.






ನೋಟ್ಸ್‌ಗೂ ಬಂದಿದೆ ಎಐ!

ಕೃಷ್ಣ ಭಟ್

ಜಗತ್ತಿನಲ್ಲಿ ಎಂಥದ್ದೇ ಸುಧಾರಿತ ತಂತ್ರಜ್ಞಾನ ಬರಲಿ, ನಾವು ಕೆಲವು ಕೆಲಸಗಳನ್ನು ಕೈಯಿಂದಲೇ ಮಾಡುವುದಕ್ಕೆ ಇಷ್ಟಪಡುತ್ತೇವೆ. ಕಂಪ್ಯೂಟರ್‌ನಲ್ಲಿ ಟೈಪ್ ಮಾಡುವ ಅನುಕೂಲ ಈಗ ಇದ್ದಾಗಲೂ ಅಲ್ಲಲ್ಲಿ ಕೆಲವರು ಕೈಯಿಂದಲೇ ಬರೆದು, ಆಮೇಲೆ ಅದನ್ನು ಟೈಪ್ ಮಾಡಿಸುವವರೂ ಇದ್ದಾರೆ. ಮಾರ್ಕೆಟ್‌ಗೆ ಹೋದಾಗ ತರಬೇಕಾದ ಸಾಮಗ್ರಿಗಳನ್ನು ಬರೆದಿಟ್ಟುಕೊಳ್ಳಲು ಈಗ ನಮ್ಮ ಬಳಿ ನೂರಾರು ಆ್ಯಪ್‌ಗಳು ಹಾಗೂ ಆನ್‌ಲೈನ್ ಸೌಕರ್ಯಗಳು ಇದ್ದರೂ, ನಾವು ಇನ್ನೂ ಚೀಟಿಯಲ್ಲಿ ಬರೆದು ಫ್ರಿಜ್‌ನ ಡೋರ್‌ಗೆ ಅಂಟಿಸಿಡುತ್ತೇವೆ ಅಥವಾ ಒಂದು ನೋಟ್‌ಬುಕ್ ಇಟ್ಟುಕೊಂಡು ಅದರಲ್ಲಿ ಬರೆದು ಫ್ರಿಜ್‌ನ ಮೇಲೆ ಇಟ್ಟುಕೊಳ್ಳುತ್ತೇವೆ.

ಬಹಳ ಜನರಿಗೆ ಗೊತ್ತಿಲ್ಲದ ಸಂಗತಿಯೇನೆಂದರೆ, ಗೂಗಲ್ ಹಲವು ವರ್ಷಗಳ ಹಿಂದೆಯೇ ಕೀಪ್ (Keep) ಎಂಬ ಒಂದು ಆ್ಯಪ್ ಅನ್ನು ಸಿದ್ಧಪಡಿಸಿದೆ. ಅದು ಆಂಡ್ರಾಯ್ಡ್‌ನಲ್ಲೂ ಐಒಎಸ್‌ನಲ್ಲೂ ಕೆಲಸ ಮಾಡುತ್ತದೆ. ಅದೊಂದು ಸರಳ ಸುಂದರವಾದ ನೋಟ್ ಬರೆದಿಟ್ಟುಕೊಳ್ಳುವ ಆ್ಯಪ್. ಅದರಲ್ಲಿ ಹೆಚ್ಚೇನೂ ಫೀಚರ್ ಇಲ್ಲ.



ಅದೆಲ್ಲ ಸರಿ, ಈಗ 'ಎಐ' ಬಂದ ಕಾಲದಲ್ಲೂ ನಾವು ಪುಸ್ತಕ-ಪೆನ್ನು ಹಿಡಿದುಕೊಂಡೋ, ತುಂಬಾ ಸರಳವಾದ ಕೀಪ್‌ನಂತಹ ಆ್ಯಪನ್ನು ಇಟ್ಟುಕೊಂಡು ನೋಟ್ಸ್ ಬರೆದುಕೊಳ್ಳುತ್ತಿರಬೇಕೆ? ಹೀಗೆಂದು ನೀವು ಕೇಳಬಹುದು.

ನಿಜ, ಇಂಥದ್ದೊಂದು ಪ್ರಶ್ನೆಗೆ ಉತ್ತರವಾಗಿ 'ಕೀಪ್' ಅನುಭವವನ್ನು ಮತ್ತು 'ಜೆಮಿನೈ' ಬುದ್ಧಿಯನ್ನೆರಡನ್ನೂ ಬಳಸಿಕೊಂಡು ಗೂಗಲ್ ಈಗ 'ನೋಟ್‌ಬುಕ್‌ಎಲ್‌ಎಂ' (NotebookLM) ಎಂಬ ನೋಟ್ ಬರೆದಿಡುವ ಆ್ಯಪ್ ಅನ್ನು ಸಿದ್ಧಪಡಿಸಿದೆ. ಬಹುಶಃ ಸರಳ ಜನರೇಟಿವ್ ಎಐಗಿಂತ ಹೆಚ್ಚು ಉಪಯುಕ್ತ ಸೌಕರ್ಯ ಇದಾಗಿದ್ದರೂ, ಇದಕ್ಕೆ ಪ್ರಚಾರ ಸಿಕ್ಕಿದ್ದು ಕಡಿಮೆ. ಇದು ಜೆಮಿನೈಯಲ್ಲಿರುವ 'ಜೆನರೇಟಿವ್ ಎಐ' ಅನ್ನೇ ಬಳಸಿಕೊಳ್ಳುತ್ತದೆ. ಅಷ್ಟಕ್ಕೂ ಈಗ ಗೂಗಲ್ ಆಗಲೀ, ಮೈಕ್ರೋಸಾಫ್ಟ್ ಆಗಲೀ ಅಥವಾ ಇತರ ಯಾವುದೇ ದೈತ್ಯ ಕಂಪನಿಗಳು ಜನರೇಟಿವ್ ಎಐ ಬಳಸಿಕೊಳ್ಳದೇ ಯಾವ ಹೊಸ ಅಪ್ಲಿಕೇಶನ್‌ಗಳನ್ನು ಹೊರತಂದಿವೆ ಹೇಳಿ?!

ಈ ನೋಟ್‌ಬುಕ್‌ಎಲ್‌ಎಮ್‌ನ ವಿಶೇಷತೆಯೇನೆಂದರೆ, ನೀವು ಇದಕ್ಕೆ ಪುಟಗಟ್ಟಲೆ ಸಂಶೋಧನೆ ಪೇಪರುಗಳನ್ನು ಕೊಟ್ಟರೂ ಕೆಲವೇ ಕ್ಷಣದಲ್ಲಿ ನಿಮಗೆ ಅದರ ಸಾರಾಂಶವನ್ನು ತಂದುಕೊಡುತ್ತದೆ. ಒಂದೆರಡು ಗಂಟೆಗಳವರೆಗೆ ಕಥೆ ಹೇಳಿ ಕಾಲಕ್ಷೇಪ ಮಾಡಿದ್ದ ಒಂದು ಯೂಟ್ಯೂಬ್ ವಿಡಿಯೊವನ್ನು ನೋಡುತ್ತಾ ಕುಳಿತುಕೊಳ್ಳುವುದು ಬೇಸರ ಎಂದು ಅನಿಸಿದರೆ, ಅದರ ಲಿಂಕ್ ಅನ್ನು ನೋಟ್‌ಬುಕ್‌ಎಲ್‌ಎಮ್‌ಗೆ ಕೊಟ್ಟು, ಇದರ ಸಾರಾಂಶ ಹೇಳು ಎಂದರೆ ಕೆಲವು ಕ್ಷಣಗಳಲ್ಲಿ ಅದರ ಸಾರಾಂಶವನ್ನು ತಂದಿಡುತ್ತದೆ. ಬರಿ ಅಷ್ಟೇ ಅಲ್ಲ, ಹಾಗೆ ಸಾರಾಂಶವನ್ನು ತಂದು ಕೊಡುವಾಗ ಒಂದೊಂದು ವಾಕ್ಯವನ್ನೂ ತಾನು ಎಲ್ಲಿಂದ ಎರವಲು ಪಡೆದುಕೊಂಡಿದ್ದೇನೆ ಎಂಬುದರ ಉಲ್ಲೇಖವನ್ನೂ ಅದು ಮಾಡುತ್ತದೆ. ಹೀಗಾಗಿ, ನಮಗೆ ಬೇಕಾದರೆ ಆ ಸೈಟೇಶನ್‌ನ ಜಾಡು ಹಿಡಿದು ಹೋಗಿ ಇನ್ನಷ್ಟನ್ನು ಓದಿಕೊಳ್ಳಬಹುದು ಅಥವಾ ನೋಡಿಕೊಳ್ಳಬಹುದು.

ಗೂಗಲ್ ಬಳಕೆದಾರರು ಈಗಾಗಲೇ ಕೀಪ್ ಅನ್ನು ಬಳಕೆ ಮಾಡುತ್ತಿದ್ದರೆ, ಅದರ ಸುಧಾರಿತ, ಅತ್ಯಾಧುನಿಕ ಆವೃತ್ತಿ ಎಂದು ಈ ನೋಟ್‌ಬುಕ್‌ಎಲ್‌ಎಮ್ ಅನ್ನು ಬಳಸಲು ಪ್ರಯತ್ನಿಸಬಹುದು. ಅದೆಲ್ಲಕ್ಕಿಂತ ಹೆಚ್ಚಾಗಿ, ದೈನಂದಿನ ಬಳಕೆಗಿಂತ ಈ ನೋಟ್‌ಬುಕ್‌ಎಲ್‌ಎಮ್ ಹೆಚ್ಚು ಆಳವಾದ ಅಧ್ಯಯನಕ್ಕೆ ಹೇಳಿ ಮಾಡಿಸಿದಂತಿದೆ. ಅದರಲ್ಲೂ ಕಾಲೇಜುವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಂಶೋಧಕರಿಗಂತೂ ಇದು ಮುಂದಿನ ದಿನಗಳಲ್ಲಿ ಅತ್ಯಮೂಲ್ಯ ಆ್ಯಪ್ ಆಗುವುದರಲ್ಲಿ ಸಂದೇಹವೇ ಇಲ್ಲ. ಒಬ್ಬ ವಿದ್ಯಾರ್ಥಿ ತಾನು ತರಗತಿಯಲ್ಲಿ ಕೇಳಿಸಿಕೊಂಡಿದ್ದನ್ನು ರೆಕಾರ್ಡ್ ಮಾಡಿಕೊಂಡು, ಅದನ್ನು ನೋಟ್‌ಬುಕ್‌ಎಲ್‌ಎಂಗೆ ಅಪ್‌ಲೋಡ್ ಮಾಡಿ, ಅದರ ಸಾರಾಂಶವನ್ನು ಕೊಡು ಎಂದು ಕೇಳಿದರೆ ಇಡೀ ಉಪನ್ಯಾಸದ ಸಾರಾಂಶವನ್ನು ಅದು ತೆಗೆದುಕೊಡುತ್ತದೆ. ಅದೇ ರೀತಿ, ವಿದ್ಯಾರ್ಥಿಗಳಿಗೆ ನೋಟ್ಸ್ ಕೊಡಬೇಕಾದರೆ ಉಪನ್ಯಾಸಕರು ತಮ್ಮದೇ ಉಪನ್ಯಾಸವನ್ನು ರೆಕಾರ್ಡ್ ಮಾಡಿಟ್ಟುಕೊಂಡು, ಅದನ್ನೇ ನೋಟ್ಸ್ ಆಗಿ ಪರಿವರ್ತಿಸಿಕೊಡುವಂತೆ ನೋಟ್‌ಬುಕ್‌ಎಲ್‌ಎಮ್‌ಗೆ ಹೇಳಿದರೆ, ಕ್ಷಣಮಾತ್ರದಲ್ಲಿ ನೋಟ್ಸ್ ಸಿದ್ಧವಾಗಿರುತ್ತದೆ. ಒಬ್ಬ ಸಂಶೋಧನಾ ವಿದ್ಯಾರ್ಥಿ ಒಂದು ವಿಷಯದ ಮೇಲೆ ಅಧ್ಯಯನ ನಡೆಸುತ್ತಿದ್ದರೆ, ತುರ್ತಾಗಿ ಯಾವುದೋ ವಿಷಯವನ್ನು ಆಕರಗ್ರಂಥಗಳ ಸಮೂಹದಿಂದ ಹುಡುಕಬೇಕಿದೆ ಎಂದಾದರೆ, ಆಕರವನ್ನು ನೋಟ್‌ಬುಕ್‌ಎಲ್‌ಎಂಗೆ ಕೊಟ್ಟು, ಇಂಥ ವಿಷಯದ ಬಗ್ಗೆ ರೆಫರೆನ್ಸ್ ಹುಡುಕಿಕೊಡು ಎಂದರೆ ಕ್ಷಣ ಮಾತ್ರದಲ್ಲಿ ಅದು ಹುಡುಕಿಕೊಡುತ್ತದೆ.ಇತ್ತೀಚೆಗೆ ಇದಕ್ಕೆ ಇನ್ನೂ ಒಂದು ಫೀಚರ್ ಸೇರಿಸಲಾಗಿದ್ದು, ಸಿದ್ಧಪಡಿಸಿದ ಸಾರಾಂಶವನ್ನು ಅದು ಧ್ವನಿರೂಪದಲ್ಲೂ ಸಿದ್ಧಪಡಿಸಿಕೊಡುತ್ತದೆ. ಅದಷ್ಟೇ ಆಗಿದ್ದರೆ, ಈಗಾಗಲೇ ಇರುವ 'ಟೆಕ್ಸ್ ಟು ಸ್ಪೀಚ್'ಗೂ ಇದಕ್ಕೂ ಏನೂ ವ್ಯತ್ಯಾಸವಿಲ್ಲವಲ್ಲ ಎಂದು ನಾವು ಹೇಳಬಹುದಾಗಿತ್ತು. ಟೆಕ್ಸ್ಟ್ ಟು ಸ್ಪೀಚ್ ಸಾಫ್ಟ್‌ವೇರ್‌ಗಳು ಒಂದು ಲಘು ಪ್ರಬಂಧವನ್ನೂ ಅದೆಷ್ಟು ನೀರಸವಾಗಿ ಹೇಳಿ ಮುಗಿಸುತ್ತವೆ ಎಂದರೆ, ಕೇಳುತ್ತಾ ನಿದ್ದೆಯೇ ಬಂದುಬಿಡಬಹುದು. ಆದರೆ, ನೋಟ್‌ಬುಕ್‌ಎಲ್‌ಎಮ್ ಹಾಗಲ್ಲ. ಅದಕ್ಕೆ ಅದನ್ನು ಆಸಕ್ತಿಕರವಾಗಿ ಹೇಳುವುದೂ ಗೊತ್ತಿದೆ. ಒಂದು ತುಂಬಾ ಸಹಜವಾದ ಪಾಡ್‌ಕಾಸ್ಟ್ ಹೇಗೆ ನಡೆಯುತ್ತದೆಯೋ ಅದೇ ರೀತಿ ಈ ಮಾಹಿತಿ ಯನ್ನು ಇಬ್ಬರು ಅಥವಾ ಮೂವರು ಪಾತ್ರಗಳು ಇರುವ ಒಂದು ಸಂವಾದವನ್ನಾಗಿ ಇದು ಸಿದ್ಧಪಡಿಸಿಕೊಡುತ್ತದೆ. ನಾವು ಮಾತನಾಡುವಾಗ ಸಹಜವಾಗಿ ಹೊರಡಿಸುವ 'ಊಂ...', 'ಆಂ...' ಎಂಬ ಧ್ವನಿಯನ್ನೂ ಇದು ಸೇರಿಸಿಕೊಳ್ಳುತ್ತದೆ. ಮಧ್ಯೆ ಮಧ್ಯೆ ನಗು ಇರುತ್ತದೆ. ಕಾಲೆಳೆಯುವಿಕೆ ಕೂಡ ಇರುತ್ತದೆ. ನಿರೂಪಕ ಹೇಳಿದ್ದಕ್ಕೆ ಕೆಲವು ಬಾರಿ ಇನ್ನೊಂದು ಪಾತ್ರ ಒಪ್ಪದೇ ವಿರುದ್ಧ ಅಭಿಪ್ರಾಯವನ್ನು ಮಂಡಿಸುತ್ತದೆ. ಇದೆಲ್ಲವೂ ಎಷ್ಟು ಸಹಜವಾಗಿ ನಡೆಯುತ್ತದೆ ಎಂದರೆ ನಿಜವಾಗಿಯೂ ಇದನ್ನು ಯಾರೋ ಮನುಷ್ಯರೇ ಮಾತನಾಡಿ ಸಿದ್ಧಪಡಿಸಿರಬಹುದು ಎಂಬ ಭಾವವನ್ನು ನಮಗೆ ಮೂಡಿಸುತ್ತದೆ. ಹೀಗಾಗಿ, ಈಗ ವಿವಿಧ ವಿಷಯಗಳ ಬಗ್ಗೆ ಪಾಡ್‌ಕಾಸ್ಟ್ ಸಿದ್ಧಪಡಿಸುವವರು ನೋಟ್‌ಬುಕ್‌ಎಲ್‌ಎಮ್ ಮೊರೆ ಹೋಗುತ್ತಿದ್ದಾರೆ. ಈ ನೋಟ್‌ಬುಕ್‌ಎಲ್‌ಎಮ್‌ನ ವಿಶೇಷತೆಯೆಂದರೆ, ಇತರ ಜನರೇಟಿವ್ ಎಐ ರೀತಿಯಲ್ಲಿ ಮಾನವನಿಗೆ ಪರ್ಯಾಯ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಹೊರಟಂತಿರುವುದಿಲ್ಲ. ಬದಲಿಗೆ, ಇದು ನಮ್ಮ ಕೆಲಸಗಳನ್ನು ಸರಾಗವಾಗಿ ಮಾಡಿಕೊಡುವ ಸಹಾಯಕನಂತೆ ವರ್ತಿಸುತ್ತದೆ. ಇದು ಯಾವುದೇ ಹೊಸ ಸಂಶೋಧನೆಯನ್ನು ಮಾಡುವುದಿಲ್ಲ. ಈಗಾಗಲೇ ಮನುಷ್ಯ ಮಾಡಿದ ಸಂಶೋಧನೆಯನ್ನು ಅರ್ಥ ಮಾಡಿಕೊಂಡು ಅದರಲ್ಲೇನಿದೆ ಎಂಬುದರ ಮಾಹಿತಿಯನ್ನು ಮಾತ್ರ ಸಾರದ ರೂಪದಲ್ಲಿ ನಮಗೆ ಸಾದರಪಡಿಸುತ್ತದೆ. ಸದ್ಯಕ್ಕೆ ನೋಟ್‌ಬುಕ್‌ಎಲ್‌ಎಂ ಅನ್ನು ತುಂಬಾ ಕೆಲವೇ ಪರಿಣಿತರನ್ನು ಇಟ್ಟುಕೊಂಡು ಗೂಗಲ್ ಸಿದ್ಧಪಡಿಸಿದೆ. ಇದಕ್ಕೆ ಪ್ರತ್ಯೇಕ ಆ್ಯಂಡ್ರಾಯ್ಡ್ ಆ್ಯಪ್ ಕೂಡ ಇಲ್ಲ, ಬರಿ ವೆಬ್ ಆ್ಯಪ್ ಇದೆ. ಅಷ್ಟೇ ಅಲ್ಲ, ಇದನ್ನು ಜನರಿಗೆ ತಲುಪಿಸುವಲ್ಲಿ ಗೂಗಲ್ ವಿಶೇಷ ಆಸ್ಥೆಯನ್ನೂ ವಹಿಸಿದಂತಿಲ್ಲ. ಆದರೆ, ಇಷ್ಟು ನಗಣ್ಯವಾಗಿದ್ದೂ ಇದು ಮಾಡುತ್ತಿರುವ ಕೆಲಸವನ್ನು ಗಮನಿಸಿದರೆ, ಗೂಗಲ್ ಇದನ್ನು ಒಂದು ಮುಖ್ಯ ಆ್ಯಪ್ ಆಗಿಯೋ ಅಥವಾ ತನ್ನ ಪ್ರಮುಖ ಪ್ರಾಡಕ್ಟ್‌ಗಳಲ್ಲಿ ಒಂದು ಎಂಬಂತೆ ಇದನ್ನು ಮುಂದಿನ ದಿನಗಳಲ್ಲಿ ಪ್ರಚಾರ ಮಾಡಬಹುದೇನೋ? ಸದ್ಯಕ್ಕಂತೂ ಇದು ಸಾಮಾನ್ಯ ಜನರೇಟಿವ್ ಎಐ ಅಪ್ಲಿಕೇಶನ್‌ಗಳಿಗಿಂತಲೂ ಜನರ ಬಳಕೆಗೆ ಹೆಚ್ಚು ಅನುಕೂಲಕರವಾಗಿರುವುದಂತೂ ನಿಜ. ❖

ಹಳೆ ಬೀಜ ಹೊಸ ತಂತ್ರ ಕೂಡಿರಲು ಕೃಷಿ ಸೊಗಸು

ಅಮೃತೇಶ್ವರಿ ಬಿ.


ಸಸ್ಯಗಳಲ್ಲಿನ ಜೈವಿಕ ಹಾಗೂ ಆನುವಂಶಿಕ ವೈವಿಧ್ಯವನ್ನು ಕಾಪಾಡಿಕೊಳ್ಳಲು ಅವುಗಳ ಬೀಜಗಳನ್ನು ಭವಿಷ್ಯಕ್ಕೆಂದು ಸಂರಕ್ಷಿಸುವುದು ಹಳೆಯ ಉಪಾಯ. ಇದನ್ನೇ 'ಸೀಡ್ ಬ್ಯಾಂಕ್' ಎನ್ನುತ್ತೇವೆ. ಬೀಜಗಳನ್ನು ಹೀಗೆ ಸಂರಕ್ಷಿಸಿಕೊಳ್ಳುವುದರಿಂದ ಬಹಳ ಕಾಲದವರೆಗೆ ಯಾವುದೇ ಜಾತಿಯ ಸಸ್ಯವು ನಶಿಸಿ ಹೋಗದಂತೆ ಉಳಿಸಿಕೊಳ್ಳಬಹುದು. ಜೊತೆಗೆ ನಮಗೆ ಬೇಕಾದ ಸಸ್ಯದ ತಳಿಗಳನ್ನು ಕಸಿ ಮಾಡಿ ಹೊಸದಾದ ಸಸ್ಯಜಾತಿಗಳನ್ನು ಸೃಷ್ಟಿಸಿಕೊಳ್ಳಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲಾ ಇನ್ನೂ ಬೇರೆಬೇರೆ ರೀತಿಯಲ್ಲಿ ಸಂರಕ್ಷಿತ ತಳಿಯ ಬೀಜಗಳನ್ನು ಬಳಸಿಕೊಳ್ಳಬಹುದು. ಆದರೆ ಇಲ್ಲೊಂದು ಸಮಸ್ಯೆಯಿದೆ. ಈ ವಿಧಾನದಿಂದ ಎಷ್ಟೋ ವರ್ಷಗಳ ಹಳೆಯ ಬೀಜಗಳನ್ನೇನೊ ಉಳಿಸಿಕೊಂಡುಬಿಡುತ್ತೇವೆ. ಆದರೆ ಬೀಜಗಳು ಹಳೆಯದಾದಷ್ಟೂ ಇವುಗಳು ಮೊಳಕೆಯೊಡೆಯುವ ವೇಗವೂ ಕಡಿಮೆಯಾಗುತ್ತದಂತೆ. ಬೀಜಗಳಲ್ಲಿನ ಚೈತನ್ಯವೂ ಕುಸಿಯುತ್ತದಂತೆ. ಇದರಿಂದ ಕೃಷಿವಲಯದಲ್ಲಿನ ಉತ್ಪಾದಕತೆಯ ಮೇಲೆ ಪರಿಣಾಮವಾಗುತ್ತದೆ. ಇದು ಆರ್ಥಿಕ ನಷ್ಟ ಮಾತ್ರವಲ್ಲದೆ, ಆನುವಂಶಿಕ ವೈವಿಧ್ಯವನ್ನು ಕಾಪಾಡಬೇಕೆನ್ನುವ ಬೀಜಬ್ಯಾಂಕುಗಳ ಪರಿಶ್ರಮವನ್ನೂ ವ್ಯರ್ಥವಾಗಿಸಿಬಿಡುತ್ತದೆ. ಇವರ ಪ್ರಯತ್ನವನ್ನು ಸಫಲವಾಗಿಸಲೆಂದೆ ಅರ್ಕನ್ಸಾಸ್ ವಿಶ್ವವಿದ್ಯಾಲಯದ ಸಂಶೋಧಕರಾದ ಡಾ. ಜುನ್ ಝೂ ಮತ್ತು ಸಂಗಡಿಗರು, ಸುಸ್ಥಿರವಾದ ಮತ್ತು ಅಗ್ಗದ ಪರಿಹಾರವೊಂದನ್ನು ಪತ್ತೆಮಾಡಿದ್ದಾರಂತೆ. ಅದುವೇ 'ಕೊರೊನಾ ಡೈಎಲೆಕ್ಟ್ರಿಕ್ ಬ್ಯಾರಿಯರ್ ಡಿಸ್ಚಾರ್ಜ್ ಮೈಕ್ರೊರಿಯಾಕ್ಟರ್' ಎನ್ನುವ ಸಾಧನ (Solar Powered Corona Dielectric Barrier Discharge Microreactor). ಇದು ಹಳೆಯ ಬೀಜಗಳನ್ನು ಪುನಃಶ್ಚೇತನಗೊಳಿಸಿ ಆರೋಗ್ಯಕರವಾಗಿ ಮೊಳಕೆಯೊಡೆಯುವುದನ್ನು ಉತ್ತೇಜಿಸುತ್ತದೆ. ಈ ವರದಿಯನ್ನು ಸಂಶೋಧನೆಯನ್ನು ಮೊನ್ನೆ 'ಫ್ರಂಟಿಯರ್ಸ್ ಆಫ್ ಅಗ್ರಿಕಲ್ಚರಲ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್' ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಡಾ. ಜುನ್ ಮತ್ತು ಸಂಗಡಿಗರು ವಿನ್ಯಾಸ ಮಾಡಿರುವ ಹೊಸ ಸಾಧನದಲ್ಲಿ, ಎರಡು ಎಲೆಕ್ಟ್ರೋಡುಗಳಿರುತ್ತವೆ. ಇವುಗಳ ನಡುವೆ ಹೆಚ್ಚಿನ ವೋಲ್ಟೇಜಿನ ಎ.ಸಿ ವಿದ್ಯುತ್ತನ್ನು ಹರಿಸಲಾಗುತ್ತದೆ. ಆಗ ದಟ್ಟವಾದ ಪ್ಲಾಸ್ಮಾ ಉತ್ಪಾದನೆಯಾಗುತ್ತದೆ. 'ಪ್ಲಾಸ್ಮಾ' ಎನ್ನುವುದು ಘನ, ದ್ರವ, ಅನಿಲ ಇವುಗಳ ನಂತರದ ನಾಲ್ಕನೇ ಸ್ಥಿತಿ. ಹೆಚ್ಚಿದ ವೋಲ್ಟೇಜಿನ ವಿದ್ಯುತ್ ಹರಿಯುತ್ತಿದ್ದಂತೆ ಈ ಪ್ಲಾಸ್ಮಾವು ಸೌರಶಕ್ತಿಯನ್ನು ಬಳಸಿಕೊಂಡು ನೀರನ್ನು ಸಕ್ರಿಯಗೊಳಿಸುತ್ತದೆ. ಈ ನವೀನ ವ್ಯವಸ್ಥೆಯು ಬೀಜಕ್ಕೆ ಮೊಳಕೆಯೊಡೆಯಲು ಸೂಕ್ತವಾದ ರಾಸಾಯನಿಕ ಹಾಗೂ ಜೈವಿಕ ವಾತಾವರಣವನ್ನು ಒದಗಿಸುತ್ತದೆಯಂತೆ. ಈ ಪಾರಿಸರಿಕ ಅಂಶಗಳನ್ನು ಖಚಿತಪಡಿಸಿಕೊಂಡ ನಂತರ ಈ ಸಾಧನವನ್ನು ಪರೀಕ್ಷೆಗೊಳಪಡಿಸಿದ್ದಾರೆ. 23 ವರ್ಷಗಳಷ್ಟು ಹಳೆಯದಾದ ಸ್ಪಿನಾಚ್ (ಪಾಲಾಕ್) ಬೀಜಗಳನ್ನು ಈ ಸಾಧನವನ್ನು ಬಳಸಿಕೊಂಡು ಮೊಳಕೆಯೊಡೆಸಿ ನೋಡಿದ್ದಾರೆ. ಜೊತೆಯಲ್ಲೇ, ಸಾಮಾನ್ಯವಾಗಿ ಬೀಜವನ್ನು ಮೊಳೆಸುವ ವಿಧಾನದೊಂದಿಗೂ ಹೋಲಿಸಿ ನೋಡಿದ್ದಾರಂತೆ. ಅದೃಷ್ಟವಶಾತ್ ಪ್ಲಾಸ್ಮಾದಿಂದ ಸಕ್ರಿಯಗೊಂಡ ನೀರನ್ನು ಬಳಸಿ ಮೊಳೆಸಿದ ಬೀಜಗಳಲ್ಲಿ ಮೊಳಕೆಯೊಡೆಯುವ ಪ್ರಮಾಣ ಪ್ರತಶತ 135ರಷ್ಟಿದ್ದು, ಬೆಳವಣಿಗೆಯು ಉತ್ತಮವಾಗಿತ್ತಂತೆ. ಈ ಯಶಸ್ಸಿಗೆ ಕಾರಣ ಪ್ಲಾಸ್ಮಾದಿಂದ ಸಕ್ರಿಯಗೊಂಡ ನೀರಿನಿಂದಾಗುವ ಜೀವರಾಸಾಯನಿಕ ಮಾರ್ಪಾಡು ಎನ್ನುತ್ತಾರೆ, ಸಂಶೋಧಕರು.

ಒಂದು ಬೀಜವು ಮೊಳೆಯಬೇಕಾದರೆ ನೀರು-ಮಣ್ಣಿನಲ್ಲಿನ ಕ್ಷಾರೀಯ ಗುಣ, ನೈಟ್ರೇಟು ಮಟ್ಟ, ನೀರಿನ ಎಲೆಕ್ಟ್ರಾನುಗಳನ್ನು ಕೊಡುಕೊಳ್ಳುವ ಸಾಮರ್ಥ್ಯ, (ಆಕ್ಸಿಡೇಷನ್ ರಿಡಕ್ಷನ್ ಪೊಟೆನ್ಷಿಯಲ್) ಮೊದಲಾದ ಅಂಶಗಳು ಅವಶ್ಯವಾಗಿರುತ್ತವೆ. ಯಾವುದೇ ಬೀಜವು ಹೊಸದಾಗಿದ್ದರೆ ಮಣ್ಣಿನಲ್ಲಿ ಹಾಕಿದಾಗ, ಮಣ್ಣಿನ ಪಾರಿಸರಿಕ ಅಂಶವು ಅದಕ್ಕೆ ಬೇರೆಯಾಗಿರುವುದಿಲ್ಲವುದರಿಂದ ತಾನಾಗಿಯೇ ಸುಲಭವಾಗಿ ಮೊಳೆತು ಗಿಡವಾಗುತ್ತದೆ. ಆದರೆ ಹಳೆಯ ಬೀಜಗಳಿಗೆ ಹಾಗಾಗುವುದಿಲ್ಲ. ಕಾಲ ಕಳೆದಂತೆ ಮಣ್ಣಿನ ಗುಣದಲ್ಲಿಯೂ ವ್ಯತ್ಯಾಸವಾಗಿರುತ್ತದೆ. ಬೀಜದ ಆನುವಂಶಿಕ ಗುಣಗಳೂ ಸುಪ್ತಸ್ಥಿತಿಗೆ ತಲುಪಿರುತ್ತವೆ. ಅಂತಹ ದೀರ್ಘಾವಧಿಯ ನಂತರ ಬೀಜ ಮೊಳೆಯಬೇಕಾದರೆ ಅದಕ್ಕೆ ಸೂಕ್ತವಾದ ವಾತಾವರಣವನ್ನು ನಾವು ಒದಗಿಸಬೇಕಾಗುತ್ತದೆ. ಈ ಪ್ಲಾಸ್ಮಾದೊಂದಿಗೆ ಉಪಚರಿಸಿದ ನೀರು ಮಾಡುವುದು ಅದನ್ನೇ. ಡಾ. ಜುನ್ ಮತ್ತು ಸಂಗಡಿಗರು ರೂಪಿಸಿರುವ ಮೈಕ್ರೊರಿಯಾಕ್ಟರ್, ನೀರಿನ 'ಪಿಎಚ್' ಮಟ್ಟವನ್ನು ಕಡಿಮೆ ಮಾಡುತ್ತದೆ; ಆಕ್ಸಿಡೇಷನ್-ರಿಡಕ್ಷನ್ ಪೊಟೆನ್ಷಿಯಲ್ ಮತ್ತು ನೈಟ್ರೇಟ್ ಮಟ್ಟವನ್ನು ಹೆಚ್ಚಾಗಿಸಿ ಬೀಜ ಮೊಳೆಯಲು ಸೂಕ್ತ ಪರಿಸರವನ್ನು ಸೃಷ್ಟಿ ಮಾಡಿಕೊಡುತ್ತದೆ. ಮತ್ತು ಬೀಜಗಳನ್ನು ಸುಪ್ತಸ್ಥಿತಿಯಿಂದ ಹೊರತಂದು ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಸಸ್ಯಹಾರ್ಮೋನುಗಳಾದ 'ಗಿಬ್ಬರ್ಲಿನ್ಸ್' ಹಾಗೂ 'ಅಬ್ಸಿಸಿಕ್ ಆಮ್ಲ'ಗಳನ್ನು ಸಕ್ರಿಯಗೊಳಿಸುತ್ತದೆ. ಹೀಗೆ ಈ ಸೌರಶಕ್ತಿಯಾಧಾರಿತ ಪ್ಲಾಸ್ಮಾ ಉತ್ಪಾದಕ ಸಾಧನವು ಬೀಜಗಳ ಚೈತನ್ಯವನ್ನು ಮರುಸ್ಥಾಪಿಸುವುದಲ್ಲದೇ, ಬೀಜಗಳು ಪುನಃಶ್ಚೇತನಗೊಳ್ಳುವ ಆಣ್ವಿಕ ಮಟ್ಟದ ಪರಿವರ್ತನೆಯ ಬಗ್ಗೆ ಒಂದಿಷ್ಟು ಒಳನೋಟಗಳನ್ನೂ ತಿಳಿಸುತ್ತದೆ. ಈ ಮೂಲಕ ಈ ಸೌರಚಾಲಿತ ತಂತ್ರಜ್ಞಾನವು ಸುಸ್ಥಿರವಾದ ಕೃಷಿಗೆ ಒಂದು ಮಹತ್ವದ ಹೆಜ್ಜೆಯಾಗಲಿದೆ ಎನ್ನುತ್ತಾರೆ, ಸಂಶೋಧಕರು.

ಈ ಆವಿಷ್ಕಾರವು ನವೀಕರಿಸಬಹುದಾದ ಶಕ್ತಿಮೂಲವನ್ನು ಉಪಯೋಗಿಸಿಕೊಂಡು, ಆಹಾರೋತ್ಪಾದನೆಯಲ್ಲಿರುವ ಸವಾಲುಗಳನ್ನು ನಿರ್ವಹಿಸುವುದಲ್ಲದೆ, ತ್ಯಾಜ್ಯವನ್ನೂ ನಿಯಂತ್ರಿಸುತ್ತದೆ. ಹಳೆಯ ಬೀಜಗಳ ಜೀವಶಕ್ತಿಯನ್ನು ವಿಸ್ತರಿಸುತ್ತಾ, ಹೆಚ್ಚುತ್ತಿರುವ ಜಾಗತಿಕ ಸವಾಲುಗಳ ನಡುವೆ ಆಹಾರ ಭದ್ರತೆ ಮತು ಸುಸ್ಥಿರತೆಯನ್ನು ಕಾಯ್ದುಕೊಳ್ಳಲು ಪ್ರಸ್ತುತ ಪ್ಲಾಸ್ಮಾಧಾರಿತ ತಂತ್ರಜ್ಞಾನವು ತನ್ನ ಕೊಡುಗೆಯನ್ನು ನೀಡಲಿದೆ. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

11) ಕಣ್ಣಿನ ಹೊಂದಾಣಿಕೆ ಕುರಿತು ಬರೆಯಿರಿ

ಉತ್ತರ:– ಕಣ್ಣಿನ ಮಸೂರವು ತಂತುಗಳು, ಜೆಲ್ಲಿಯಂತಹ ವಸ್ತುಗಳಿಂದ ಕೂಡಿದೆ. ಇದರ ವಕ್ರತೆಯನ್ನು ಸಿಲಿಯರಿ ಸ್ನಾಯುಗಳಿಂದ ಸ್ವಲ್ಪಮಟ್ಟಿಗೆ ಮಾರ್ಪಡಿಸಬಹುದು. ಕಣ್ಣಿನ ಮಸೂರದ ವಕ್ರತೆಯ ಬದಲಾವಣೆಯಿಂದ ಅದರ ಸಂಗಮದೂರವನ್ನು ಬದಲಾಯಿಸಬಹುದು. ಸ್ನಾಯುಗಳು ವಿಶ್ರಾಂತಗೊಂಡಾಗ ಮಸೂರವು ತೆಳ್ಳಗಾಗುತ್ತದೆ ಮತ್ತು ಸಂಗಮದೂರ ಹೆಚ್ಚಾಗುತ್ತದೆ. ಇದರಿಂದ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಹುದು. ನೀವು ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕಣ್ಣಿನ ಮಸೂರದ ಸಂಗಮದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಎನ್ನುತ್ತೇವೆ. ಆದರೂ ಸಹ, ಕಣ್ಣಿನ ಮಸೂರದ ಸಂಗಮ ದೂರವನ್ನು ಒಂದು ಕನಿಷ್ಟ ಮಿತಿಗಿಂತ ಕಡಿಮೆ ಮಾಡಲು ಸಾಧ್ಯವಿಲ್ಲ. ಮುದ್ರಿತವಾದ ಒಂದು ಪುಟವನ್ನು ಕಣ್ಣಿಗೆ ತುಂಬಾ ಹತ್ತಿರ ಹಿಡಿದುಕೊಂಡು ಓದಲು ಪ್ರಯತ್ನಿಸಿ. ನೀವು ಮಸುಕಾಗಿರುವ ಬಿಂಬವನ್ನು ನೋಡಬಹುದು ಅಥವಾ ಕಣ್ಣಿಗೆ ಹೆಚ್ಚು ದಣಿವಾಗಬಹುದು. ನೀವು ಒಂದು ವಸ್ತುವನ್ನು ಆರಾಮವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಲು ಅದನ್ನು ಕಣ್ಣಿನಿಂದ 25 ಸೆಂ.ಮೀ. ಅಂತರದಲ್ಲಿಡಬೇಕು. ಕಣ್ಣಿಗೆ ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡ ರಹಿತವಾಗಿ ಕಾಣುವ ಕನಿಷ್ಟ ದೂರವನ್ನು ಸ್ಪಷ್ಟ ದೃಷ್ಟಿಯ ಕನಿಷ್ಟ ದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದೂ ಸಹ ಕರೆಯುತ್ತೇವೆ. ಸಾಮಾನ್ಯ ದೃಷ್ಟಿ ಹೊಂದಿರುವ ಒಬ್ಬ ಪ್ರೌಢ ವಯಸ್ಕನಿಗೆ ಇದು 25 ಸೆಂ.ಮೀ. ಆಗಿದೆ. ಕಣ್ಣು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯವಾಗುವ ಅತಿ ಗರಿಷ್ಟ ದೂರವನ್ನು ಕಣ್ಣಿನ ಗರಿಷ್ಟ ದೂರ ಬಿಂದು ಎನ್ನುತ್ತೇವೆ. ಇದು ಸಾಮಾನ್ಯ ಕಣ್ಣಿಗೆ ಅನಂತ ದೂರವಾಗಿದೆ. ಗಮನಿಸಬೇಕಾದ ಅಂಶವೆಂದರೆ ಸಾಮಾನ್ಯ ಕಣ್ಣು 25 ಸೆಂ.ಮೀ. ಮತ್ತು ಅನಂತ ದೂರದ ನಡುವಿನ ವಸ್ತುಗಳನ್ನು ಸ್ಪಷ್ಟವಾಗಿ ನೋಡುತ್ತದೆ. ವಯಸ್ಸಾದವರಿಗೆ ಕೆಲವೊಮ್ಮೆ ಕಣ್ಣಿನ ಸ್ಪಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತಾಗುತ್ತದೆ. ಈ ಸ್ಥಿತಿಯನ್ನು ಕಣ್ಣಿನ ಪೊರೆ (cataract) ಎನ್ನುತ್ತೇವೆ. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟುಮಾಡುತ್ತದೆ. ಕಣ್ಣಿನಪೊರೆ ಶಸ್ತ್ರಕ್ರಿಯೆಯ ಮೂಲಕ ಕಣ್ಣಿನ ದೃಷ್ಟಿ ಪುನರ್ ಸ್ಥಾಪಿಸಲು ಸಾಧ್ಯವಿದೆ.


12) ಕಣ್ಣಿನ ದೋಷಗಳು ಯಾವುವು?

ಉತ್ತರ:– ಸಾಮಾನ್ಯವಾಗಿ ಕಣ್ಣಿಗೆ ಮೂರು ಬಗೆಯ ವಕ್ರೀಭವನ ದೋಷಗಳಿವೆ. ಅವು ಯಾವುವೆಂದರೆ (1) ಮಯೋಪಿಯ ಅಥವಾ ಸಮೀಪ ದೃಷ್ಟಿ (2) ಹೈಪರ್‌ಮೆಟ್ರೋಪಿಯ ಅಥವಾ ದೂರ ದೃಷ್ಟಿ (3) ಪ್ರಿಸ್‌ಬಯೋಪಿಯ.

13) ಸಮೀಪದೃಷ್ಟಿಯ ಕುರಿತು ಬರೆಯಿರಿ

ಉತ್ತರ:– ಸಮೀಪದೃಷ್ಟಿ ಇದನ್ನು ಮಯೋಪಿಯ ಎಂದೂ ಕರೆಯುತ್ತೇವೆ. ಸಮೀಪ ದೃಷ್ಟಿ ಹೊಂದಿರುವ ವ್ಯಕ್ತಿ ಸಮೀಪದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲ ಆದರೆ, ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರ. ಈ ವ್ಯಕ್ತಿಗೆ ದೂರದ ಬಿಂದುವು ಅನಂತಕ್ಕಿಂತ ಹತ್ತಿರವಿರುತ್ತದೆ.

ಇಂತಹ ವ್ಯಕ್ತಿಯು ಕೆಲವು ಮೀಟರ್ ಅಂತರದಲ್ಲಿರುವ ವಸ್ತುಗಳನ್ನು ಮಾತ್ರ ಸ್ಪಷ್ಟವಾಗಿ ನೋಡಬಹುದು. ಸಮೀಪದೃಷ್ಟಿಯುಳ್ಳ ಕಣ್ಣಿನಲ್ಲಿ ದೂರದ ವಸ್ತುವಿನ ಬಿಂಬವು ರೆಟಿನಾದ ಮೇಲೆ ರೂಪುಗೊಳ್ಳದೆ, ರೆಟಿನಾದ ಮುಂಭಾಗದಲ್ಲಿ ರೂಪುಗೊಳ್ಳುತ್ತದೆ. ಈ



(a) ಸಮೀಪ ದೃಷ್ಟಿ ಕಣ್ಣಿನ ದೂರ ಬಿಂದು


(b) ಸಮೀಪ ದೃಷ್ಟಿ ಕಣ್ಣು

(c) ಸಮೀಪ ದೃಷ್ಟಿಗೆ ಪರಿಹಾರ

ದೋಷವು ಉಂಟಾಗಲು (i) ಕಣ್ಣಿನ ಮಸೂರದ ವಿಪರೀತ ವಕ್ರತೆ ಅಥವಾ (ii) ಕಣ್ಣು ಗುಡ್ಡೆಯು ಸಹಜಸ್ಥಿತಿಗಿಂತ ಉದ್ದವಾಗಿರುವುದೇ ಕಾರಣ. ಸೂಕ್ತ ಸಾಮರ್ಥ್ಯದ ನಿಮ್ನ ಮಸೂರವನ್ನು ಉಪಯೋಗಿಸಿ ಈ ದೋಷವನ್ನು ನಿವಾರಿಸಬಹುದು.

14) ದೂದೃಷ್ಟಿ ದೋಷದ ಕುರಿತು ಬರೆಯಿರಿ

ಉತ್ತರ:– ಹೈಪರ್ ಮೆಟ್ರೋಪಿಯವನ್ನು ದೂರ ದೃಷ್ಟಿ ಎಂದು ಕೂಡ ಕರೆಯುತ್ತಾರೆ. ಹೈಪರ್‌ಮೆಟ್ರೋಪಿಯ ಹೊಂದಿದ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲ ಆದರೆ, ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರ. ದೂರ ದೃಷ್ಟಿಯುಳ್ಳವರಿಗೆ ಸಮೀಪ ಬಿಂದುವು, ಸಾಮಾನ್ಯ ಸಮೀಪ ಬಿಂದು(25cm)ವಿಗಿಂತ ತುಂಬಾ ದೂರದಲ್ಲಿರುತ್ತದೆ. ಅಂತಹ ವ್ಯಕ್ತಿಗಳು ಸ್ಪಷ್ಟ ಓದಿಗಾಗಿ ಪುಸ್ತಕಗಳನ್ನು ಕಣ್ಣಿನಿಂದ 25cmಗೂ ಹೆಚ್ಚಿನ ಅಂತರದಲ್ಲಿಡಬೇಕು. ಏಕೆಂದರೆ ಹತ್ತಿರದ ವಸ್ತುವಿನಿಂದ ಬರುವ ಬೆಳಕಿನ ಕಿರಣಗಳು ರೆಟಿನಾದ ಹಿಂಭಾಗದಲ್ಲಿ ಕೇಂದ್ರೀಕೃತವಾಗುತ್ತವೆ.



(a) ದೂರ ದೃಷ್ಟಿ ಕಣ್ಣಿನ ಹತ್ತಿರದ ಬಿಂದು

(b) ದೂರ ದೃಷ್ಟಿ ಕಣ್ಣು

(c) ದೂರ ದೃಷ್ಟಿಗೆ ಪರಿಹಾರ

ಈ ದೋಷವುಂಟಾಗಲು ಕಾರಣ (i) ಕಣ್ಣಿನ ಮಸೂರದ ಸಂಗಮದೂರವು ಉದ್ದವಾಗಿರುವುದು ಅಥವಾ (ii) ಕಣ್ಣುಗುಡ್ಡೆಯು ಅತಿಚಿಕ್ಕದಾಗಿರುವುದು. ಈ ದೋಷವನ್ನು ಸೂಕ್ತ ಸಾಮರ್ಥ್ಯವುಳ್ಳ ಪೀನಮಸೂರದ ಸಹಾಯದಿಂದ ಸರಿಪಡಿಸಬಹುದು. ಕೇಂದ್ರೀಕರಿಸುವ ಮಸೂರವುಳ್ಳ (converging) ಕನ್ನಡಕಗಳು ಹೆಚ್ಚುವರಿ ಕೇಂದ್ರೀಕರಿಸುವಿಕೆಯಿಂದ ಪ್ರತಿಬಿಂಬವು ರೆಟಿನಾದ ಮೇಲೆ ರೂಪುಗೊಳ್ಳುವುದನ್ನು ಕಾಣಬಹುದು. *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MAN IN HEALTH AND DISEASES

27. Name the different types of immunity and explain them briefly.

Ans:- (..........Contd)

Such transfers normally take place between the mother and foetus because gamma globulins are selectively transported across the placenta. Breast – fed children also receive antibodies through the mother's milk. These are important sources of protection for the baby during the first few months of life. This is because the antibody synthesising capacity is relatively poor in the newborn infants Inoculation is a method of passive immunization wherein the antibodies are produced in the body of some other vertebrates like a horse or cow in response to a specific antigen and later these antibodies are then injected into the human body when required.

28. What is the role of T lymphocytes?

Ans:- T lymphocytes do not produce antibodies but act directly against antigens by attaching themselves to the antigen bearing cells, it is called cellular immunity. There are 1000s of different types of T cells, each one capable of responding to a specific antigen. When an antigen enters the body, only a particular type of T cells that are specifically programmed to react with the antigen become activated. These sensitized T cells increase in size and multiply rapidly to form a clone of T cells. Though the clone cells are similar, they perform different functions. They are classified into killer T cells, helper T cells, suppressor T cells and memory T cells based on their functions.

(a) Killer T cells migrate to the site of infection, attach to the invading cell and secrete cytotoxic substances that destroy the antigen directly. They also secrete macrophage-activating factor to intensify phagocytosis by macrophages.
(b) Helper T cells stimulate the B cells to produce antibodies.
(c) Suppressor T cells suppress the entire immune system and regulate the immune response.
(d) Memory T cells are programmed to recognise and respond more rapidly should the same type of antigen appear at a future time.

29. What is the role of B lymphocytes?

Ans:- B lymphocytes act indirectly against antigens by producing antibodies. This is called *humoral immunity*. The antibodies are carried by the fluids and react in various ways to destroy specific antigens. When antigens enter a tissue fluid, the B cells are stimulated to produce antibodies. For specific type of antigens, there are specific B cells in the body. The membrane of each type of B cells could be sensitized by the contact of an antigen, the antigen activates an antigen specific B cells that multiplies very fast to form a clone of plasma cells. These plasma cells in turn produce antibodies at a very rapid rate. But the activated B cells that do not differentiate into plasma cells remain as memory B cells. These cells respond more rapidly and forcefully if the same types of antigens appear at a future time.

The antibodies leave the blood and combine with the antigens to form antigen – antibody complexes. These complexes enhance vasodilation, vascular permeability to proteins, neutrophil exudation, phagocytosis and extracellular killing of microbes.

30. What are infectious diseases?

Ans:- Infectious Diseases - are the diseases produced due to pathogens and parasites. They can pass from one infected person to a healthy one. Infectious diseases are therefore, also termed as communicable diseases. The transfer can be direct (contagious) or through an agency including blood and serum (noncontagious).

(i) Contagious Diseases - Infective agent is transferred to a healthy person through direct contact e.g., ringworm, conjunctivitis.

(ii) Noncontagious Diseases - The infective agent spreads through a vector e.g., dengue, malaria), vehicle, blood, serum, food (e.g., AIDS, typhoid). AIDS is a fatal disease.

31. What are functional of non- infectious diseases?

Ans:- Functional or Non-infectious Diseases - are the diseases caused by agents other than pathogens. They cannot spread from one person to another. Hence, non-infectious diseases are also called non-communicable. They are due to reasons connected with each individual, e.g., cancers, allergy, deficiency disease, injury, etc.

(i) Deficiency Diseases - An essential component of diet is available in reduced quantity, e.g., kwashiorkor, anaemia, beri-beri.
(ii) Degenerative Diseases - Diseases are due to senescence or old age, e.g., atherosclerosis.
(iii) Allergy - The person becomes hypersensitive to the presence of foreign substances, e.g., rhinitis.
(iv) Addictions - The diseases are due to drug abuse, alcohol and tobacco.
(v) Mental Disorders - They are related to depression, anxiety, mental disability, neurosis, schizophrenia and psychosis.
(vi) Cancers - They are one of the major causes of death in which cells begin to undergo repeated divisions, crushing and starving normal cells and vital organs.

32. Which are the different modes of transmission of disease?

Ans:- Modes of Transmission

(1) Direct Transmission -

i) Direct Contact - It occurs in contagious diseases, e.g., ringworm.
ii) Droplet - Sneezing, spitting, coughing and even talking produce a pathogen carrying mist from nose, lungs and mouth, e.g., common cold, influenza, diphtheria.
iii) Soil – Tetanus
iv) Animal Bite – Rabies (Contd.....)

ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ • ಕೂಡಲೇ ತನಿಖೆ ಆರಂಭಿಸಲು ನಿರ್ದೇಶನ

ಎಸ್ಐಟಿ ತಂಡ ಸ್ಥಿರೀಕರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂಪಾಯಿಗಳ ಅವ್ಯವಹಾರ ಪ್ರಕರಣದ ಆರೋಪಿಯಾಗಿದ್ದ ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಯ ಜೊತೆ ಇಬ್ಬರು ಎಸ್.ಪಿ ಕೇಡರ್ ಪೊಲೀಸ್ ಅಧಿಕಾರಿಗಳ ಎಸ್ಐಟಿ ನೇಮಕ ಮಾಡಿದ್ದ ತನ್ನ ಈ ಹಿಂದಿನ ಆದೇಶವನ್ನು ಹೈಕೋರ್ಟ್ ಸ್ಥಿರೀಕರಿಸಿದೆ. ಕೂಡಲೇ ತನಿಖೆ ಆರಂಭಿಸುವಂತೆ ಎಸ್ಐಟಿಗೆ ನಿರ್ದೇಶಿಸಿದೆ.

ಈ ಸಂಬಂಧ ರಾಜ್ಯ ಪ್ರಾಸಿಕ್ಯೂಷನ್ ತೆಗೆದಿದ್ದ ತಕರಾರನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಮಂಗಳವಾರ ಪರಿಶೀಲಿಸಿತು.

ಅಲ್ಲದೆ, 'ಹೈಕೋರ್ಟ್ ನೀಡಿರುವ ಆದೇಶವನ್ನು ಸಂಪೂರ್ಣ ಅನುಪಾಲನೆ ಮಾಡಲಾಗುವುದು' ಎಂದು ಸಿಬಿಐ ತಿಳಿಸಿರುವ ಕಾರಣ ಈ ಹಿಂದೆ ನೀಡಲಾದ ಆದೇಶದಲ್ಲಿ ಯಾವುದೇ ಮಾರ್ಪಾಡು ಮಾಡುವುದಿಲ್ಲ' ಎಂದು ಆದೇಶಿಸಿದೆ.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಈ ಪೀಠ ನೀಡಿರುವ ಆದೇಶವನ್ನು ಪಾಲಿಸಲು ಸಿಬಿಐ ಬದ್ಧವಾಗಿದೆ. ಆದೇಶದಲ್ಲಿ ಯಾವುದೇ ಮಾರ್ಪಾಡು ಮಾಡುವಂತೆ ನಾವು ಕೇಳುತ್ತಿಲ್ಲ. ತಮ್ಮ ಆದೇಶದ ಪ್ರಕಾರ ತನಿಖೆ ನಡೆಸುತ್ತೇವೆ. ಯಾರನ್ನೂ ಬದಲಾಯಿಸುವುದಿಲ್ಲ' ಎಂದು ತಿಳಿಸಿದರು. ಇದಕ್ಕೆ ಪ್ರತಿಯಾಗಿ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಸಿಬಿಐ ವಿಶೇಷ ಅರ್ಜಿ ಮತ್ತು ನ್ಯಾಯಪೀಠದ ಆದೇಶಕ್ಕೆ ಸಹಮತ ವ್ಯಕ್ತಪಡಿಸಿದರು.

'ಈ ಹಿಂದೆ ಇದೇ ನ್ಯಾಯಪೀಠ ಈ ಕುರಿತಾದ ಅರ್ಜಿ ವಿಚಾರಣೆ ನಡೆಸಿ ಜೀವಾ ಆತ್ಮಹತ್ಯೆ ತನಿಖೆಗೆ ಎಸ್ಐಟಿ ರಚನೆ ಮಾಡಿ ಆದೇಶಿಸಿತ್ತು. 'ಎಸ್ಐಟಿಯಲ್ಲಿ ಸಿಐಡಿಯ ಎಸ್.ಪಿ ವಿನಾಯಕ ವರ್ಮಾ, ಕರ್ನಾಟಕ ಗೃಹ ರಕ್ಷಕ ದಳದ ಎಸ್.ಪಿ ಹಿರಾಯ ಅಕ್ಷಯ್ ಮಚ್ಛೀಂದ್ರ ಮತ್ತು ಆಂತರಿಕ ಭದ್ರತಾ ವಿಭಾಗದ ಎಸ್.ಪಿ ನಿಶಾ ಜೇಮ್ಸ್ ಸದಸ್ಯರಾಗಿ ಇರುತ್ತಾರೆ' ಎಂದು ನ್ಯಾಯಪೀಠ ತಿಳಿಸಿತ್ತು.

ಈ ಆದೇಶದ ಬಗ್ಗೆ ರಾಜ್ಯ ಪ್ರಾಸಿಕ್ಯೂಷನ್ ವಿಚಾರಣೆ ಬಯಸಿ ತಕರಾರು ವ್ಯಕ್ತಪಡಿಸಿತ್ತು. 'ತಂಡದ ಮೂವರೂ ಅಧಿಕಾರಿಗಳು ಎಸ್.ಪಿ ಕೇಡರ್ ಅಧಿಕಾರಿಗಳಾಗಿದ್ದು, ಒಬ್ಬರು ಮತ್ತೊಬ್ಬರ ಅಧೀನದಲ್ಲಿ ಕೆಲಸ ಮಾಡುವುದು ಹೇಗೆ' ಎಂದು ಪ್ರಶ್ನಿಸಿತ್ತು. ಅಂತೆಯೇ, 'ತಂಡಕ್ಕೆ ಡಿಜಿ ಅಥವಾ ಡಿಐಜಿ ದರ್ಜೆಯ ಅಧಿಕಾರಿಯನ್ನು ನಿಯುಕ್ತಿಗೊಳಿಸಬೇಕು' ಎಂದು ಮನವಿ ಮಾಡಿತ್ತು.

ವಾಲ್ಮೀಕಿ ನಿಗಮ: ತನಿಖೆ ನಡೆದಿದೆ–ಸಿಬಿಐ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಆರಂಭಿಸಲಾಗಿದೆ' ಎಂದು ಸಿಬಿಐ, ಹೈಕೋರ್ಟ್‌ಗೆ ತಿಳಿಸಿದೆ.

ಬಿಜೆಪಿಯ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಈ ಸಂಬಂಧ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ತನಿಖೆಯ ಪ್ರಸ್ತುತ ವರದಿಯನ್ನು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿ, 'ತನಿಖೆ ನಡೆಯುತ್ತಿದ್ದು, ಮೂರು ವಾರಗಳ ಬಳಿಕ ತನಿಖೆಗೆ ಸಂಬಂಧಿಸಿದಂತೆ ಸ್ಥಿತಿಗತಿ ವರದಿ ಸಲ್ಲಿಸಲಾಗುವುದು' ಎಂದು ತಿಳಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು 2025ರ ಜನವರಿ 16ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ಹಾಜರಿದ್ದರು.

ಕೋರಿಕೆ: 'ವಾಲ್ಮೀಕಿ ಪ್ರಕರಣಕ್ಕೆ ಸಂಬಂಧಿಸಿದ ಸಿಬಿಐ ತನಿಖೆಯನ್ನು ಹೈಕೋರ್ಟ್ ನಿಗಾದಲ್ಲಿಯೇ ನಡೆಸಬೇಕು. ಸಿಬಿಐ ಪ್ರತಿ ಹದಿನೈದು ದಿನಗಳಿಗೊಮ್ಮೆ ಪ್ರಗತಿ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು ಮತ್ತು ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಲಗ್ನಪತ್ರಿಕೆಯಲ್ಲಿ ಮೋದಿಗೆ ಮತ ಯಾಚನೆ: ಪ್ರಕರಣ ರದ್ದು

ಬೆಂಗಳೂರು: 'ಈ ಬಾರಿಯೂ ನರೇಂದ್ರ ಮೋದಿಯನ್ನು ಪ್ರಧಾನಿ ಮಾಡುವುದೇ ವಧು-ವರರಿಗೆ ನೀಡುವ ಉಡುಗೊರೆ. ಯಾಕೆಂದರೆ, ನಮ್ಮ ಭವಿಷ್ಯದ ಭಾರತ ಸುಭದ್ರವಾಗಿರಬೇಕು' ಎಂದು ಲಗ್ನಪತ್ರಿಕೆಯಲ್ಲಿ ಮುದ್ರಿಸಿ ಮತ ಯಾಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

'ನನ್ನ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿ ದಕ್ಷಿಣ ಕನ್ನಡ ಜಿಲ್ಲೆ ಕಡಬ ತಾಲ್ಲೂಕಿನ ಆಲಂತಾಯ ಗ್ರಾಮದ ಶಿವಪ್ರಸಾದ್ ಮತ್ತು ಗೌಳಿತೊಟ್ಟು ಗ್ರಾಮದ ಎ.ಬಾಲಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಎ.ವಿನೋದ್ ಕುಮಾರ್, 'ಚುನಾವಣೆಗೂ ಮುನ್ನವೇ ಲಗ್ನಪತ್ರಿಕೆ ಮುದ್ರಿಸಲಾಗಿತ್ತು. ಹೀಗಾಗಿ, ಆರೋಪವು ಅರ್ಜಿದಾರರಿಗೆ ಅನ್ವಯವಾಗುವುದಿಲ್ಲ' ಎಂದು ಪ್ರತಿಪಾದಿಸಿದರು. ಎಂ.ಇಸ್ಮಾಯಿಲ್ ಅಹ್ಮದ್ ವರ್ಸಸ್ ರಾಜ್ಯ ಸರ್ಕಾರ ಹಾಗೂ ಅಟ್ಟಿಕಾ ಗೋಲ್ಡ್ ವರ್ಸಸ್ ರಾಜ್ಯ ಸರ್ಕಾರದ ಪ್ರಕರಣಗಳಲ್ಲಿ ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ; ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 127Aಎ (ಕರಪತ್ರ, ಪೋಸ್ಟರ್ ಇತ್ಯಾದಿ ಮುದ್ರಣಕ್ಕೆ ನಿರ್ಬಂಧ) ಅಡಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣ ರದ್ದುಪಡಿಸಿತು.

'ಆರೋಪ ನಿಜವಾಗಿದ್ದರೆ ಕ್ಷಮೆಯೇ ಇಲ್ಲ'

ಬೆಂಗಳೂರು: 'ಕೃಷ್ಣ ಮಾಡಿರುವ ಆರೋಪ ನಿಜವಾದರೆ ಅದಕ್ಕೆ ಕ್ಷಮೆಯೇ ಇಲ್ಲ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, 'ಮೈಸೂರಿನ ಚಾಮುಂಡೇಶ್ವರಿ ದೇವಿಗೆ ಭಕ್ತರು ಹರಕೆ ರೂಪದಲ್ಲಿ ಅರ್ಪಿಸಲಾಗುವ ಸೀರೆಗಳನ್ನು ಕದ್ದು ಮಾರಾಟ ಮಾಡಲಾಗುತ್ತಿದೆ' ಎಂದು ಆರೋಪಿಸಿದ್ದ ಸ್ನೇಹಮಯಿ ಕೃಷ್ಣ ವಿರುದ್ಧದ ಎಫ್ಐಆರ್‌ಗೆ ತಡೆ ನೀಡಿದೆ.

'ನನ್ನ ವಿರುದ್ಧ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜಿ.ರೂಪಾ ಸಲ್ಲಿಸಿರುವ ದೂರನ್ನು ರದ್ದುಗೊಳಿಸಬೇಕು' ಎಂದು ಕೋರಿ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಸ್ನೇಹಮಯಿ ಕೃಷ್ಣ ಪರ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು.

'ಸ್ನೇಹಮಯಿ ಕೃಷ್ಣ ನನ್ನ ಕಚೇರಿಗೆ ಬಂದು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ' ಎಂದು ಇದೇ 14ರಂದು ರೂಪಾ ನೀಡಿದ್ದ ದೂರನ್ನು ಆಧರಿಸಿ ಪೊಲೀಸರು; ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 132 ಮತ್ತು 351 ಅಡಿಯಲ್ಲಿ ಎಫ್ಐಆರ್ ದಾಖಲಿಸಿದ್ದರು.

ಪವಿತ್ರಾ, ಪ್ರದೋಷ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ಪವಿತ್ರಾ ಗೌಡ ಹಾಗೂ ಪ್ರದೋಷ್ ಎಸ್.ರಾವ್ ಜೈಲಿನಿಂದ ಮಂಗಳವಾರ ಬಿಡುಗಡೆಯಾಗಿದ್ದಾರೆ.

ಈ ಪ್ರಕರಣದಲ್ಲಿ ಪವಿತ್ರಾ ಗೌಡ ಮೊದಲನೇ ಆರೋಪಿ ಹಾಗೂ ಟೆಕಿ ಪ್ರದೋಷ್ ಎಸ್.ರಾವ್ ಅವರು 14ನೇ ಆರೋಪಿ ಆಗಿದ್ದಾರೆ. ಇಬ್ಬರೂ ಜೂನ್ 20ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದರು.

ದರ್ಶನ್, ಪವಿತ್ರಾ ಗೌಡ ಸೇರಿದಂತೆ ಏಳು ಮಂದಿಗೆ ಶುಕ್ರವಾರ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ದರ್ಶನ್ ಅವರು ಕೆಂಗೇರಿಯ ಬಿಜಿಎಸ್ ಆಸ್ಪತ್ರೆಯಲ್ಲಿ ಬೆನ್ನು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಜೈಲಿನಿಂದ ಹೊರಬಂದ ತಕ್ಷಣ ಪವಿತ್ರಾ ಗೌಡ ಅವರನ್ನು ಕಂಡು ಅವರ ತಾಯಿ ಭಾಗ್ಯಮ್ಮ ಹಾಗೂ ಸಹೋದರರು ಸಂತೋಷಪಟ್ಟರು. ಪವಿತ್ರಾ ಅವರಿಗೆ ಮುನೇಶ್ವರ ದೇವಾಲಯದೆದುರು ಕುಟುಂಬಸ್ಥರು ದೃಷ್ಟಿ ತೆಗೆದರು. ಬಳಿಕ ತಲಘಟ್ಟಪುರದ ವಜ್ರ ಮುನೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಪವಿತ್ರಾ, ಕುಲದೇವರಿಗೆ ಹರಕೆ ಸಲ್ಲಿಸಿದರು. ತಣ್ಣೀರು ಸ್ನಾನ ಮಾಡಿ, ಪ್ರದಕ್ಷಿಣೆ ಹಾಕಿದರು.



ಪವಿತ್ರಾ ಗೌಡ

ಅರ್ಚನೆ ಮಾಡಿಸುವ ವೇಳೆ ಅವರ ತಾಯಿ ಭಾಗ್ಯಮ್ಮ ಅವರು 'ದರ್ಶನ್ ಹೆಸರು ಹೇಳಲಾ' ಎಂದು ಕೇಳಿದರು. 'ಆಯ್ತು ಹೇಳು' ಎಂದು ಪವಿತ್ರಾ ಉತ್ತರಿಸಿದರು. ಬಳಿಕ ಅರ್ಚಕರು 'ದರ್ಶನ್ ನಾಮಧೇಯಸ್ಯ' ಎಂದು ಹೇಳಿದ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ವೇಳೆ ಪವಿತ್ರಾ ಕಣ್ಣೀರು ಹಾಕಿದರು. ಮಾಧ್ಯಮ ಪ್ರತಿನಿಧಿಗಳು ಪ್ರತಿಕ್ರಿಯೆಗೆ ಮುಂದಾದ ವೇಳೆ, 'ಎಲ್ಲರಿಗೂ ಧನ್ಯವಾದಗಳು' ಎಂದಷ್ಟೇ ಹೇಳಿ, ಕಾರಿನಲ್ಲಿ ಕುಳಿತು ತಾಯಿ ಮನೆಗೆ ಹೊರಟರು.

ದರ್ಶನ್‌ಗೆ ಜಾಮೀನು: 'ಸುಪ್ರೀಂ' ಮೆಟ್ಟಿಲೇರಲು ನಿರ್ಧಾರ– ದಯಾನಂದ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ ಏಳು ಮಂದಿ ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಲು ನಿರ್ಧರಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ಈ ಕುರಿತು ಗೃಹ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು. ಪೂರ್ವಾನುಮತಿ ದೊರೆತ ಬಳಿಕ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದರು.

ಕೋವಿಡ್ ನಿರ್ವಹಣೆ ವೇಳೆ ಅಕ್ರಮಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣದ ತನಿಖೆಯನ್ನು ವಿಧಾನಸೌಧ ಠಾಣೆ ಪೊಲೀಸರು ನಡೆಸುತ್ತಿದ್ದಾರೆ. ವಿಶೇಷ ತನಿಖಾ ದಳ (ಎಸ್ಐಟಿ) ರಚನೆ ಮಾಡಿಲ್ಲ ಎಂದು ತಿಳಿಸಿದರು.

'ಉಯಿಲು ನೋಂದಣಿ ಪ್ರಕ್ರಿಯೆ ಬದಲಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಉಯಿಲು (ವಿಲ್) ನೋಂದಣಿ ಮಾಡಿಸಬೇಕು. ಉಯಿಲು ಮಾಡುವವರು, ಸಾಕ್ಷಿಗಳ ಹೇಳಿಕೆ ಸೇರಿದಂತೆ ಉಯಿಲು ನೋಂದಣಿಯ ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಬಳ್ಳಾರಿ ಜಿಲ್ಲೆಯ ಕುಡಿತಿನಿ ಗ್ರಾಮದ ಕುಟುಂಬವೊಂದರಲ್ಲಿ ಉಯಿಲಿಗೆ ಸಂಬಂಧಿಸಿದಂತೆ ಉದ್ಭವಿಸಿದ್ದ ವ್ಯಾಜ್ಯವನ್ನು ಇತ್ಯರ್ಥಪಡಿಸಿರುವ ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠವು, 'ಉಯಿಲು ದಾಖಲು ಪ್ರಕ್ರಿಯೆ ಸಂಪೂರ್ಣ ಬದಲಾವಣೆಯಾಗಬೇಕಿದೆ. ಇದಕ್ಕಾಗಿ ರಾಜ್ಯ ಸರ್ಕಾರ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಬೇಕು' ಎಂದು ನಿರ್ದೇಶಿಸಿದೆ.

'ಉಯಿಲುಗಳ ಜಾರಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು ಉದ್ಭವಿಸಿದಾಗ, ಉಯಿಲು ಸರಿ ಇದೆಯೋ ಇಲ್ಲವೋ ಎಂಬುದನ್ನು ಸಾಬೀತು ಮಾಡಲು ಅದನ್ನು ಮಾಡಿಸಿದವರು ಬದುಕಿರುವುದಿಲ್ಲ. ಹೀಗಾಗಿ, ಉಯಿಲು ಜಾರಿ ಸಂದರ್ಭದಲ್ಲಿ ಅದರ ನೈಜತೆಯನ್ನು ಸಾಬೀತುಪಡಿಸುವುದಕ್ಕೆ ಯಾವುದೇ ಗೊಂದಲಗಳಿರಬಾರದು. ಇದಕ್ಕಾಗಿ ಭವಿಷ್ಯದಲ್ಲಿ ಉಯಿಲು ದಾಖಲೆ ನಂಬಲರ್ಹವಾಗಿದೆ ಎಂಬುದನ್ನು ದೃಢಪಡಿಸುವುದಕ್ಕಾಗಿ ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ಉಯಿಲು: ಒಬ್ಬ ವ್ಯಕ್ತಿ ತನ್ನ ಮರಣಾನಂತರ ತನ್ನ ಸ್ವತ್ತು ಹೇಗೆ ವಿಲೆ ಆಗಬೇಕೆಂಬುದನ್ನು ವ್ಯಕ್ತಪಡಿಸುವ ಕೊಟ್ಟಕೊನೆಯ ಬಯಕೆಯನ್ನು ದಾಖಲಿಸಿ ಇಡುವುದು ಉಯಿಲು.

ಜಾತಿ ಸಿಂಧುತ್ವ: ಹೈಕೋರ್ಟ್ ಅಧಿಕಾರ ಅಬಾಧಿತ

ಬೆಂಗಳೂರು: 'ಮೀಸಲು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಅಭ್ಯರ್ಥಿಯ ಜಾತಿಯನ್ನು ಪ್ರಶ್ನಿಸಿ ಸಲ್ಲಿಸಲಾಗುವ ಅರ್ಜಿಗಳ ವಿಚಾರಣೆ ನಡೆಸಿ ತೀರ್ಮಾನ ಹೊರಡಿಸುವ ಹೈಕೋರ್ಟ್‌ನ, ಚುನಾವಣಾ ತಕರಾರು ಅರ್ಜಿ ವಿಚಾರಣೆಯ ಅಧಿಕಾರಕ್ಕೆ; ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮೀಸಲಾತಿ ಇತ್ಯಾದಿ) ಕಾಯ್ದೆ–1990 ಅಡ್ಡಿ ಉಂಟು ಮಾಡುವುದಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ದಾವಣಗೆರೆ ಜಿಲ್ಲೆಯ ಜಗಳೂರು ವಿಧಾನಸಭೆ ಕ್ಷೇತ್ರಕ್ಕೆ 2023ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಬಿ.ದೇವೇಂದ್ರಪ್ಪ ಆಯ್ಕೆ ಆಗಿರುವುದನ್ನು ಪ್ರಶ್ನಿಸಿ; ಇದೇ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿರುವ ಎಚ್.ಡಿ.ಕೋಟೆ ತಾಲ್ಲೂಕಿನ ಬಸವನಗಿರಿ ಹಾಡಿಯ ಜಿ.ಸ್ವಾಮಿ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ನಿರ್ಣಯ ವ್ಯಕ್ತಪಡಿಸಿದೆ. ಪ್ರಕರಣದಲ್ಲಿ ಸಲ್ಲಿಸಲಾಗಿರುವ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಪೀಠ, 'ಅಭ್ಯರ್ಥಿಯ ಜಾತಿಗೆ ಸಂಬಂಧಿಸಿದ ವಿವಾದವನ್ನು ಹೈಕೋರ್ಟ್‌ನ ಚುನಾವಣಾ ತಕರಾರು ಅರ್ಜಿಗಳ ವಿಚಾರಣಾ ವ್ಯಾಪ್ತಿಯಲ್ಲಿ ನಿರ್ಧರಿಸಬಹುದಾಗಿದೆ. ಆದ್ದರಿಂದ ಪ್ರಜಾಪ್ರತಿನಿಧಿ ಕಾಯ್ದೆ–1951ರ ಅಡಿ ಹೈಕೋರ್ಟ್‌ಗೆ ನೀಡಲಾದ ಅಧಿಕಾರ ವ್ಯಾಪ್ತಿ ಯನ್ನು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ನಿರ್ಧಾರದಂತೆ ಪರಿಗಣಿಸಲು ಸಾಧ್ಯವಿಲ್ಲ' ಎಂದಿದೆ.

ಸರ್ಕಾರಕ್ಕೆ ₹108 ಕೋಟಿ ನೀಡಿದ ಕೆಎಸ್‌ಡಿಎಲ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ನ (ಕೆಎಸ್‌ಡಿಎಲ್) ಲಾಭದಲ್ಲಿ ₹108.62 ಕೋಟಿ ಮೊತ್ತವನ್ನು ಸರ್ಕಾರಕ್ಕೆ ಹಸ್ತಾಂತರಿಸಲಾಯಿತು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಹಸ್ತಾಂತರಿಸಿದರು.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವ ಪಾಟೀಲ, 'ನಿಗಮ 2023-24ನೇ ಸಾಲಿನಲ್ಲಿ ₹362.07 ಕೋಟಿ ಲಾಭಗಳಿಸಿದೆ. ಅದರಲ್ಲಿ ₹108.62 ಕೋಟಿ ಸರ್ಕಾರಕ್ಕೆ ಹಾಗೂ ₹5 ಕೋಟಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಿದ್ದೇವೆ. ಕಾರ್ಖಾನೆ ಇತಿಹಾಸದಲ್ಲಿ ಇಷ್ಟು ಮೊತ್ತದ ಲಾಭಾಂಶ ನೀಡಿರುವುದು ಇದೇ ಮೊದಲು' ಎಂದರು.



ಕೆಎಸ್‌ಡಿಎಲ್ ಲಾಭದಲ್ಲಿ ₹108.62 ಕೋಟಿ ಮೊತ್ತವನ್ನು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಹಸ್ತಾಂತರಿಸಿದರು

ಸಿದ್ದರಾಮಯ್ಯ ಮಾತನಾಡಿ, 'ಸಾರ್ವಜನಿಕ ಉದ್ದಿಮೆಗಳು ಲಾಭದಾಯಕ ವಹಿವಾಟು ನಡೆಸುವುದು ಒಳ್ಳೆಯ ಬೆಳವಣಿಗೆ. ಐದು ವರ್ಷಗಳ ಹಿಂದೆ ₹15.91 ಕೋಟಿ ಲಾಭಾಂಶ ತಂದಿದ್ದ ನಿಗಮ ಈ ವರ್ಷ ಸಾರ್ವಜನಿಕ ಉದ್ದಿಮೆಗಳ ನಿಯಮದಂತೆ ತನ್ನ ಲಾಭಾಂಶದಲ್ಲಿ ಶೇ 30ರಷ್ಟನ್ನು ಸರ್ಕಾರಕ್ಕೆ ಕೊಟ್ಟಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ. ಪ್ರಶಾಂತ್, ಕಾರ್ಖಾನೆ ಪ್ರಧಾನ ವ್ಯವಸ್ಥಾಪಕ ಕೆ.ಎಲ್. ರವೀಶ, ಗಂಗಪ್ಪ ಉಪಸ್ಥಿತರಿದ್ದರು.

ಲಿಂಗತ್ವ ಅಲ್ಪಸಂಖ್ಯಾತೆ ಈಗ ಉಪನ್ಯಾಸಕಿ

ಬಳ್ಳಾರಿ: ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಲಿಂಗತ್ವ ಅಲ್ಪಸಂಖ್ಯಾತರಾದ ರೇಣುಕಾ ಪೂಜಾರಿ ಅವರು ಅತಿಥಿ ಉಪನ್ಯಾಸಕರಾಗಿ ನೇಮಕವಾಗಿದ್ದಾರೆ.



ರೇಣುಕಾ

ಕುರುಗೋಡು ತಾಲ್ಲೂಕಿನ ರೇಣುಕಾ ಅವರು ಈ ಹುದ್ದೆ ಪಡೆದ ರಾಜ್ಯದ ಮೊದಲ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿ. ಸಂಡೂರಿನ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಡಿ.10ರಂದು ಅವರು ಕರ್ತವ್ಯಕ್ಕೆ ಹಾಜರಾದರು.

ನೇಮಕಾತಿಯಲ್ಲಿ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಶೇ 1ರ ಮೀಸಲಾತಿಯನ್ನು ವಿಶ್ವವಿದ್ಯಾಲಯ ಪಾಲಿಸುತ್ತಿದೆ. ನವೆಂಬರ್ 28ರಂದು ರೇಣುಕಾ ಅವರ ಸಂದರ್ಶನವನ್ನು ಮಾಡಿದ ವಿಶ್ವ ವಿದ್ಯಾಲಯದ ಕುಲಪತಿ ಮುನಿರಾಜು ಮತ್ತು ಕುಲಸಚಿವ ರುದ್ರೇಶ್ ಅವರು ಹುದ್ದೆ ನೀಡಲು ನಿರ್ಧರಿಸಿದರು.

'ನನ್ನ ತಂದೆ ಪೂಜಾರಿ ಮಲ್ಲಯ್ಯ, ತಾಯಿ ತಿಪ್ಪಮ್ಮ ಇಬ್ಬರೂ ಅನಕ್ಷರಸ್ಥರು. ತಂದೆ, ತಾಯಿ ನನ್ನನ್ನು ದೂರ ತಳ್ಳಲಿಲ್ಲ. ಕಷ್ಟಪಟ್ಟು ಈ ಹಂತಕ್ಕೆ ಬಂದಿರುವೆ' ಎಂದು ರೇಣುಕಾ ಪೂಜಾರಿ ತಿಳಿಸಿದರು.

ಬಾಣಂತಿ ಸಾವು: ವೈದ್ಯರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಜಿಲ್ಲಾ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದಲ್ಲಿ ಆಳಂದ ತಾಲ್ಲೂಕಿನ ಮತಗಿ ಗ್ರಾಮದ ಬಾಣಂತಿ ಭಾಗ್ಯಶ್ರೀ ಶಿವಾಜಿ (23) ಮಂಗಳವಾರ ಮೃತಪಟ್ಟಿದ್ದಾರೆ. ನಿರ್ಲಕ್ಷ್ಯ ಆರೋಪದಡಿ ವೈದ್ಯರ ವಿರುದ್ಧ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಅಫಜಲಪುರ ಸರ್ಕಾರಿ ಆಸ್ಪತ್ರೆಯ ವೈದ್ಯರು ಮಂಗಳವಾರ ಬೆಳಿಗ್ಗೆ ಕರ್ತವ್ಯಕ್ಕೆ ಗೈರಾಗಿ, ನರ್ಸ್ ಮೂಲಕ ಭಾಗ್ಯಶ್ರೀಗೆ ಹೆರಿಗೆ ಮಾಡಿಸಿದ್ದಾರೆ. ಸರಿಯಾಗಿ ಚಿಕಿತ್ಸೆ ನೀಡದಿರುವುದರಿಂದ ರಕ್ತದೊತ್ತಡ ಕುಸಿದು ರಕ್ತಸ್ರಾವವಾಗಿದೆ. ನರ್ಸ್ ಸೂಚನೆಯಂತೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜಿಲ್ಲಾ ಆಸ್ಪತ್ರೆಯ ವೈದ್ಯರೂ ಸರಿಯಾಗಿ ಚಿಕಿತ್ಸೆ ಕೊಡದೆ ನಿರ್ಲಕ್ಷ್ಯ ತೋರಿದ್ದರಿಂದ ಭಾಗ್ಯಶ್ರೀ ಸಾವನ್ನಪ್ಪಿದ್ದಾಳೆ' ಎಂದು ಆರೋಪಿಸಿ




ಭಾಗ್ಯಶ್ರೀ

ಬಾಣಂತಿಯ ಪತಿ ಶಿವಾಜಿ ಅವರು ವೈದ್ಯರ ವಿರುದ್ಧ ದೂರು ದಾಖಲಿಸಿದ್ದಾರೆ.

'ಅಫಜಲಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಭಾಗ್ಯಶ್ರೀ ಅವರು ಗಂಡು ಮಗುವಿಗೆ ಜನ್ಮ ನೀಡಿದ್ದರು. ಆ ಬಳಿಕ ರಕ್ತದೊತ್ತಡ ಕುಸಿದು ತೀವ್ರ ರಕ್ತಸ್ರಾವವಾಗಿತ್ತು. ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬಾಣಂತಿ ಮೃತಪಟ್ಟಿದ್ದು, ಇದರಲ್ಲಿ ವೈದ್ಯರ ನಿರ್ಲಕ್ಷ್ಯ ಇಲ್ಲ' ಎಂದು ಜಿಲ್ಲಾ ಸರ್ಜನ್ ಡಾ.ರೂಖಿಯಾ ಆಸನಾ ರಬ್ಬ 'ಪ್ರಜಾವಾಣಿ'ಗೆ ತಿಳಿಸಿದರು.

'ಬಾಣಂತಿ ಸಾವಿನ ಬಗ್ಗೆ ತನಿಖೆ ಮಾಡುವಂತೆ ಆರ್‌ಸಿಎಚ್‌ಒ, ನೋಡಲ್ ಅಧಿಕಾರಿ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳಿಗೆ ಆದೇಶಿಸಲಾಗಿದೆ' ಎಂದು ಡಿಎಚ್‌ಒ ಡಾ. ಶರಣಬಸಪ್ಪ ಕ್ಯಾತನಾಳ ತಿಳಿಸಿದರು.

ಕೆ.ಅಪ್ಪಣ್ಣಾಚಾರ್ಯಗೆ ಪ್ರಶಸ್ತಿ



ಹುಬ್ಬಳ್ಳಿ: ಕನಕ-ಪುರಂದರೋತ್ಸವದ ಪ್ರಯುಕ್ತ ಸಂಯುತಾ ಪ್ರತಿಷ್ಠಾನವು ನೀಡುವ ರಾಜ್ಯಮಟ್ಟದ 'ಸಂಯುತಾ ಪುರಂದರ' ಪ್ರಶಸ್ತಿಗೆ ತಿರುಮಲ ತಿರುಪತಿ ದಾಸ ಸಾಹಿತ್ಯ ಯೋಜನೆಯ ವಿಶ್ರಾಂತ ಯೋಜನಾಧಿಕಾರಿ, ಮಂತ್ರಾಲಯದ ಕೆ. ಅಪ್ಪಣ್ಣಾಚಾರ್ಯ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಜ.30ರಂದು ಹುಬ್ಬಳ್ಳಿಯಲ್ಲಿ ಪ್ರದಾನ ಮಾಡಲಾಗುವುದು.

'ತುಳಸಿ ಗೌಡ ಬೇಡಿಕೆಯಂತೆ ಬಸ್ ತಂಗುದಾಣ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಕಾರವಾರ: ವೃಕ್ಷಮಾತೆ ಎಂದೇ ಖ್ಯಾತರಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ತುಳಸಿ ಗೌಡ ಅವರ ಅಂತ್ಯಕ್ರಿಯೆ ಮಂಗಳವಾರ ಅಂಕೋಲಾ ತಾಲ್ಲೂಕು ಹೊನ್ನಳ್ಳಿಯ ಅವರ ಕೃಷಿ ಜಮೀನಿನಲ್ಲಿ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಅಂತ್ಯಕ್ರಿಯೆಗೂ ಮುನ್ನ ಸಶಸ್ತ್ರ ಪೊಲೀಸ್ ಮೀಸಲು ಪಡೆಯ ಸಿಬ್ಬಂದಿ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದರು. ರಾಷ್ಟ್ರಗೀತೆ ಮೊಳಗಿಸಿದರು. ಕಾರವಾರ ಶಾಸಕ ಸತೀಶ ಸೈಲ್, ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಸೇರಿ ಹಲವು ಗಣ್ಯರು ಅಂತಿಮ ದರ್ಶನ ಪಡೆದರು. ಚಿತೆಗೆ ಪುತ್ರ ಸುಬ್ರಾಯ ಗೌಡ ಅವರು ಅಗ್ನಿಸ್ಪರ್ಶ ಮಾಡಿದರು.

'ಹೊನ್ನಳ್ಳಿ ಗ್ರಾಮದಲ್ಲಿ ಬಸ್ ತಂಗುದಾಣ ಸ್ಥಾಪಿಸಲು ಕೋರಿದ್ದ ತುಳಸಿ ಗೌಡ ಅವರ ಬೇಡಿಕೆ ಈಡೇರಿಸಲಾಗುವುದು. ತಂಗುದಾಣಕ್ಕೆ ಅವರ ಹೆಸರು ಇಡಲಾಗುವುದು. ಅವರ ಮೊಮ್ಮಗನಿಗೆ ಉದ್ಯೋಗ ನೀಡಲಾಗುವುದು' ಎಂದು ಶಾಸಕ ಸತೀಶ ಸೈಲ್ ತಿಳಿಸಿದರು.

ಬ್ಯಾನರ್ ತೆರವು: ಪೊಲೀಸರ ಜತೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಳಗಾವಿ: 2ಎ ಮೀಸಲಾತಿಗೆ ಆಗ್ರಹಿಸಿ ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಇಲ್ಲಿನ ಅಂಬೇಡ್ಕರ್ ಉದ್ಯಾನದಲ್ಲಿ ಮಂಗಳವಾರವೂ ಪ್ರತಿಭಟನೆ ನಡೆಯಿತು. ಆಗ ಪೊಲೀಸರೊಂದಿಗೆ ನೂಕಾಟ–ವಾಗ್ವಾದ ನಡೆಯಿತು.

ಕಳೆದ ವಾರ ಸುವರ್ಣ ವಿಧಾನಸೌಧದ ಎದುರು ನಡೆದ ಲಾಠಿಚಾರ್ಜ್ ಸಂದರ್ಭದ ಚಿತ್ರ ಮತ್ತು ಕಟೌಟುಗಳನ್ನು ಪ್ರತಿಭಟನಕಾರರು ಉದ್ಯಾನದ ಮುಖ್ಯದ್ವಾರದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದರು. 'ಚನ್ನಮ್ಮನ ನಾಡಲ್ಲೇ ಚನ್ನಮ್ಮನ ಮಕ್ಕಳ ರಕ್ತ ಹರಿದಿದೆ' ಎಂಬ ಸಾಲು ಬರೆದಿದ್ದರು. ಅವುಗಳನ್ನು ತೆಗೆಯಲು ಮುಂದಾದ ಪೊಲೀಸರಿಗೆ, ಕೆಲ ಮುಖಂಡರು ತಡೆಯೊಡ್ಡಿದರು. ಇದರಿಂದ ಪೊಲೀಸರು ಮತ್ತು ಮುಖಂಡರ ನಡುವೆ ಗಲಾಟೆಯಾಯಿತು. ಪೊಲೀಸರು ಎಲ್ಲ ಬ್ಯಾನರುಗಳನ್ನು ಕಿತ್ತುಕೊಂಡು ಹೋದರು. ಪ್ರತಿಭಟನಕಾರರು ಕೆಲ ಹೊತ್ತು ರಸ್ತೆ ಮಧ್ಯೆ ಕೂತು ಆಕ್ರೋಶ ವ್ಯಕ್ತಪಡಿಸಿದರು. ಸಂಜೆ 6ರವರೆಗೂ ಸ್ವಾಮೀಜಿ ನೇತೃತ್ವದಲ್ಲಿ ಧರಣಿ ನಡೆಯಿತು.



ಬೆಳಗಾವಿಯ ಅಂಬೇಡ್ಕರ್ ಉದ್ಯಾನದ ಎದುರು ಮಂಗಳವಾರ ಲಾಠಿಚಾರ್ಜ್‌ನ ಬ್ಯಾನರ್ ತೆರವು ಮಾಡುವಾಗ ಪೊಲೀಸರು ಹಾಗೂ ಪಂಚಮಸಾಲಿ ಮುಖಂಡರ ನಡುವೆ ನೂಕಾಟ ಉಂಟಾಯಿತು ಪ್ರಜಾವಾಣಿ ಚಿತ್ರ

ಧರ್ಮಸ್ಥಳದಲ್ಲಿ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮ

ಒಂದು ಸಾವಿರ ಕೆರೆಗಳಿಗೆ ಕಾಯಕಲ್ಪ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮದಡಿ ರಾಜ್ಯದಲ್ಲಿ 800 ಕೆರೆಗಳನ್ನು ಪುನಶ್ಚೇತನಗೊಳಿಸಿದ್ದು, 2025ರ ಏಪ್ರಿಲ್ ವೇಳೆಗೆ 200 ಕೆರೆಗಳಿಗೆ ಕಾಯಕಲ್ಪ ನೀಡಲು ಉದ್ದೇಶಿಸಲಾಗಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ಪುನಶ್ಚೇತನಗೊಳಿಸಿದ 800ನೇ ಕೆರೆ, ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಚೌಡನಹಳ್ಳಿ ಕೆರೆಯನ್ನು ಮಾಜಿ ಶಾಸಕ ಲಿಂಗೇಶ್ ಅವರಿಗೆ ಧರ್ಮಸ್ಥಳದಲ್ಲಿ ಮಂಗಳವಾರ ಹಸ್ತಾಂತರಿಸಿ ಅವರು ಮಾತನಾಡಿದರು.

ಕೆರೆಯನ್ನು ರಕ್ಷಣೆ ಮಾಡಿದರೆ ಪವಿತ್ರ ಗಂಗೆಯನ್ನು ರಕ್ಷಣೆ ಮಾಡಿದಷ್ಟೇ ಪುಣ್ಯ ಸಿಗುತ್ತದೆ. ಜಲ ಸಂರಕ್ಷಣೆ ಮತ್ತು ಸ್ವಚ್ಛ ಪರಿಸರ ರಕ್ಷಣಾ ಕಾರ್ಯದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು. ಕೆರೆಗಳಿಗೆ ಕಸ ಹಾಕಬಾರದು. ಸುತ್ತಲೂ ಹಣ್ಣುಗಳ ಗಿಡಗಳನ್ನು ಬೆಳೆಸಬೇಕು ಎಂದು ಅವರು ಸಲಹೆ ನೀಡಿದರು.



ಧರ್ಮಸ್ಥಳದಲ್ಲಿ ಮಂಗಳವಾರ ನಡೆದ 'ನಮ್ಮೂರು ನಮ್ಮ ಕೆರೆ' ಸಮಾರಂಭದಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಚೌಡನಹಳ್ಳಿ ಕೆರೆಯನ್ನು ಮಾಜಿ ಶಾಸಕ ಲಿಂಗೇಶ್ ಅವರಿಗೆ ಹಸ್ತಾಂತರಿಸಿದರು

ಎಲ್ಲ ಕೆಲಸವನ್ನು ಸರ್ಕಾರ, ಗ್ರಾಮಪಂಚಾಯಿತಿ ಮಾಡಬೇಕೆಂದು ನಿರೀಕ್ಷಿಸದೆ ನಮ್ಮ ಊರು, ನಮ್ಮ ಕೆರೆ ಮತ್ತು ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವೂ, ಹೊಣೆಗಾರಿಕೆಯೂ ಆಗಿದೆ ಎಂದರು.

ಹೇಮಾವತಿ ವೀ.ಹೆಗ್ಗಡೆ ಮಾತನಾಡಿ, ಕೆರೆ ಸಮಿತಿಯವರು ಊರಿನ ಕೆರೆಯನ್ನು ಕಾಪಾಡಬೇಕು ಎಂದು ಕಿವಿಮಾತು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಶಿವಾನಂದ ಕಳವೆ, ಕೆರೆಗಳ ಸಂರಕ್ಷಣೆ ಬಗ್ಗೆ ಮಾಹಿತಿ ನೀಡಿದರು. ಕೆರೆ ಸಮಿತಿ ಸದಸ್ಯ ಕಿತ್ತೂರಿನ ಮಲ್ಲಿಕಾರ್ಜುನ ಹುದಲಿ ಮಾತನಾಡಿದರು.

ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್‌ಕುಮಾರ್ ಎಸ್.ಎಸ್. ಭಾಗವಹಿಸಿದ್ದರು. ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಸ್ವಾಗತಿಸಿದರು. ಎಂಜಿನಿಯರ್ ನಿಂಗರಾಜ್ ವಂದಿಸಿದರು. ನಿರ್ದೇಶಕ ಶಿವಾನಂದ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು.

ಬಿಲ್ಲವರ ಸಮ್ಮೇಳನ ಜ.24ರಿಂದ

ಮಂಗಳೂರು: ಸಸಿಹಿತ್ಲುವಿನ ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಂಘದ ಸುವರ್ಣ ಮಹೋತ್ಸವ ವರ್ಷಾಚರಣೆಯ ನೆನಪಿನಲ್ಲಿ ಬಿಲ್ಲವರ ವಿಶ್ವ ಸಮ್ಮೇಳನವನ್ನು ಜನವರಿ 24ರಿಂದ 26ರವರೆಗೆ ಆಯೋಜಿಸಲಾಗಿದೆ ಎಂದು ವಿಶ್ವ ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷ ಚಂದಯ್ಯ ಬಿ. ಕರ್ಕೇರ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಬಿಲ್ಲವ, ತೀಯಾ, ಆರ್ಯ ಈಡಿಗ, ದೀವರು, ನಾಮಧಾರಿಗಳು ಸೇರಿದಂತೆ ಎಲ್ಲ 26 ಉಪ ಪಂಗಡಗಳನ್ನು ಒಗ್ಗೂಡಿಸುವ ಪ್ರಯತ್ನ ಇದಾಗಿದೆ. ಸಮುದಾಯದ ಯುವಜನರ ಪ್ರತಿಭಾ ಪ್ರದರ್ಶನ ಜೊತೆಗೆ, ಕಡಲತೀರದ ಹಬ್ಬ, ಬಿಲ್ಲವರ ಜಾನಪದ ಬದುಕಿನ ಅನಾವರಣ, ಪುಸ್ತಕ ಮೇಳ, ಸಾಂಸ್ಕೃತಿಕ ಸ್ಪರ್ಧೆಗೆ ಸಮ್ಮೇಳನವು ವೇದಿಕೆ ಒದಗಿಸಲಿದೆ. ವಿಶ್ವದಾದ್ಯಂತ ಇರುವ ಸಮುದಾಯದ ಜನರು, ಸಿನಿಮಾ ತಾರೆಯರು, ಕ್ರೀಡಾಪಟುಗಳು, ಉದ್ಯಮಿಗಳು, ಜನಪ್ರತಿನಿಧಿಗಳು ಎಲ್ಲರನ್ನೂ ಆಹ್ವಾನಿಸಲಾಗುವುದು' ಎಂದರು.

ಸಸಿಹಿತ್ಲುವಿನಲ್ಲಿರುವ ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಂಘದ ಆವರಣದಲ್ಲಿ ಮೂರು ದಿನ ನಡೆಯುವ ಕಾರ್ಯಕ್ರಮದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಜ.24ರಂದು ದೇಶ– ವಿದೇಶದಿಂದ ಬರುವ ಗಣ್ಯರನ್ನು ಸ್ವಾಗತಿಸುವ, ತುಳುನಾಡು ಹಾಗೂ ಕರುನಾಡಿನ ಜಾನಪದ ಸೊಗಡಿನ ಸಾಂಸ್ಕೃತಿಕ ಮೆರವಣಿಗೆ, ಮುಕ್ತ ನೃತ್ಯ ಸ್ಪರ್ಧೆ ನಡೆಯಲಿದೆ ಎಂದು ವಿಶ್ವ ಸಮ್ಮೇಳನ ಸಮಿತಿ ಕಾರ್ಯಾಧ್ಯಕ್ಷ ಸತ್ಯಜಿತ್ ಸುರತ್ಕಲ್ ಹೇಳಿದರು.

ಜ.25ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟಿಸುವರು. ಜ.26ರಂದು ರಾಷ್ಟ್ರಮಟ್ಟದ ಸಾಂಸ್ಕೃತಿಕ ಸ್ಪರ್ಧೆ, ಬಹುಮಾನ ವಿತರಣೆ, ಸಮ್ಮೇಳನದ ಸಮಾರೋಪ ನಡೆಯಲಿದೆ ಎಂದರು.

ಸಂಘಟಕರಾದ ತೇಜೋಮಯ, ರಮೇಶ್ ಪೂಜಾರಿ, ಪ್ರಕಾಶ್ ಕುಮಾರ್ ಬಿ.ಎನ್, ಪ್ರದೀಪ್ ಎಸ್.ಆರ್., ನರೇಶ್ ಕುಮಾರ್ ಸಸಿಹಿತ್ಲು ಇದ್ದರು.

ಉದ್ಯೋಗ ವಾಣಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನೋಟ ಮಾತ್ರದಿಂದ ಪ್ರೀತಿಸಿದವರಷ್ಟೇ ವಿದಾಯ ಹೇಳಬಲ್ಲರು. ಆತ್ಮಶುದ್ಧಿಯಿಂದ ಮತ್ತು ಹೃದಯಪೂರ್ವಕವಾಗಿ ಪ್ರೀತಿಸುವವರ ನಡುವೆ ಬೇರೆಯಾಗುವ ಪ್ರಶ್ನೆಯೇ ಉದ್ಭವಿಸದು.

–ರೂಮಿ

ಪೂಜಾ ಸ್ಥಳಗಳಲ್ಲಿ ಸಮೀಕ್ಷೆ ‘ಸುಪ್ರೀಂ’ ಸೂಚನೆ ಸ್ವಾಗತಾರ್ಹ

ಧಾರ್ಮಿಕ ಸ್ಥಳ ಅಥವಾ ಮಸೀದಿಯ ಸದ್ಯದ ಸ್ಥಿತಿಯ ವಿಚಾರವಾಗಿ ಹೊಸ ಅರ್ಜಿಗಳನ್ನು ದಾಖಲು ಮಾಡಿಕೊಳ್ಳುವಂತೆ ಇಲ್ಲ, ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991ರ ಸಿಂಧುತ್ವದ ಬಗ್ಗೆ ತಾನು ತೀರ್ಮಾನ ಕೈಗೊಳ್ಳುವವರೆಗೆ ಅಧೀನ ನ್ಯಾಯಾಲಯಗಳು ಧಾರ್ಮಿಕ ಸ್ಥಳಗಳ ಸಮೀಕ್ಷೆಗಳಿಗೆ ಆದೇಶ ನೀಡುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಇದು ಸ್ವಾಗತಾರ್ಹ. ಕೆಲವು ಹಿಂದೂ ಸಂಘಟನೆಗಳು ಹಾಗೂ ಭಕ್ತರ ಗುಂಪುಗಳು ದೇಶದ ವಿವಿಧ ಭಾಗಗಳಲ್ಲಿ, ಅದರಲ್ಲೂ ಮುಖ್ಯವಾಗಿ ಉತ್ತರ ಭಾರತದಲ್ಲಿ, ಹಲವು ಮಸೀದಿಗಳು ಇರುವ ಸ್ಥಳ ತಮಗೆ ಸೇರಿದ್ದು ಎಂಬ ಅರ್ಜಿಗಳನ್ನು ಸಲ್ಲಿಸಿವೆ. ದೇವಸ್ಥಾನ ಉರುಳಿಸಿ ಅಲ್ಲಿ ಮಸೀದಿ ನಿರ್ಮಾಣ ಮಾಡಲಾಗಿದೆ ಎಂಬ ವಾದವನ್ನು ಅವು ಅರ್ಜಿಗಳ ಮೂಲಕ ಮಂಡಿಸಿವೆ. ವಾರಾಣಸಿಯ ಗ್ಯಾನವಾಪಿ ಮಸೀದಿ, ಮಥುರಾದಲ್ಲಿನ ಕೃಷ್ಣ ಜನ್ಮಭೂಮಿ, ಉತ್ತರಪ್ರದೇಶದ ಸಂಭಲ್‌ನಲ್ಲಿ ಇರುವ ಶಾಹಿ ಜಾಮಾ ಮಸೀದಿ ಕುರಿತ ವಿವಾದಗಳನ್ನು ಇಂತಹ ಪ್ರಕರಣಗಳಿಗೆ ಉದಾಹರಣೆಯಾಗಿ ಉಲ್ಲೇಖಿಸಬಹುದು. ಇಂತಹ ಅರ್ಜಿಗಳನ್ನು ಸ್ವೀಕರಿಸಿರುವ ಅಧೀನ ನ್ಯಾಯಾಲಯಗಳು, ನಿಗದಿತ ಸ್ಥಳದಲ್ಲಿ ಸಮೀಕ್ಷೆ ನಡೆಸುವಂತೆ ಆದೇಶ ನೀಡಿವೆ. ರಾಜಸ್ಥಾನದ ಅಜ್ಮೇರ್‌ನಲ್ಲಿ ಇರುವ ಪ್ರಸಿದ್ಧ ಸೂಫಿ ದರ್ಗಾ ವಿಚಾರವಾಗಿಯೂ ಇಂಥದ್ದೇ ವಾದವೊಂದನ್ನು ಈಚೆಗೆ ಮಂಡಿಸಲಾಗಿದೆ. ಸಂಭಲ್ ಮಸೀದಿಯಲ್ಲಿ ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಸೃಷ್ಟಿಯಾಗಿತ್ತು, ಹಿಂಸಾಚಾರವು ಐವರನ್ನು ಬಲಿ ಪಡೆಯಿತು. ವಿಶ್ವಪ್ರಸಿದ್ಧ ತಾಜ್ ಮಹಲ್ ವಿಚಾರವಾಗಿಯೂ ಇಂಥದ್ದೇ ವಾದಗಳಿವೆ.



ಧರ್ಮನಿರಪೇಕ್ಷ ತತ್ವಕ್ಕೆ ಬದ್ಧತೆ ತೋರುವುದು ಸರ್ಕಾರಗಳ ಪಾಲಿಗೆ ಕಡ್ಡಾಯ ಎಂದು ನ್ಯಾಯಾಲಯ ಹೇಳಿರುವುದು ಈ ಕಾಯ್ದೆಯ ಸಿಂಧುತ್ವಕ್ಕೆ ಪೂರಕವಾಗಿ ಬಂದಿರುವ ಮಾತಾಗಿದೆ

ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಹೇಗಿತ್ತೋ ಹಾಗೆಯೇ ಇರಬೇಕು ಎಂದು ಹೇಳುವ ಪೂಜಾ ಸ್ಥಳಗಳ ಕಾಯ್ದೆಯು ಇಂತಹ ಬೇಡಿಕೆಗಳು ಹಾಗೂ ಅರ್ಜಿಗಳನ್ನು ಸಹಜವಾಗಿಯೇ ಅಮಾನ್ಯವಾಗಿಸಬೇಕಿತ್ತು. ಇಂತಹ ಸರಿಸುಮಾರು 20 ಅರ್ಜಿಗಳು ಬೇರೆ ಬೇರೆ ನ್ಯಾಯಾಲಯಗಳಲ್ಲಿ ಇವೆ. ದುರದೃಷ್ಟದ ಸಂಗತಿಯೆಂದರೆ, ಗ್ಯಾನವಾಪಿ ಮಸೀದಿ ಸಂಕೀರ್ಣದಲ್ಲಿ ಸಮೀಕ್ಷೆ ನಡೆಸುವುದಕ್ಕೆ ಸುಪ್ರೀಂ ಕೋರ್ಟ್ ಕೂಡ ತಡೆ ನೀಡಲಿಲ್ಲ. ಧಾರ್ಮಿಕ ಸ್ವರೂಪದಲ್ಲಿ ಬದಲಾವಣೆ ತರುವಂತಿಲ್ಲ ಎಂದು ಕಾಯ್ದೆಯು ಹೇಳುತ್ತದೆಯಾದರೂ ಧಾರ್ಮಿಕ ಸ್ಥಳವೊಂದರ ಸ್ವರೂಪವನ್ನು ಅರಿಯಲು ಸಮೀಕ್ಷೆ ನಡೆಸುವುದನ್ನು ಕಾಯ್ದೆಯು ನಿರ್ಬಂಧಿಸಿಲ್ಲ ಎಂದು ಆಗ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿದ್ದ ಡಿ.ವೈ. ಚಂದ್ರಚೂಡ್ ಅವರು ಹೇಳಿದ್ದರು. ಈ ಮಾತು ಈ ಕಾನೂನಿನ ಆಶಯಕ್ಕೆ ವಿರುದ್ಧವಾಗಿತ್ತು. ಧಾರ್ಮಿಕ ಸ್ಥಳವೊಂದರ ಸ್ವರೂಪವನ್ನು ಬದಲಾಯಿಸಲು ಈ ಕಾಯ್ದೆ ಯಾವ ಸಂದರ್ಭದಲ್ಲಿಯೂ ಅವಕಾಶ ನೀಡುವುದಿಲ್ಲ. ಈ ಕಾಯ್ದೆಯಲ್ಲಿ ಇರುವ ವಿನಾಯಿತಿಗಳು, ಈಗ ಹಕ್ಕು ಮಂಡಿಸಲಾಗಿರುವ ಯಾವ ಸ್ಥಳಕ್ಕೂ ಅನ್ವಯ ಆಗುವುದಿಲ್ಲ.

‘ಭಾರತೀಯ ಸಮಾಜದ ಧರ್ಮನಿರಪೇಕ್ಷ ಗುಣವನ್ನು ರಕ್ಷಿಸುವ ಉದ್ದೇಶದಿಂದ ರೂಪಿಸಿದ ಕಾನೂನು ಪರಿಕರ’ ಈ ಕಾಯ್ದೆ ಎಂಬುದನ್ನು ಅಯೋಧ್ಯಾ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಧರ್ಮನಿರಪೇಕ್ಷ ತತ್ವಕ್ಕೆ ಬದ್ಧತೆ ತೋರುವುದು ಸರ್ಕಾರಗಳ ಪಾಲಿಗೆ ಕಡ್ಡಾಯ ಎಂದು ಈ ಕಾಯ್ದೆಯು ಹೇಳುತ್ತದೆ ಎಂದು ಕೂಡ ನ್ಯಾಯಾಲಯ ಹೇಳಿದೆ. ಇದು ಈ ಕಾಯ್ದೆಯ ಸಿಂಧುತ್ವಕ್ಕೆ ಪೂರಕವಾಗಿ ಬಂದಿರುವ ಮಾತು. ಬಾಬರಿ ಮಸೀದಿಗೆ ಎದುರಾದ ಸ್ಥಿತಿಯು ದೇಶದಲ್ಲಿ ಮುಂದೆ ಬೇರೆ ಯಾವುದೇ ಪೂಜಾ ಸ್ಥಳಕ್ಕೆ ಎದುರಾಗಬಾರದು ಎಂಬ ಉದ್ದೇಶದಿಂದ ಕಾಯ್ದೆಯನ್ನು ರೂಪಿಸಲಾಯಿತು. ಈಗ ಹಲವಾರು ಮಸೀದಿಗಳ ಇತಿಹಾಸವನ್ನು ಕೆದಕಲಾಗುತ್ತಿದೆ. ಈ ರೀತಿ ಇತಿಹಾಸ ಕೆದಕುವುದರ ಪರಿಣಾಮವಾಗಿ ಸಮಾಜದಲ್ಲಿ ಕ್ಷೋಭೆ ಉಂಟಾಗಬಹುದು, ದೇಶವು ಹಿಂದೆಂದೂ ಕಾಣದಂತಹ ರಾಜಕೀಯ ಬಿಕ್ಕಟ್ಟು ಕೂಡ ಸೃಷ್ಟಿಯಾಗಬಹುದು.

ದಿನದ ಟ್ವೀಟ್

ವೃತ್ತಿನಿಷ್ಠೆ ಮರೆತರೆ...



ಗೋವಾದಲ್ಲೊಂದು ವಿಲಕ್ಷಣ ಪ್ರಕರಣ: ಭೂ ಕಬಳಿಕೆಗೆ ಸಂಬಂಧಿಸಿದ ಹಲವು ಪ್ರಕರಣಗಳ ಆರೋಪಿಯೊಬ್ಬ ಕಾನ್‌ಸ್ಟೆಬಲ್ ನೆರವಿನೊಂದಿಗೆ ಪೊಲೀಸರ ವಶದಿಂದ ತಪ್ಪಿಸಿಕೊಂಡಿದ್ದಾನೆ. ಇಬ್ಬರೂ ಮೋಟರ್‌ಸೈಕಲ್‌ನಲ್ಲಿ ಪರಾರಿಯಾಗಿದ್ದು, ಆರೋಪಿಯು ಆ ಸನ್ನಿವೇಶವನ್ನು ವಿವರಿಸುವ ವಿಡಿಯೊವನ್ನೂ ಬಿಡುಗಡೆ ಮಾಡಿದ್ದಾನೆ! ಗೋವಾಗೆ ಒಬ್ಬರು ಸಿಂಘಂ ಬೇಕಾಗಿದ್ದಾರೆ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಕೇರಳವು ಕಸ ತಂದು ಎಸೆಯುವ ಅಂತರರಾಜ್ಯ ದೋಷಿ. ಈ ಕೆಲಸವನ್ನು ಅದು ಕರ್ನಾಟಕ ಮತ್ತು ತಮಿಳುನಾಡು ಎರಡೂ ಕಡೆ ಮಾಡುತ್ತದೆ. ಅಪಾಯಕಾರಿ ವೈದ್ಯಕೀಯ ತ್ಯಾಜ್ಯ ಒಳಗೊಂಡ ಕಸವನ್ನು ನೆರೆಯ ರಾಜ್ಯಗಳಿಗೆ ಅಕ್ರಮವಾಗಿ ತಂದು ಸುರಿಯುವುದನ್ನು ತಡೆಯುವ ದಿಸೆಯಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ನೀಡಿದ ಡಜನ್‌ಗಟ್ಟಲೆ ಭರವಸೆಗಳು ಕಾರ್ಯರೂಪಕ್ಕೆ ಬಂದೇ ಇಲ್ಲ.

ಅನುಷಾ ರವಿ ಸೂದ್, ಪತ್ರಕರ್ತೆ

25 ವರ್ಷಗಳ ಹಿಂದೆ

ಶನಿವಾರ, 18-12-1999

• **‘ಪ್ರತಿಷ್ಠಿತ ಕಾಲೇಜುಗಳಿಗೆ ಸ್ವಾಯತ್ತತೆ’**

ಬೆಂಗಳೂರು, ಡಿ.17– ರಾಜ್ಯದಲ್ಲಿರುವ ಕೆಲವು ಪ್ರತಿಷ್ಠಿತ ಪದವಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ವಿಚಾರದ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ ಇಂದು ಇಲ್ಲಿ ಹೇಳಿದರು.

‘ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಹಾಗೂ ಪ್ರತಿಷ್ಠಿತ ಪದವಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದರಿಂದ ಅಂಥ ಕಾಲೇಜುಗಳಿಗೆ ಬೋಧಕ ಸಿಬ್ಬಂದಿ, ಕಟ್ಟಡ, ಪ್ರಯೋಗಶಾಲೆ, ಗ್ರಂಥಾಲಯ ಮತ್ತಿತರ ಸೌಲಭ್ಯಗಳನ್ನು ಹೊಂದಲು ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ (ಯುಜಿಸಿ) ಹೆಚ್ಚಿನ ಆರ್ಥಿಕ ನೆರವು ದೊರೆಯಲಿದೆ. ಈ ಹಿನ್ನೆಲೆಯಲ್ಲಿ ಪ್ರತಿಷ್ಠಿತ ಪದವಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ಸರ್ಕಾರ ಉದ್ದೇಶಿಸಿದೆ’ ಎಂದು ಅವರು ವರದಿಗಾರರಿಗೆ ತಿಳಿಸಿದರು.

• **‘ಕಲ್ಬುರ್ಗಿ, ಬೆಳಗಾವಿ ಜಿಲ್ಲೆ ವಿಭಜನೆ ಇಲ್ಲ’**

ಬೆಳಗಾವಿ, ಡಿ. 17– ಕಲ್ಬುರ್ಗಿ ಮತ್ತು ಬೆಳಗಾವಿ ಜಿಲ್ಲೆಗಳನ್ನು ವಿಭಜಿಸುವ ವಿಚಾರ ಸರ್ಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 18-12-1974

• **ಡ್ರೈವರ್‌ಗೆ ಪ್ರಯಾಣ ಪ್ರಯಾಣಿಕರಿಗೆ ನಿಲ್ದಾಣ**

ಬೆಂಗಳೂರು, ಡಿ. 17– ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್ ಬಸ್‌ಗಳ ಸಂಖ್ಯೆ ಸಾಲದೆ ಪ್ರಯಾಣಿಕರು ಪರದಾಡುವುದು ಹೊಸದಲ್ಲ. ಅದು ಹತ್ತಾರು ವರ್ಷದ ಕತೆ, ಆದರೆ ಈಗ ದುರ್ಭಿಕ್ಷದಲ್ಲಿ ಅಧಿಕಮಾಸ.

ಸುಮಾರು ಒಂದು ವಾರದಿಂದ ಕ್ಯೂ ಹೆಚ್ಚು ಹೆಚ್ಚು ಉದ್ದವಾಗುತ್ತಿರುವುದಕ್ಕೆ ಹಠಾತ್ತನೆ ಪ್ರಯಾಣಿಕರ ಸಂಖ್ಯೆ ಬೆಳೆದಿರುವುದು ಕಾರಣವಲ್ಲ, ಇದ್ದ ಬಸ್‌ಗಳೂ ರಸ್ತೆ ಬಿಟ್ಟು ಡಿಪೋ ಸೇರಿರುವುದು ಕಾರಣ.

ರಸ್ತೆ ಸಾರಿಗೆ ಕಾರ್ಪೊರೇಷನ್ ನೌಕರರೆಲ್ಲರಿಗೂ ಕಾರ್ಪೊರೇಷನ್ ಬಸ್ ಎಲ್ಲಿಗೆ ಹೋದರೆ ಅಲ್ಲಿ ಉಚಿತ ಹೋಗಲು ಪಾಸ್ ಇದೆ. ಈ ಪಾಸ್ ಅನ್ನು ಡಿಸೆಂಬರ್ 31ರೊಳಗೆ ಉಪಯೋಗಿಸಿಕೊಳ್ಳದಿದ್ದರೆ ಅದು ಲ್ಯಾಪ್ಸ್ ಆಗಿ ಹೋಗುತ್ತದೆ. ‘ಆದುದರಿಂದ ಸಾಕಷ್ಟು ಮಂದಿ ನೌಕರರು ಡಿಸೆಂಬರ್ ತಿಂಗಳಿನಲ್ಲಿ ಉಪಯೋಗಿಸಿಕೊಳ್ಳುತ್ತಾರೆ’. ರಜೆ ಹಾಕಿ ಮದ್ರಾಸ್, ಗೋವಾ, ಮುಂಬೈನಂಥ ದೂರದ ಊರುಗಳೂ ಸೇರಿ ಬೇರೆ ಬೇರೆ ಕಡೆಗಳಿಗೆ ಹೋಗುತ್ತಾರೆ.

• **ನಗರಸಭೆ ಚುನಾವಣೆ ಮಾರ್ಚ್‌ನೊಳಗೆ ಖಚಿತ**

ಬೆಂಗಳೂರು, ಡಿ. 17– ಬೆಂಗಳೂರು ನಗರಸಭೆಗೆ ಮುಂದಿನ ಫೆಬ್ರುವರಿ– ಮಾರ್ಚ್ ತಿಂಗಳೊಳಗೆ ಚುನಾವಣೆ ನಡೆಯುವುದು ಖಚಿತವಾದಂತಿದೆ.

ಚುನಾವಣೆ ನಡೆಸುವ ಬಗ್ಗೆ ತಮಗೆ ‘ಭರವಸೆ ದೊರಕಿದೆ’ ಎಂದು ಇಂದು ಇಲ್ಲಿ ಸ್ಪಷ್ಟಪಡಿಸಿದ ನಗರಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಎಂ.ವಿ. ತಿವಾರಿ ಅವರು, ‘ಚುನಾವಣೆಗೆ ನಮ್ಮ ಪಕ್ಷ ಸಿದ್ಧತೆಗಳನ್ನೂ ಮಾಡುತ್ತಿದೆ’ ಎಂದರು.

‘ಡಿವಿಜನ್‌ಗಳ ಪುನರ್ ವರ್ಗೀಕರಣ ಕಾರ್ಯ ಪೂರ್ಣಗೊಳ್ಳದಿರುವುದರಿಂದ ಡಿಸೆಂಬರ್‌ನಲ್ಲಿ ನಡೆಯಬೇಕಾಗಿದ್ದ ಚುನಾವಣೆಯನ್ನು ಅನಿವಾರ್ಯವಾಗಿ ಮುಂದೂಡಬೇಕಾಗಿದೆ. ನಗರಸಭೆಯ ಹಾಲಿ ಸದಸ್ಯರ ಅವಧಿಯನ್ನು ಮುಂದುವರಿಸಬೇಕೆಂದು ನಮ್ಮ ಪಕ್ಷ ಎಂದೂ ಹೇಳಿಲ್ಲ. ಅವಧಿ ಮುಂದುವರಿಸಬೇಕೆಂದು ಒತ್ತಾಯಪಡಿಸುವ ಪತ್ರಕ್ಕೆ 40 ಮಂದಿ ಸಹಿ ಹಾಕಿದ್ದಾರೆನ್ನುವುದೂ ಸುಳ್ಳು’ ಎಂದು ವಿವರಿಸಿದರು.

ಯಾವ ಪಕ್ಷಕ್ಕೆ ಈಗ ಮೀಸಲಾತಿ ವಿರುದ್ಧ ಸೊಲ್ಲೆತ್ತುವ ಧೈರ್ಯ ಇದೆ?

ಮೀಸಲಾತಿ ಎಲ್ಲರಿಗೂ ಬೇಕು!



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಮೀಸಲಾತಿ ವಿರೋಧಿ ಚಳವಳಿಯ ಯುಗ ಮುಗಿದು, ಮೀಸಲಾತಿಗಾಗಿ ಚಳವಳಿಯ ಹೊಸ ಯುಗ ಶುರುವಾಗಿದೆ. ರಾಜಸ್ಥಾನದಲ್ಲಿ ಜಾಟರು, ಗುಜರಾತ್‌ನಲ್ಲಿ ಪಾಟಿದಾರರು, ಮಹಾರಾಷ್ಟ್ರದಲ್ಲಿ ಮರಾಠರು, ಕರ್ನಾಟಕದಲ್ಲಿ ಪಂಚಮಸಾಲಿ ಸಮುದಾಯದವರು... ಹೀಗೆ ಪ್ರತಿ ರಾಜ್ಯದಲ್ಲೂ ಒಂದಲ್ಲ ಒಂದು ಸಮುದಾಯವು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದೆ.

ಮೀಸಲಾತಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಬೇರೆ ಬೇರೆ ರೀತಿಯ ಬೇಡಿಕೆಗಳು ಕೇಳಿಬಂದಿವೆ. ತಮಗೆ ಸಿಗುತ್ತಿರುವ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಕೆಲವು ಸಮುದಾಯಗಳಿಂದ ಕೂಗು ಎದ್ದಿದೆ. ಇನ್ನು ಕೆಲವು ಸಮುದಾಯಗಳು ತಮ್ಮನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸುತ್ತಿವೆ. ಕುರುಬರು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಕೇಳುತ್ತಿದ್ದಾರೆ. ಪರಿಶಿಷ್ಟ ಜಾತಿಯೊಳಗಿನ ಒಳಮೀಸಲಾತಿಯ ಕಿಚ್ಚು ಇನ್ನೂ ಆರಿಲ್ಲ.

ಅರ್ಹತೆಯ ಫಲಕ ಹಿಡಿದುಕೊಂಡು, ಮೀಸಲಾತಿ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿ ಇರುತ್ತಿದ್ದ ಬ್ರಾಹ್ಮಣರು ಸೇರಿದಂತೆ ಮೇಲ್ವರ್ಗದವರು ಕೂಡ ಶೇಕಡ 10ರ ಮೀಸಲಾತಿಯ ಫಲಾನುಭವಿಗಳಾದ ನಂತರ ಮೀಸಲಾತಿಯ ಪರ ಜೈಕಾರ ಹಾಕುತ್ತಿದ್ದಾರೆ. ಇಡೀ ದೇಶದಲ್ಲಿ ಈಗ ಮೀಸಲಾತಿ ವಿರೋಧಿ ಚಳವಳಿಯ ಸೊಲ್ಲೇ ಇಲ್ಲದಂತಾಗಿದೆ. ಹೀಗಾಗಿ, ಈಗ ಎಲ್ಲರೂ ಮೀಸಲಾತಿ ಪರ.

ಮೀಸಲಾತಿ ವಿರೋಧಿ ಹೋರಾಟಕ್ಕೆ ಗುಜರಾತ್, ಮಹಾರಾಷ್ಟ್ರ, ಉತ್ತರಪ್ರದೇಶ, ಬಿಹಾರ, ರಾಜಸ್ಥಾನ, ಕರ್ನಾಟಕ, ತಮಿಳುನಾಡಿನಂತಹ ರಾಜ್ಯಗಳಲ್ಲಿ ದೀರ್ಘ ಇತಿಹಾಸ ಇದೆ. ಮೀಸಲಾತಿ ಪರ– ವಿರೋಧದ ಚಳವಳಿಯಿಂದ ಸರ್ಕಾರಗಳು ಉರುಳಿವೆ, ಹೊಸ ಸರ್ಕಾರಗಳು ಅಧಿಕಾರಕ್ಕೆ ಬಂದಿವೆ. ಮಂಡಲ್ ವರದಿ ಜಾರಿ ವಿರೋಧಿಸಿ ಹುಟ್ಟಿಕೊಂಡ ಕಮಂಡಲ ಚಳವಳಿ ಇಡೀ ದೇಶದ ರಾಜಕೀಯ ಚಿತ್ರಣ, ದಿಕ್ಕುದೆಸೆಯನ್ನೇ ಬದಲಿಸಿದ್ದು ಈಗ ಇತಿಹಾಸ. ಮಂಡಲ್ ವರದಿ ವಿರೋಧಿಸಿ ಮೈಗೆ ಬೆಂಕಿ ಹಚ್ಚಿಕೊಂಡವರು, ವಿರೋಧಿಗಳ ಮನೆಗೆ ಬೆಂಕಿ ಇಟ್ಟವರೆಲ್ಲರೂ ಒಂದೋ ಮೀಸಲಾತಿಯ ಬೆಲ್ಲ ಸವಿಯುತ್ತಾ ನೆಮ್ಮದಿಯಿಂದಿದ್ದಾರೆ ಇಲ್ಲವೇ ಮೀಸಲಾತಿಗೆ ಒತ್ತಾಯಿಸಿ ಬೀದಿಗೆ ಇಳಿದಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿಯೇ ಹುಟ್ಟಿಕೊಂಡ ಮೀಸಲಾತಿ ವಿರುದ್ಧದ ಹೋರಾಟದ ಕಾವು 90ರ ದಶಕದಲ್ಲಿ ತಾರಕಕ್ಕೇರಿ, ನಿಧಾನವಾಗಿ ಇಳಿಯುತ್ತಾ ಬಂದು 2006ರ ನಂತರ ಹೆಚ್ಚು ಕಡಿಮೆ ನಿಂತೇಹೋಗಿದೆ. 2006ರಲ್ಲಿ ಯುಪಿಎ ನೇತೃತ್ವದ ಸರ್ಕಾರವು ಸಂವಿಧಾನಕ್ಕೆ 104ನೇ ತಿದ್ದುಪಡಿ ಮಾಡಿ, ಐಐಟಿ, ಐಐಎಂ, ಕೇಂದ್ರೀಯ ವಿಶ್ವವಿದ್ಯಾಲಯಗಳು ಸೇರಿದಂತೆ ಉನ್ನತ ಶಿಕ್ಷಣದಲ್ಲಿ ಹಿಂದುಳಿದ ಜಾತಿಯವರಿಗಾಗಿ ಜಾರಿಗೊಳಿಸಿದ್ದ ಶೇಕಡ 27ರಷ್ಟು ಮೀಸಲಾತಿ ವಿರುದ್ಧದ ಹೋರಾಟವೇ ಕೊನೆ. ಅದರ ನಂತರ ದೊಡ್ಡ ಪ್ರಮಾಣದಲ್ಲಿ ಮೀಸಲಾತಿ ವಿರೋಧಿ ಚಳವಳಿಗಳು ನಡೆದಿಲ್ಲ.

ಅಂದರೆ ಮೀಸಲಾತಿಯನ್ನು ವಿರೋಧಿಸುತ್ತಿದ್ದವರೆಲ್ಲರಿಗೂ ಜ್ಞಾನೋದಯವಾಗಿ ಅವರು ಸಾಮಾಜಿಕ ನ್ಯಾಯಕ್ಕೆ ತಲೆಬಾಗಿಸಿದ್ದಾರೆ ಎಂದು ಅರ್ಥವೇ? ಹಿಂದಿನ ಒಂದು ದಶಕದ ಅವಧಿಯಲ್ಲಿ ಕೋಮುವಾದದ ವಿಷ ಇಷ್ಟೊಂದು ಶೀಘ್ರಗತಿಯಲ್ಲಿ ಹರಡುತ್ತಿರುವಾಗಲೂ ಮೀಸಲಾತಿ ವಿರೋಧದ ವಿಷ ಜರ್ರನೆ ಕೆಳಗಿಳಿದು, ಎಲ್ಲರೂ ಸಾಮಾಜಿಕ ನ್ಯಾಯದ ಹರಿಕಾರರಾಗಿ ಬದಲಾಗಿದ್ದು ಹೇಗೆ? ಈ ಪ್ರಶ್ನೆಗಳು ಸಹಜವಾಗಿ ಅಧ್ಯಯನಕ್ಕೆ ಯೋಗ್ಯವಾಗಿವೆ.

ಇದಕ್ಕೆ ಮೊದಲನೆಯ ಕಾರಣ, ಮಂಡಲೋತ್ತರ ದಿನಗಳಲ್ಲಿ ಮೀಸಲಾತಿಯ ಫಲಾನುಭವಿಗಳಲ್ಲಿ ದೊಡ್ಡ ಗುಂಪಾದ ಹಿಂದುಳಿದ ಜಾತಿಗಳಲ್ಲಿ ನಡೆದಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸಬಲೀಕರಣ. ಇದರಿಂದ ಈ ಸಮುದಾಯಗಳು ಯಾವ ರಾಜಕೀಯ ಪಕ್ಷವೂ ನಿರ್ಲಕ್ಷಿಸಲಾಗದ ಮತಬ್ಯಾಂಕ್ ಆಗಿ ಬೆಳೆದು ನಿಂತಿವೆ. ಒಂದೆಡೆ, ಲಾಲು ಪ್ರಸಾದ್ ಮತ್ತು ಮುಲಾಯಂ ಸಿಂಗ್ ಅವರ ಯಾದವ ಜೋಡಿ, ಇನ್ನೊಂದೆಡೆ, ಕಾನ್ಶಿರಾಂ ಎಂಬ ಸ್ವತಂತ್ರ ಭಾರತದ ನಿಜ ಚಾಣಕ್ಯನ ಪ್ರವೇಶದಿಂದಾಗಿ ಉತ್ತರಪ್ರದೇಶ, ಬಿಹಾರದ ಸಾಮಾಜಿಕ ಮತ್ತು ರಾಜಕೀಯ ಚಿತ್ರಣವೇ ಬದಲಾಗಿಹೋಯಿತು.

ಇಂದು ದೇಶದ ಪ್ರಧಾನಿ ಮಾತ್ರವಲ್ಲ, ಎಂಟು ರಾಜ್ಯಗಳ ಮುಖ್ಯಮಂತ್ರಿಗಳು ಹಿಂದುಳಿದ ಜಾತಿಗಳಿಗೆ ಸೇರಿದವರು. 2024ನೇ ಲೋಕಸಭೆಯಲ್ಲಿ 138 ಸದಸ್ಯರು ಹಿಂದುಳಿದ ಜಾತಿಗಳಿಗೆ ಸೇರಿದವರು. ಕೇಂದ್ರ ಸಂಪುಟದಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿರುವ 23 ಸಚಿವರಿದ್ದಾರೆ. ಇದೇ ಮೊದಲ ಬಾರಿಗೆ ಲೋಕಸಭೆಗೆ ಪ್ರಬಲ ಜಾತಿಗಳ ಸದಸ್ಯರಿಗೆ ತುಸು ಹೆಚ್ಚು ಕಡಿಮೆ ಸಮನಾಗಿ ಹಿಂದುಳಿದ ಜಾತಿಗಳ ಸದಸ್ಯರು ಆರಿಸಿ ಬಂದಿದ್ದಾರೆ. ಇವರ ಜೊತೆ ಎಸ್‌ಸಿ, ಎಸ್‌ಟಿಯ 131 ಸದಸ್ಯರನ್ನು ಸೇರಿಸಿದರೆ ಲೋಕಸಭೆಯಲ್ಲಿ ಮೀಸಲಾತಿ ಫಲಾನುಭವಿಗಳದ್ದೇ ದೊಡ್ಡ ಗುಂಪು. ಈಗ ಯಾವ ಪಕ್ಷಕ್ಕೆ ಮೀಸಲಾತಿ ವಿರುದ್ಧ ಸೊಲ್ಲೆತ್ತುವ ಧೈರ್ಯ ಇದೆ?

ಮೀಸಲಾತಿ ವಿರೋಧಿಗಳ ಮನಸ್ಸು ಇಂದು ಸಂಪೂರ್ಣವಾಗಿ ಬದಲಾಗಿದೆ ಎಂದು ಹೇಳುವ ಹಾಗಿಲ್ಲ. ಇವರ ಕಾರ್ಯತಂತ್ರ ಬದಲಾಗಿದೆ. ಇತ್ತೀಚಿನವರೆಗೆ ಮೀಸಲಾತಿ ಫಲಾನುಭವಿಗಳ ಮನೆಗೆ ಕಲ್ಲು ಹೊಡೆಯುತ್ತಿದ್ದವರು ಈಗ ಅವರ ಮನೆಯೊಳಗೆ ಹುಟ್ಟಿಕೊಂಡಿರುವ ಜಗಳದ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ. ಇದಕ್ಕೆ ಕರ್ನಾಟಕದ ಪಂಚಮಸಾಲಿ ಸಮುದಾಯದವರು ಮತ್ತು 2ಎ ಪ್ರವರ್ಗದಲ್ಲಿರುವ ಹಿಂದುಳಿದ ಜಾತಿಗಳ ನಡುವೆ ನಡೆಯುತ್ತಿರುವ ಸಂಘರ್ಷ ಒಂದು ಉದಾಹರಣೆ ಅಷ್ಟೆ.

ಮೀಸಲಾತಿಯ ಸುತ್ತ ಹುಟ್ಟುಹಾಕಲಾದ ವಿವಾದದ ಬೆಂಕಿಯನ್ನು ಆರಿಸಲು ಇರುವ ಏಕೈಕ ದಾರಿ ಒಟ್ಟು ಮೀಸಲಾತಿ ಪ್ರಮಾಣದ ಹೆಚ್ಚಳ. ಇದಕ್ಕೆ ಅಡ್ಡಿಯಾಗಿರುವುದು ಮೀಸಲಾತಿ ಪ್ರಮಾಣ ಶೇಕಡ 50 ಮೀರಬಾರದು ಎಂದು ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 1992ರಲ್ಲಿ ನೀಡಿರುವ ತೀರ್ಪು. ಮೀಸಲಾತಿ ಹೆಚ್ಚಳದ ಬೇಡಿಕೆ ಎದುರಾದಾಗೆಲ್ಲ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಮುಖಕ್ಕೆಟ್ಟು ಬಾಯಿಮುಚ್ಚಿಸುತ್ತಾ ಬಂದಿದೆ. ಕೇಂದ್ರದ ಈಗಿನ ಸರ್ಕಾರವು ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10ರಷ್ಟು ಮೀಸಲಾತಿ ನೀಡಿ ಶಾಸನ ರಚಿಸುವ ಮೂಲಕ ಇಂದಿರಾ ಸಹಾನಿ ತೀರ್ಪನ್ನು ನೇರವಾಗಿ ಉಲ್ಲಂಘಿಸಿ ಆಗಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಸಂವಿಧಾನದ ತಿದ್ದುಪಡಿ ಮೂಲಕ ಬದಲಾಯಿಸಿರುವ ಇನ್ನೂ ಹಲವಾರು ಉದಾಹರಣೆಗಳಿವೆ. ಸಂವಿಧಾನಕ್ಕೆ ಇಲ್ಲಿಯವರೆಗೆ 106 ತಿದ್ದುಪಡಿಗಳಾಗಿವೆ. ತಮಿಳುನಾಡು ಸರ್ಕಾರವು ಮೀಸಲಾತಿಯನ್ನು ಶೇಕಡ 69ಕ್ಕೆ ಹೆಚ್ಚಿಸಿ, ಅದು ಸಂವಿಧಾನದ ಒಂಬತ್ತನೇ ಶೆಡ್ಯೂಲ್‌ಗೆ ಸೇರುವಂತೆ ಮಾಡಿ ಸುರಕ್ಷಿತಗೊಳಿಸಿದೆ.

ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಹೊರಟರೆ ಸುಪ್ರೀಂ ಕೋರ್ಟ್ ವಿಶ್ವಾಸಾರ್ಹ ದತ್ತಾಂಶಗಳನ್ನು ಖಂಡಿತ ಕೇಳುತ್ತದೆ. ಇದಕ್ಕಾಗಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಅಗತ್ಯ ಇದೆ. ಈ ಸವಾಲನ್ನು ಎದುರಿಸಲು ಸಾಮಾಜಿಕ ನ್ಯಾಯ ಪಾಲನೆಯಲ್ಲಿ ದೇಶಕ್ಕೆ ಮಾದರಿಯಾಗಿರುವ ಕರ್ನಾಟಕ ದಾರಿ ತೋರಿಸಬಹುದು. 1994ರಲ್ಲಿಯೇ ಎಂ.ವೀರಪ್ಪ ಮೊಯಿಲಿ ನೇತೃತ್ವದ ಕಾಂಗ್ರೆಸ್ ಸರ್ಕಾರವು ಒಟ್ಟು ಮೀಸಲಾತಿಯನ್ನು ಶೇಕಡ 73ಕ್ಕೆ ಹೆಚ್ಚಿಸಿ ಕಾನೂನು ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿದ್ದ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸುಮಾರು 25 ವರ್ಷಗಳಿಂದ ವಿಚಾರಣೆ ನಡೆಸುತ್ತಿದೆ. ಕಾಂಗ್ರೆಸ್ ಪಕ್ಷವು ಕರ್ನಾಟಕದ ಈ ಹಿಂದಿನ ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಳದ ಭರವಸೆ ನೀಡಿದೆ. ಈ ವಿಷಯದಲ್ಲಿ ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿಕೊಡಲು ನಮ್ಮಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿ ಕೂಡಾ ಸಿದ್ಧವಾಗಿದೆ. ಮೀಸಲಾತಿ ಪ್ರಮಾಣ ಹೆಚ್ಚಳ ಮತ್ತು ಸಾಮಾಜಿಕ- ಆರ್ಥಿಕ ಸಮೀಕ್ಷೆಯ ಎರಡು ಅಸ್ತ್ರಗಳನ್ನು ಕರ್ನಾಟಕದಿಂದ ಪಡೆದುಕೊಂಡು ತಮ್ಮ ಬತ್ತಳಿಕೆಯಲ್ಲಿ ಸೇರಿಸಿಕೊಂಡಿರುವ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಇವುಗಳನ್ನೇ ತಮ್ಮ ಪ್ರಮುಖ ಅಜೆಂಡಾವನ್ನಾಗಿ ಮಾಡಿಕೊಂಡಿದ್ದಾರೆ.

ಈಗ ಚೆಂಡು ಕರ್ನಾಟಕ ಸರ್ಕಾರದ ಅಂಗಳದಲ್ಲಿದೆ. ಸರ್ಕಾರ ತಕ್ಷಣ ತೀರ್ಮಾನ ಕೈಗೊಂಡು ಸಾಮಾಜಿಕ-ಆರ್ಥಿಕ ಸಮೀಕ್ಷೆಯ ವರದಿಯನ್ನು ಒಪ್ಪಿಕೊಂಡು, ಅದರ ಆಧಾರದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಿ ಕಾನೂನು ರಚಿಸಬೇಕು. ಇದರ ಸುರಕ್ಷತೆಗಾಗಿ ಇದನ್ನು ಸಂವಿಧಾನದ ಒಂಬತ್ತನೇ ಶೆಡ್ಯೂಲ್‌ನಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಈಗ ಇರುವ ಮತ್ತು ಹೊಸಹೊಸದಾಗಿ ಹುಟ್ಟಿಕೊಳ್ಳಲಿರುವ ಮೀಸಲಾತಿ ಬೇಡಿಕೆಗಳಿಗೆ ಸಂಬಂಧಿಸಿದ ಬಿಕ್ಕಟ್ಟಿಗೆ ಇದೊಂದೇ ಶಾಶ್ವತ ಪರಿಹಾರ. ಸಾಮಾಜಿಕ ನ್ಯಾಯದ ದಾರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹಳಷ್ಟು ಮುಂದೆ ಸಾಗಿ ಬಂದಿದ್ದಾರೆ, ಇನ್ನೊಂದು ದೃಢವಾದ ಹೆಜ್ಜೆ ಇಡಬೇಕಾಗಿದೆ. ಆ ರಾಜಕೀಯ ಇಚ್ಛಾಶಕ್ತಿಯನ್ನು ಅವರು ಪ್ರದರ್ಶಿಸಬೇಕು.



ಚುರುಮುರಿ



ಸಮ್ಮೇಳನಕ್ಕೆ ಬನ್ನಿ

• ಮಣ್ಣೆ ರಾಜು

‘ಹಲೋ ಸುಮಿ, ಕುಟುಂಬ ಸಮೇತರಾಗಿ ಸಾಹಿತ್ಯ ಸಮ್ಮೇಳನಕ್ಕೆ ಬನ್ನಿ, ನಿಮ್ಮ ಗಂಡನಿಗೂ ಹೇಳಿಬಿಡಿ...’ ವತ್ಸಲಾಳ ಫೋನ್.

‘ಗಂಡ ಪಕ್ಕದಲ್ಲೇ ಇದ್ದಾರೆ ಕಣ್ರೀ...’ ಎಂದ ಸುಮಿ, ‘ರೀ, ಮಂಡ್ಯದಿಂದ ವತ್ಸಲಾ ಫೋನ್ ಮಾಡಿದ್ದಾರೆ, ಸಮ್ಮೇಳನಕ್ಕೆ ಕರೆಯುತ್ತಿದ್ದಾರೆ’ ಗಂಡನಿಗೆ ಹೇಳಿದಳು.

‘ಸಮ್ಮೇಳನಕ್ಕೆ ಹೆಸರು ನೋಂದಾಯಿಸಿದ್ದೇವೆ, ಬರ್ತೀವಿ ಅಂತ ಹೇಳು’ ಅಂದ ಶಂಕ್ರಿ.

‘ನಿಮ್ಮೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ನಮ್ಮನ್ನು ಕರೆದು ಆತಿಥ್ಯ ಕೊಟ್ರಿ, ಈಗ ನಮ್ಮೂರಿನ ಕನ್ನಡ ಹಬ್ಬಕ್ಕೆ ಬನ್ನಿ’ ಅಂದಳು ವತ್ಸಲಾ.

‘ಹಬ್ಬದ ಅಡುಗೆ ಏನು ಮಾಡ್ತೀರಿ?’

‘ಬಾಡೂಟ, ಲಾಡೂಟ ಎರಡನ್ನೂ ಮಾಡ್ತೀನಿ ಬನ್ನಿ’.

‘ಕನ್ನಡ ಹಬ್ಬಕ್ಕೆ ಹೊಸ ಸೀರೆ ತಗೊಂಡ್ರಾ?’

‘ಇಲ್ಲಾರೀ, ನೀವು?’

‘ಇಲ್ಲ. ಆದರೆ, ನನ್ನ ಗಂಡ ಹೊಸ ಜುಬ್ಬ, ಜೋಲಿ ಬ್ಯಾಗು, ದಪ್ಪ ಫ್ರೇಮಿನ ಕನ್ನಡಕ ಕೊಂಡುಕೊಂಡಿದ್ದಾರೆ. ಬೈತಲೆ ಬಾಚಿಕೊಂಡು ಹೇರ್‌ಸ್ಟೈಲ್ ಚೇಂಜ್ ಮಾಡಿಕೊಂಡು ಸಾಹಿತಿ ವೇಷದಲ್ಲಿ ಸಿದ್ಧರಾಗಿದ್ದಾರೆ’.

‘ಸ್ಕೂಲ್ ಮಕ್ಕಳು ಸಂಗೊಳ್ಳಿ ರಾಯಣ್ಣ, ಒನಕೆ ಓಬವ್ವನ ವೇಷಭೂಷಣ ಹಾಕೋದನ್ನು ನೋಡಿದ್ದೇನೆ, ಸಾಹಿತಿಗಳಿಗೂ ವೇಷ ಇರುತ್ತೇನ್ರೀ? ನಿಮ್ಮ ಗಂಡ ಎಷ್ಟು ಕವನ ಬರೆದಿದ್ದಾರೆ?’

‘ಟೂ ಹಂಡ್ರೆಡ್ ಪೇಜಿನ ನಾಲ್ಕು ನೋಟ್‌ಬುಕ್‌ಗಳಲ್ಲಿ ನೂರಾರು ಕವನಗಳನ್ನು ಬರೆದಿದ್ದಾರೆ. ಆದರೂ ಕವಿಗೋಷ್ಠಿಗಳಲ್ಲಿ ಅವಕಾಶ ಸಿಕ್ಕಿಲ್ಲ, ಪ್ರಶಸ್ತಿ, ಪುರಸ್ಕಾರವೂ ದೊರೆತಿಲ್ಲ’.

‘ಛೇಛೇ! ಅನ್ಯಾಯ’.

‘ಕನ್ನಡಮ್ಮನಿಗೆ ಹರಕೆ ಮಾಡಿಕೊಂಡರೆ ಸಾಹಿತ್ಯ ದೋಷ ನಿವಾರಣೆಯಾಗುತ್ತೆ ಅಂತ ಹಿರಿಯರೊಬ್ಬರು ಹೇಳಿದ್ರು’.

‘ನಿಮ್ಮ ಗಂಡ ಕನ್ನಡಮ್ಮನಿಗೆ ಮುಡಿ ಕೊಡಬೇಕಂತಾ?’

‘ಇಲ್ಲಾರೀ, ಸಾಹಿತ್ಯ ಸಮ್ಮೇಳನಕ್ಕೆ ಬಂದು ಕನ್ನಡದ ತೇರು ಎಳೆದು, ತೇರಿನ ಮೇಲೆ ಬಾಳೆಹಣ್ಣು ಎಸೆದು ಹರಕೆ ತೀರಿಸ್ತೀವಿ’.

‘ಒಳ್ಳೆಯದಾಗುತ್ತೆ ಬನ್ನಿ’ ಮಾತು ಮುಗಿಸಿದಳು ವತ್ಸಲಾ.

ಸಂಗತ

ಕಲಿಕಾ ಸಾಧನೆ: ಬೇಕು ಸಂಘಟಿತ ಯತ್ನ

ಪ್ರಾಥಮಿಕ ಶಿಕ್ಷಣದಲ್ಲಿ ಕಲಿಕಾ ಗುಣಮಟ್ಟ ಸುಧಾರಣೆಗೆ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕಾದ ಅಗತ್ಯವನ್ನು ಸಿಎಜಿ ವರದಿ ಎತ್ತಿಹಿಡಿದಿದೆ

• ಎಚ್.ಬಿ.ಚಂದ್ರಶೇಖರ್

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳ ಕಾರ್ಯನಿರ್ವಹಣೆಯ ಕುರಿತು ಮಹಾಲೇಖಪಾಲರು (ಸಿಎಜಿ) ರಾಜ್ಯದ ಆಯ್ದ ಎಂಟು ಜಿಲ್ಲೆಗಳ 16 ಶೈಕ್ಷಣಿಕ ವಲಯಗಳ 128 ಶಾಲೆಗಳಲ್ಲಿ ಕಾರ್ಯಕ್ಷಮತೆಯ ಲೆಕ್ಕಪರಿಶೋಧನೆ (ಪರ್ಫಾರ್ಮೆನ್ಸ್ ಆಡಿಟ್) ಕೈಗೊಂಡು ವರದಿಯೊಂದನ್ನು ಸಿದ್ಧಪಡಿಸಿದ್ದಾರೆ. ಈ ವರದಿಯು ಸಿಎಜಿ ಜಾಲತಾಣದಲ್ಲಿ ಸಾರ್ವಜನಿಕರ ಅವಗಾಹನೆಗೆ ಲಭ್ಯವಿದೆ.

ಪ್ರಾಥಮಿಕ ಶಾಲಾ ಶಿಕ್ಷಣ ವ್ಯವಸ್ಥೆ ಕುರಿತಂತೆ ವಿವಿಧ ವಿಷಯಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ಕಂಡುಕೊಂಡ ಅಂಶಗಳನ್ನು ಒಳಗೊಂಡಂತೆ 155 ಪುಟಗಳ ವಿಸ್ತೃತ ವರದಿಯನ್ನು ಸಿದ್ಧಪಡಿಸಲಾಗಿದೆ. ಸಾಮಾನ್ಯವಾಗಿ ವ್ಯವಸ್ಥೆಯ ಭಾಗವಾಗಿರುವ ವ್ಯಕ್ತಿಗಳಿಗೆ ತಾವು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಅಥವಾ ಇಲಾಖೆಯ ಕುರಿತಂತೆ ವಿಮರ್ಶಾತ್ಮಕವಾದ ಒಳನೋಟಗಳನ್ನು ಹೊಂದಲು ಸಾಧ್ಯವಾಗುವುದಿಲ್ಲ. ಸಿಎಜಿಯಂತಹ ಯಾವುದೇ ಬಾಹ್ಯ ಸ್ವತಂತ್ರ ಸಂಸ್ಥೆಯು ವಸ್ತುನಿಷ್ಠ ಅವಲೋಕನದ ಮೂಲಕ ತುಸು ಕಠಿಣ ಎನಿಸಬಹುದಾದ ವಿಚಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಅದನ್ನು ಸಂಬಂಧಿಸಿದ ಸಂಸ್ಥೆ ಅಥವಾ ಇಲಾಖೆಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸುವ ಮೂಲಕ ಗುಣಮಟ್ಟ ಹೆಚ್ಚಳಕ್ಕೆ ಬೆಂಬಲ ನೀಡಲು ಸಹಾಯವಾಗುತ್ತದೆ. ಇದಕ್ಕೆ ಪೂರಕವಾಗಿ, ಸಿಎಜಿ ವರದಿಯು ಅನೇಕ ಸಲಹೆ ಹಾಗೂ ಶಿಫಾರಸುಗಳನ್ನು ನೀಡಿದೆ.

ಸಿಎಜಿಯು ಅಧ್ಯಯನ ಕೈಗೊಂಡ 16 ಶೈಕ್ಷಣಿಕ ವಲಯಗಳಲ್ಲಿ ಕಂಡುಕೊಂಡ ಎರಡು ಉತ್ತಮ ಪ್ರಯತ್ನಗಳ ಮಾಹಿತಿಯನ್ನು ವರದಿಯಲ್ಲಿ ಅಡಕಗೊಳಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಶೈಕ್ಷಣಿಕ ವಲಯದ ಭಾಶೆಟ್ಟಿಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ನೀಡಲಾಗುವ ನಿಧಿಯನ್ನು (ಸಿಎಸ್‌ಆರ್) ಬಳಸಿಕೊಂಡು ಶಾಲೆಯ ಕಟ್ಟಡ, ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯದಂತಹ ಎಲ್ಲಾ ಸೌಲಭ್ಯಗಳನ್ನು ಉತ್ತಮೀಕರಿಸಲಾಗಿದೆ. ಇದರ ಪರಿಣಾಮವಾಗಿ, ಶಾಲೆಯ ದಾಖಲಾತಿಯು 2018- 19ರಲ್ಲಿ 386 ಇದ್ದದ್ದು 2022- 23ರಲ್ಲಿ 831 ಆಗಿರುವುದನ್ನು ವರದಿಯಲ್ಲಿ ತಿಳಿಸಲಾಗಿದೆ.

ಈ ರೀತಿಯ ಪ್ರಯತ್ನಗಳನ್ನು ಇತರ ಜಿಲ್ಲೆಗಳ ಹೆಚ್ಚಿನ ಶಾಲೆಗಳಲ್ಲಿ ಅನುಷ್ಠಾನ ಮಾಡಲು ಶಿಫಾರಸು ಮಾಡಲಾಗಿದೆ. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಯರಕೊಪ್ಪಲು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಈ ಹಿಂದೆ ಒಟ್ಟಾರೆ ವಿದ್ಯಾರ್ಥಿಗಳ ದಾಖಲಾತಿಯು 1,500 ಇತ್ತು. ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣ ಕಡಿಮೆಯಾಗುತ್ತಾ ಬಂದಿತು. ಕೊನೆಗೆ 2018- 19ರ ವೇಳೆಗೆ ಅದು 140ಕ್ಕೆ ಕುಸಿಯಿತು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜನ್ನು ಒಟ್ಟುಗೂಡಿಸಿ, ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಎಂದು ಮಾರ್ಪಡಿಸಲಾಯಿತು. ಕೆಪಿಎಸ್ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಿ, ಮೂಲ ಸೌಕರ್ಯಗಳನ್ನು ಉತ್ತಮಪಡಿಸಲಾಯಿತು. ಇದರ ಪರಿಣಾಮವಾಗಿ, 2021- 22ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣವು 658ಕ್ಕೆ ಏರಿಕೆ ಆಗಿರುವುದನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಮಕ್ಕಳ ಕಲಿಕಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸಿಎಜಿ ವರದಿಯಲ್ಲಿ ಗಮನಿಸಬಹುದಾದ ಮತ್ತೊಂದು ಅಂಶ ಇದೆ. ಅದೇಂದರೆ, ವಿದ್ಯಾರ್ಥಿಗಳ ಕಲಿಕಾ ಮಾಪನ ಮಾಡಲು ಅಗತ್ಯವಾದ ಸಾಧನಗಳನ್ನು ಶಿಕ್ಷಣ ಇಲಾಖೆಯ ತಂಡದ ಸಹಾಯದಿಂದ ಸಿದ್ಧಪಡಿಸಿಕೊಳ್ಳಲಾಯಿತು. ಅದನ್ನು ಮುಂದಿಟ್ಟು, ಸಿಎಜಿ ತಂಡದ ಕಣ್ಗಾವಲಿನಲ್ಲಿ ಅಧ್ಯಯನಕ್ಕೆ ಒಳಪಟ್ಟ ಶೈಕ್ಷಣಿಕ ವಲಯಗಳ ಶಾಲೆಗಳಲ್ಲಿ ನಾಲ್ಕು ಮತ್ತು ಏಳನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಮಾಪನವನ್ನು ಮಾಡಲಾಯಿತು.



ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಸಂಬಂಧಿಸಿದ ಕ್ಲಸ್ಟರ್‌ಗಳ ಶಿಕ್ಷಕರ ಸಹಾಯದಿಂದ ಮೌಲ್ಯಮಾಪನ ಮಾಡಿಸಿ, ಕಲಿಕಾ ಮಾಪನ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ವರದಿಯ ಅನುಸಾರ, ನಾಲ್ಕು ಮತ್ತು ಏಳನೇ ತರಗತಿಗಳಲ್ಲಿ ಕ್ರಮವಾಗಿ ಶೇ 68.22 ಮತ್ತು ಶೇ 72.90ರಷ್ಟು ವಿದ್ಯಾರ್ಥಿಗಳು ಶೇ 50ಕ್ಕಿಂತ ಕಡಿಮೆ ಅಂಕಗಳನ್ನು ತೆಗೆದುಕೊಂಡಿದ್ದಾರೆ. ನಾಲ್ಕನೇ ತರಗತಿಯಲ್ಲಿ ಶೇ 46.55 ಮತ್ತು ಏಳನೇ ತರಗತಿಯಲ್ಲಿ ಶೇ 37.16ರಷ್ಟು ವಿದ್ಯಾರ್ಥಿಗಳು ಶೇ 30ಕ್ಕಿಂತ ಕಡಿಮೆ ಸಾಧನೆ ಮಾಡಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ಗಮನಿಸಿದರೆ, ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಉತ್ತಮಪಡಿಸಲು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುವ ಅಗತ್ಯ ಇರುವುದು ಕಂಡುಬರುತ್ತದೆ.

ಸಿಎಜಿ ವರದಿಯಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಕ್ಕಾಗಿ ಕೈಗೊಂಡ ಸಮೀಕ್ಷೆಯಲ್ಲಿ 400 ವಿದ್ಯಾರ್ಥಿಗಳು ತಮಗೆ ಪರಿಹಾರ ಬೋಧನೆ ದೊರೆಯುತ್ತಿದೆ ಎಂದು ತಿಳಿಸಿದ್ದಾರೆ. ಆದರೆ ಉಳಿದ 1,100 ವಿದ್ಯಾರ್ಥಿಗಳು ತಮಗೆ ಪರಿಹಾರ ಬೋಧನೆ ದೊರೆಯುತ್ತಿಲ್ಲ ಎಂದು ತಿಳಿಸಿದ್ದಾರೆ. ಇದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಅಂಶಗಳು ವಿದ್ಯಾರ್ಥಿಗಳ ಕಲಿಕಾ ಸಾಧನೆಗೆ ಸಂಘಟಿತ ಪ್ರಯತ್ನದ ಅಗತ್ಯವನ್ನು ತಿಳಿಸುತ್ತವೆ.

ವಾಚಕರ ವಾಣಿ

ಕೊಟ್ಟರೆ ತಾನೆ ಪಡೆಯಲು ಸಾಧ್ಯ?

‘ಈಗ ಚುನಾವಣೆ ಎಂದರೆ ಚಳಿ, ಜ್ವರ, ವಾಂತಿ–ಭೇದಿಯೂ ಬರುತ್ತದೆ. ಗ್ರಾಮ ಪಂಚಾಯಿತಿ ಚುನಾವಣೆಗೂ ಬಂಡವಾಳ ಹೂಡಿ ಸ್ಪರ್ಧಿಸುವ ಕಾಲ ಬಂದಿದೆ’ ಎಂದು ಕೆ.ಆರ್.ರಮೇಶ್ ಕುಮಾರ್ ಅವರು ಹೇಳಿರುವುದರಲ್ಲಿ ಸತ್ಯ ಇದೆ. ಆದರೆ ಇಂತಹ ಪರಿಸ್ಥಿತಿಗೆ ಮತದಾರರು ಕಾರಣರಲ್ಲ. ಮತದಾರರಿಗೆ ಉಡುಗೊರೆಗಳನ್ನು ನೀಡಿ, ಹಣ, ಮದ್ಯ ಹಂಚಿ, ನಾನಾ ತರಹದ ಆಮಿಷಗಳನ್ನು ಒಡ್ಡಿ ಗೆಲ್ಲುವ ವಿಧಾನ ಆರಂಭಿಸಿದವರು ಸ್ಪರ್ಧಾಕಾಂಕ್ಷಿಗಳೇ ಅಲ್ಲವೆ? ಕೊಟ್ಟಾಗ ತಾನೆ ತೆಗೆದುಕೊಳ್ಳಲು ಸಾಧ್ಯ?

ಅಂತೂ ಬೇಕೋ ಬೇಡವೋ ಇಂತಹ ಪರಿಸ್ಥಿತಿ ಬಂದಾಗಿದೆ. ಇದರ ನಡುವೆಯೇ ಈಸಬೇಕು ಇದ್ದು ಜೈಸಬೇಕು. ಸುಮ್ಮನೆ ಅಲವತ್ತುಕೊಂಡರೆ ಪ್ರಯೋಜನ ಇಲ್ಲ. ಚುನಾವಣಾ ಸ್ವರೂಪವೇ ಆಮೂಲಾಗ್ರವಾಗಿ ಬದಲಾಗಬೇಕು. ನಿಜವಾದ ಅರ್ಹರು, ವಿದ್ಯಾವಂತರು, ದೂರದೃಷ್ಟಿ ಹೊಂದಿರುವವರು ಹಾಗೂ ಚುನಾವಣೆಯಲ್ಲಿ ಸೆಣಸಲು ಆಗದವರಿಗೆಂದೇ ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯ ಸ್ಥಾನಗಳಿವೆ. ಅವರ ಚಿಂತನೆಗಳು ಮತ್ತು ಜ್ಞಾನವನ್ನು ದೇಶದ ಅಭಿವೃದ್ಧಿಗಾಗಿ ಬಳಸಿಕೊಳ್ಳುವ ಉದ್ದೇಶವನ್ನು ಅವು ಹೊಂದಿವೆ. ಆದರೆ ಅಲ್ಲಿಯೂ ಬಹುತೇಕ ಹಣಬಲ, ಜಾತಿಬಲ ಇರುವವರೇ ಸದಸ್ಯರಾಗುತ್ತಿರುವುದು ದುರಂತ. ಇಂತಹವರಿಂದ ದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯವೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪ್ರೀತಿ, ಕಾರುಣ್ಯದ ಒರತೆ

ನಿಮ್ಮ ಬೆರಳಲಿ ಅನುರಣಿಸಿದ
ತಬಲಾ ನಾದಸುಧೆ
ಪ್ರೀತಿ, ಕಾರುಣ್ಯದ ಒರತೆಯಾಗಿ
ಸಮತೆ ಸಾಮರಸ್ಯದ ಜೇನಾಗಿ
ತುಂಬಿತು ಜಗದ ಮನವ
ಹಳತು ಹೊಸತರ ಬೆಸುಗೆ
ನಾವೀನ್ಯದ ಬೆಡಗು
ನಿಮ್ಮ ಕಲಾವೈಭವ ಹುಸೇನರೇ...
ನೀವಿಲ್ಲದಿದ್ದರೂ ಸದಾ ಬೆಳಗುವುದು
ನಮ್ಮ ಅಂತರಂಗವ
ನಿಮ್ಮ ಕಲಾಜ್ಯೋತಿ.

ಸಿ.ಪಿ.ಸಿದ್ಧಾಶ್ರಮ
ಮೈಸೂರು

ಪಕ್ಷಚಿಹ್ನೆ: ವೈಷಮ್ಯ ಹೆಚ್ಚಿಸುವ ನಡೆ

ಗ್ರಾಮ ಪಂಚಾಯಿತಿ ಚುನಾವಣೆಯನ್ನು ಪಕ್ಷಗಳ ಚಿಹ್ನೆಗಳ ಅಡಿ ನಡೆಸಲು ಸರ್ಕಾರ ಚಿಂತನೆ ನಡೆಸಿದೆ ಎಂಬ ವರದಿ (ಪ್ರ.ವಾ., ಡಿ. 16) ಓದಿ ಒಂದು ಕ್ಷಣ ದಿಗ್ಭ್ರಮೆಯಾಯಿತು. ಈ ಹಿಂದೆ ಇಂತಹುದೇ ವ್ಯವಸ್ಥೆ ಇದ್ದಾಗ, ಊರಿನ ಮುಖಂಡರ ನಡುವೆ ವೈಷಮ್ಯ ಹೆಚ್ಚಾಗಿ, ಪಂಚಾಯಿತಿ ಅಧ್ಯಕ್ಷ, ಸದಸ್ಯರ ಕೊಲೆಗಳು ಸಹ ನಡೆದ ಉದಾಹರಣೆಗಳಿವೆ. ಇದರಿಂದ ಊರಿನಲ್ಲಿ ಗುಂಪುಗಾರಿಕೆ, ದ್ವೇಷ ಮನೆ ಮಾಡಿ ಊರಿಗೆ ಊರೇ ಹೊತ್ತಿ ಉರಿಯುತ್ತಿದ್ದುದನ್ನು ಗ್ರಾಮಗಳ ಹಿರಿಯರು ಇನ್ನೂ ಮರೆತಿಲ್ಲ. ಪಕ್ಷರಹಿತ ಸ್ಪರ್ಧೆಯಿಂದಾಗಿ ಸ್ವಲ್ಪವಾದರೂ ಸಾಮರಸ್ಯ ಉಳಿದಿದೆ.

ಅಷ್ಟಕ್ಕೂ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆಲುವಿಗೆ ಆಯಾ ವ್ಯಕ್ತಿಯ ಹಿನ್ನೆಲೆ ಮುಖ್ಯವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಹಣದ ಹೊಳೆ ಹರಿಯುವುದು ಮಾಮೂಲಿ ಎನ್ನುವಂತಾಗಿದೆ. ಅದೇನೇ ಇರಲಿ, ರಾಜಕೀಯ ಪಕ್ಷಗಳು ತಮ್ಮ ತಮ್ಮ ಪಕ್ಷಗಳನ್ನು ಗ್ರಾಮ ಮಟ್ಟದಲ್ಲಿ ಬೇರೂರಿಸಲು ಇಂತಹ ಪ್ರಯತ್ನ ಮಾಡುವುದನ್ನು ಕೈಬಿಟ್ಟರೆ ಅಷ್ಟರಮಟ್ಟಿಗೆ ಗ್ರಾಮಗಳಿಗೆ ಹಿತ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಅರೆಕಾಲಿಕ ಉದ್ಯೋಗಕ್ಕೆ ಲಕ್ಷಾಂತರ ಅರ್ಜಿ!

ಹರಿಯಾಣದಲ್ಲಿ ಇತ್ತೀಚೆಗೆ ಕಸ ಗುಡಿಸುವವರ ಕೆಲಸಕ್ಕೆ ಸರ್ಕಾರ ಜಾಹೀರಾತು ನೀಡಿದ್ದು, 40,000 ಪದವೀಧರರು, 6,000 ಸ್ನಾತಕೋತ್ತರ ಪದವೀಧರರು ಸೇರಿದಂತೆ 1.7 ಲಕ್ಷ ಮಂದಿ ಅರ್ಜಿ ಸಲ್ಲಿಸಿರುವುದಾಗಿ ಮಾಧ್ಯಮ ವರದಿಗಳು ತಿಳಿಸಿವೆ. ಇದರಲ್ಲಿನ ವಿಶೇಷವೆಂದರೆ, ₹ 15,000 ಸಂಬಳದ ಈ ಉದ್ಯೋಗ ಬರೀ ಅರ್ಧ ದಿನ ಇರುತ್ತದೆ, ನಂತರ ಬೇರೆ ಉದ್ಯೋಗ ಮಾಡಬಹುದಂತೆ. ಹೀಗೆ ಇಷ್ಟೊಂದು ಸಂಖ್ಯೆಯಲ್ಲಿ ಅರ್ಜಿ ಗುಜರಾಯಿಸಿರುವುದರ ಬಗ್ಗೆ ಕೆಲವರ ವಿಶ್ಲೇಷಣೆ ಏನೇ ಇರಬಹುದು. ಸ್ನಾತಕೋತ್ತರ ಪದವೀಧರರೂ ಈ ಉದ್ಯೋಗಕ್ಕೆ ಕೈ ಚಾಚಿದ್ದಾರೆ ಎನ್ನುವುದು ನಿರುದ್ಯೋಗ ಸಮಸ್ಯೆ ಯಾವ ಮಟ್ಟಕ್ಕೆ ಬಿಗಡಾಯಿಸಿದೆ ಎನ್ನುವುದರ ಸೂಚಕವಲ್ಲವೇ?

ರಮಾನಂದ ಶರ್ಮಾ, ಬೆಂಗಳೂರು

ನಿಗ್ರಹಕ್ಕೆ ಕ್ರಮ ಕೈಗೊಳ್ಳಬೇಕು

ಬೆಂಗಳೂರು ಆಸುಪಾಸಿನ ರಾಮನಗರ, ಕೋಲಾರದ ಹಲವೆಡೆ ಕೊಳಚೆ ನೀರು ಅಂದರೆ ಚರಂಡಿ ನೀರು ಬಳಸಿ ಸೊಪ್ಪು–ತರಕಾರಿ ಬೆಳೆಯುವುದನ್ನು ಇತ್ತೀಚೆಗೆ ಟಿ.ವಿ. ಚಾನೆಲ್‌ವೊಂದರಲ್ಲಿ ನೋಡಿ ಗಾಬರಿಗೆ ಒಳಗಾದೆ. ಬೆಂಗಳೂರಿನ ನಿವಾಸಿಗಳಾದ ನಾವು ದಿನನಿತ್ಯ ಇಂತಹ ಸೊಪ್ಪು–ತರಕಾರಿಯನ್ನು ತಿನ್ನುತ್ತಿದ್ದೇವೆಯೇ ಎಂದು ಚಕಿತನಾದೆ. ಇಂತಹ ಸೊಪ್ಪು– ತರಕಾರಿ ತಿನ್ನುವುದರಿಂದ ಆಗುವ ಪರಿಣಾಮಗಳ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ನಿಗ್ರಹಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳಬೇಕು.

ಆರ್.ಎಸ್.ಎಂ. ರಾವ್, ಬೆಂಗಳೂರು

ಹಿನ್ನಡೆಗೆ ಕಾರಣ... ಇಗೋ ಇಲ್ಲಿದೆ

ಕಾಂಗ್ರೆಸ್ ನಾಯಕರು ಪಕ್ಷದ ಸಂಘಟನೆ ಮತ್ತು ಸಂಘಟಿತ ಹೋರಾಟದ ಮಾರ್ಗವನ್ನು ಮರೆತು ಎಷ್ಟೋ ವರ್ಷಗಳಾಗಿವೆ. ಚುನಾವಣೆಗಳಲ್ಲಿ ಪಕ್ಷಕ್ಕೆ ಹಿನ್ನಡೆ ಆಗುತ್ತಿರುವುದಕ್ಕೆ ಇದೂ ಒಂದು ಪ್ರಮುಖ ಕಾರಣ. ಅವರಲ್ಲಿನ ಕೆಲವು ನಾಯಕರು ತಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳಲು ಹೆಣಗುತ್ತಿದ್ದಾರೆ. ಸಿಬಿಐ, ಇ.ಡಿ. ಮತ್ತು ಐ.ಟಿ. ಕುಣಿಕೆಯಿಂದ ಪಾರಾಗುವುದು ಹೇಗೆ ಎಂಬುದರತ್ತಲೇ ಅವರ ಗಮನ ಕೇಂದ್ರೀಕೃತವಾಗಿದೆ.

ಗೋಪಾಲ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯಲ್ಲೇನಿದೆ?

'ಒಂದು ರಾಷ್ಟ್ರ, ಒಂದು ಚುನಾವಣೆ' ಎನ್ನುವುದು ಬಿಜೆಪಿಯ ಪ್ರಮುಖ ಕಾರ್ಯಸೂಚಿ. ನರೇಂದ್ರ ಮೋದಿ ಅವರು 2014ರಲ್ಲಿ ಮೊದಲ ಬಾರಿಗೆ ಪ್ರಧಾನಿ ಆದಾಗಿನಿಂದಲೂ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆಸುವುದನ್ನು ಪ್ರತಿಪಾದಿಸುತ್ತಲೇ ಬಂದಿದ್ದರು. ಕೊನೆಗೂ, ಈ ಸಂಬಂಧದ ಮಸೂದೆ ಲೋಕಸಭೆಯಲ್ಲಿ ಮಂಡನೆಯಾಗಿದೆ. ಈ ಮಸೂದೆಯ ಮೂಲಕ ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಮುಂದಡಿ ಇಟ್ಟಿದೆ. ಲೋಕಸಭೆಯಲ್ಲಿ ಮಂಡಿಸಲಾಗಿರುವ ಮಸೂದೆಯಲ್ಲಿರುವ ಅಂಶಗಳನ್ನು ಇಲ್ಲಿ ನೀಡಲಾಗಿದೆ

ದೇಶದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕಾಗಿ ಕೇಂದ್ರ ಸರ್ಕಾರವು ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವ, 'ಸಂವಿಧಾನ (129ನೇ ತಿದ್ದುಪಡಿ) ಮಸೂದೆ–2024' ಅನ್ನು ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದೆ.

ಮಸೂದೆಯು ಸಂವಿಧಾನದ 82ನೇ ವಿಧಿಯ ನಂತರ '82ಎ' ಎಂಬ ಹೊಸ ವಿಧಿಯನ್ನು ಸೇರ್ಪಡೆಗೊಳಿಸುವ ಬಗ್ಗೆ ಪ್ರಸ್ತಾಪಿಸುತ್ತದೆ. ಇದರ ಜೊತೆಗೆ, ಸಂವಿಧಾನದ 83ನೇ ವಿಧಿಯ ಪರಿಚ್ಛೇದ (2)ರ ನಂತರ ಹೊಸದಾಗಿ ಐದು ಪರಿಚ್ಛೇದಗಳನ್ನು (ಪರಿಚ್ಛೇದ (3), (4), (5) (6) ಮತ್ತು (7)) ಸೇರಿಸಲು ಮತ್ತು 172ನೇ ವಿಧಿಯ ಪರಿಚ್ಛೇದ (1)ರ ನಂತರ ಉಪ ಪರಿಚ್ಛೇದ (1ಎ), ಪರಿಚ್ಛೇದ (2)ರ ನಂತರ ಹೊಸದಾಗಿ ಮೂರು ಪರಿಚ್ಛೇದಗಳನ್ನು ((ಪರಿಚ್ಛೇದ (3), (4) ಮತ್ತು (5)) ಸೇರ್ಪಡೆಗೊಳಿಸಲು ಮತ್ತು 327ನೇ ವಿಧಿಗೆ ಸಣ್ಣ ತಿದ್ದುಪಡಿ ('ಕ್ಷೇತ್ರಗಳ ಪುನರ್ ವಿಂಗಡಣೆ' ಎಂಬ ಪದಗಳ ನಂತರ 'ಏಕಕಾಲಕ್ಕೆ ಚುನಾವಣೆ ನಡೆಸುವುದು' ಎಂಬ ಪದಗಳನ್ನು ಸೇರಿಸಲು) ತರುವ ಬಗ್ಗೆ ಪ್ರಸ್ತಾಪಿಸುತ್ತದೆ.

'82ಎ' ಏನು ಹೇಳುತ್ತದೆ?

ಈ ವಿಧಿಯು ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಬಗ್ಗೆ ವಿವರಿಸುತ್ತದೆ. ಇದು ಏಳು ಪರಿಚ್ಛೇದಗಳನ್ನು ಒಳಗೊಂಡಿದೆ.

ಮಸೂದೆ ಸಂಸತ್ತಿನಲ್ಲಿ ಅಂಗೀಕಾರಗೊಂಡು, ರಾಷ್ಟ್ರಪತಿ ಅವರ ಸಹಿ ಬಿದ್ದ ನಂತರ ಸಂವಿಧಾನದ 82ನೇ ವಿಧಿಯ ನಂತರ ಹೊಸ '82ಎ' ವಿಧಿ ಸೇರ್ಪಡೆಗೊಳ್ಳಲಿದೆ.

ವಿಧಿ 82ಎ: ಲೋಕಸಭೆ ಮತ್ತು ಎಲ್ಲಾ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ

ಪರಿಚ್ಛೇದ (1): ಸಾರ್ವತ್ರಿಕ ಚುನಾವಣೆಯ ನಂತರ ಲೋಕಸಭೆಯ ಮೊದಲ ಅಧಿವೇಶನದ ಆರಂಭದ ದಿನ ರಾಷ್ಟ್ರಪತಿ ಅವರು ಸಾರ್ವಜನಿಕ ಅಧಿಸೂಚನೆ ಹೊರಡಿಸುತ್ತಾರೆ. ಅಂದಿನಿಂದ ಈ ವಿಧಿಯ ನಿಯಮಗಳು ಜಾರಿಗೆ ಬರುತ್ತವೆ. ಅಧಿಸೂಚನೆ ಹೊರಡಿಸಿದ ದಿನವನ್ನು ಅನುಷ್ಠಾನ ದಿನ ಎಂದು ಕರೆಯಬೇಕು.

ಪರಿಚ್ಛೇದ (2): ಅನುಷ್ಠಾನ ದಿನದ ನಂತರ ಮತ್ತು ಲೋಕಸಭೆಯ ಅವಧಿ ಪೂರ್ಣಗೊಳ್ಳುವುದಕ್ಕೂ ಮೊದಲು ನಡೆದ ಚುನಾವಣೆಯ ಮೂಲಕ ಅಸ್ತಿತ್ವಕ್ಕೆ ಬಂದ ಎಲ್ಲಾ ವಿಧಾನಸಭೆಗಳ ಅವಧಿಯು ಲೋಕಸಭೆ ಅವಧಿ ಪೂರ್ಣಗೊಳ್ಳುವಾಗ ಕೊನೆಯಾಗಲಿದೆ.

ಪರಿಚ್ಛೇದ (3): ಲೋಕಸಭೆಯ ಅವಧಿ ಮುಕ್ತಾಯಗೊಳ್ಳುವುದಕ್ಕೂ ಮೊದಲು ಭಾರತೀಯ ಚುನಾವಣಾ ಆಯೋಗವು ಲೋಕಸಭೆ ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಬೇಕು. ಚುನಾವಣೆಗೆ ಸಂಬಂಧಿಸಿದ ಸಂವಿಧಾನದ 15ನೇ (XV) ಅಧ್ಯಾಯವನ್ನು ಈ ಚುನಾವಣೆಗೆ ಅನ್ವಯಿಸಬೇಕು. ಏನಾದರೂ ಬದಲಾವಣೆಗಳು ಅಗತ್ಯವಿದ್ದರೆ ಆಯೋಗವು ನಿರ್ದಿಷ್ಟ ಆದೇಶವನ್ನು ಹೊರಡಿಸಬೇಕು.

ಸಂವಿಧಾನದ 83ನೇ ವಿಧಿಯು ಸಂಸತ್ತಿನ ಸದನಗಳ ಅವಧಿಯ ಬಗ್ಗೆ ಹೇಳಿದರೆ, 172ನೇ ವಿಧಿಯು ರಾಜ್ಯ ವಿಧಾನಸಭೆಗಳ ಅವಧಿಯ ಕುರಿತಾಗಿ ವಿವರಿಸುತ್ತದೆ. 327ನೇ ವಿಧಿಯು ಶಾಸಕಾಂಗಗಳಿಗೆ ಚುನಾವಣೆ ನಡೆಸುವ ಸಂಬಂಧ ಸಂಸತ್ತಿಗೆ ಇರುವ ಅಧಿಕಾರದ ಬಗ್ಗೆ ಪ್ರಸ್ತಾಪಿಸುತ್ತದೆ.



ಮಸೂದೆಯ ಉದ್ದೇಶ ಮತ್ತು ಕಾರಣಗಳು

1. ಭಾರತದಲ್ಲಿ 1951–52, 1957, 1962, ಮತ್ತು 1967ರಲ್ಲಿ ಲೋಕಸಭೆಯ ಸಾರ್ವತ್ರಿಕ ಚುನಾವಣೆಗಳು ಮತ್ತು ಎಲ್ಲ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಒಟ್ಟಿಗೇ ನಡೆದಿದ್ದವು. 1968 ಮತ್ತು 1969ರಲ್ಲಿ ಕೆಲವು ವಿಧಾನಸಭೆಗಳು ಅವಧಿಪೂರ್ವದಲ್ಲಿಯೇ ವಿಸರ್ಜನೆಗೊಂಡ ಕಾರಣದಿಂದ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆಸುವ ಸಂಪ್ರದಾಯಕ್ಕೆ ತಡೆ ಬಿತ್ತು.
   ಭಾರತದ ಕಾನೂನು ಆಯೋಗವು 'ಚುನಾವಣಾ ಕಾನೂನುಗಳ ಸುಧಾರಣೆ'ಗೆ ಸಂಬಂಧಿಸಿದ ತನ್ನ 170ನೇ ವರದಿಯಲ್ಲಿ ರಾಜ್ಯ ವಿಧಾನಸಭೆಗಳಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವುದು ಒಂದು ಅಪವಾದವಾಗಿರಬೇಕೇ ವಿನಾ ಅದೇ ನಿಯಮ ಆಗಬಾರದು ಎಂದಿತ್ತು. ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಕಾನೂನು ಹಾಗೂ ನ್ಯಾಯ ಇಲಾಖೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು ತನ್ನ 79ನೇ ವರದಿಯಲ್ಲಿ ಆಗಾಗ್ಗೆ ಚುನಾವಣೆಗಳು ನಡೆಯುವುದನ್ನು ತಪ್ಪಿಸುವುದಕ್ಕಾಗಿ ಒಟ್ಟಿಗೆ ಚುನಾವಣೆ ನಡೆಸುವ ಅಗತ್ಯವಿದೆ ಎಂದಿತ್ತು. ಈ ದಿಸೆಯಲ್ಲಿ ಕೇಂದ್ರವು ಹಲವು ಕ್ರಮಗಳನ್ನು ಕೈಗೊಂಡಿತ್ತು.
2. ಚುನಾವಣೆಗಳನ್ನು ನಡೆಸುವುದು ದುಬಾರಿಯಾಗಿದ್ದು, ಬಹಳ ಸಮಯವನ್ನೂ ಬೇಡುತ್ತದೆ. ಚುನಾವಣೆ ನಡೆಯುವ ಪ್ರದೇಶಗಳಲ್ಲಿ ನೀತಿಸಂಹಿತೆ ಜಾರಿಗೊಳಿಸುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟಾಗುತ್ತಿದೆ. ಜನಜೀವನಕ್ಕೆ ಅಡ್ಡಿಯುಂಟಾಗುವುದಲ್ಲದೇ, ಅವರನ್ನು ಜೀವನದ ಮುಖ್ಯ ಚಟುವಟಿಕೆಗಳಿಂದ ವಿಮುಖರನ್ನಾಗುವಂತೆ ಮಾಡುತ್ತದೆ.
3. ಒಟ್ಟಿಗೆ ಚುನಾವಣೆ ನಡೆಸುವ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಯನ್ನು 2023ರ ಸೆಪ್ಟೆಂಬರ್ 2ರಂದು ನೇಮಿಸಲಾಗಿತ್ತು. ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿ, ತಜ್ಞರೊಂದಿಗೆ ಸಮಾಲೋಚಿಸಿ ತಯಾರಿಸಿದ ವರದಿಯನ್ನು ಸಮಿತಿಯು 2024ರ ಮಾರ್ಚ್ 14ರಂದು ಸಲ್ಲಿಸಿತು. ಕೋವಿಂದ್ ನೇತೃತ್ವದ ಉನ್ನತ ಸಮಿತಿಯು ತನ್ನ ವರದಿಯಲ್ಲಿ ಮೊದಲ ಹಂತವಾಗಿ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆಸುವಂತೆ ಶಿಫಾರಸು ಮಾಡಿದೆ. ಆ ಶಿಫಾರಸು ಜಾರಿಗಾಗಿ 'ಸಂವಿಧಾನ (129ನೇ ತಿದ್ದುಪಡಿ) ಮಸೂದೆ–2024' ಮಂಡಿಸಬೇಕು ಎಂದು ಪ್ರತಿಪಾದಿಸಿತ್ತು.

ಪರಿಚ್ಛೇದ (4): ವಿಧಿಯಲ್ಲಿ ಬರುವ 'ಏಕಕಾಲಕ್ಕೆ ಚುನಾವಣೆ' ಎಂದರೆ ಲೋಕಸಭೆ ಮತ್ತು ಎಲ್ಲಾ ವಿಧಾನಸಭೆಗಳ ರಚನೆಗಾಗಿ ನಡೆಯುವ ಸಾರ್ವತ್ರಿಕ ಚುನಾವಣೆ ಎಂದರ್ಥ.

ಪರಿಚ್ಛೇದ (5): ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಯಾವುದೇ ನಿರ್ದಿಷ್ಟ ವಿಧಾನಸಭೆಗೆ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಭಾರತೀಯ ಚುನಾವಣಾ ಆಯೋಗ ಬಂದಿದ್ದೇ ಆದಲ್ಲಿ, ಬೇರೊಂದು ದಿನ ಆ ವಿಧಾನಸಭೆಗೆ ಚುನಾವಣೆ ನಡೆಸುವ ಸಂಬಂಧ ಆದೇಶವೊಂದನ್ನು ಹೊರಡಿಸುವಂತೆ ರಾಷ್ಟ್ರಪತಿ ಅವರಿಗೆ ಶಿಫಾರಸು ಮಾಡಬಹುದು.

ಪರಿಚ್ಛೇದ (6): ಪರಿಚ್ಛೇದ (5)ರ ಅಡಿಯಲ್ಲಿ ವಿಧಾನಸಭೆಯ ಚುನಾವಣೆ ಮುಂದೂಡಿಕೆಯಾಗಿ, ನಂತರ ಅಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ವಿಧಾನಸಭೆಯ ಅವಧಿಯು ಸಾರ್ವತ್ರಿಕ ಚುನಾವಣೆಯ ನಂತರ ರಚನೆಯಾದ ಲೋಕಸಭೆಯ ಅವಧಿ ಪೂರ್ಣಗೊಂಡ ದಿನದಂದೇ ಕೊನೆಗೊಳ್ಳುತ್ತದೆ.

ಪರಿಚ್ಛೇದ (7): ಈ ವಿಧಿಯ ಪ್ರಕಾರ, ಚುನಾವಣಾ ಆಯೋಗವು ವಿಧಾನಸಭೆಗೆ ಚುನಾವಣೆ ಅಧಿಸೂಚನೆ ಹೊರಡಿಸುವಾಗಲೇ ಅದರ ಅವಧಿ ಯಾವಾಗ ಮುಕ್ತಾಯವಾಗುತ್ತದೆ ಎಂಬುದನ್ನೂ ಘೋಷಿಸಬೇಕು.

83ನೇ ವಿಧಿಗೆ ತಿದ್ದುಪಡಿ

ವಿಧಿಯ 2ನೇ ಪರಿಚ್ಛೇದದ ನಂತರ ನಾಲ್ಕು ಹೊಸ ಪರಿಚ್ಛೇದಗಳ ಸೇರ್ಪಡೆ ಬಗ್ಗೆ ತಿದ್ದುಪಡಿ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಪರಿಚ್ಛೇದ (3): ಸಾರ್ವತ್ರಿಕ ಚುನಾವಣೆಯ ನಂತರ ಅಸ್ತಿತ್ವಕ್ಕೆ ಬಂದ ಲೋಕಸಭೆಯ ಮೊದಲ ಅಧಿವೇಶನದ ಮೊದಲ ದಿನದಿಂದ ಮುಂದಿನ ಐದು ವರ್ಷಗಳವರೆಗಿನ ಅವಧಿಯನ್ನು ಲೋಕಸಭೆಯ ಪೂರ್ಣ ಅವಧಿ ಎಂದು ಪರಿಗಣಿಸಬೇಕು.

ಪರಿಚ್ಛೇದ (4): ಪೂರ್ಣಾವಧಿಗೂ ಮೊದಲೇ ಲೋಕಸಭೆ ವಿಸರ್ಜನೆಯಾದರೆ, ವಿಸರ್ಜನೆಯಾದ ದಿನದಿಂದ ಲೋಕಸಭೆಯ ಕೊನೆಯ ದಿನದವರೆಗಿನ ಅವಧಿಯನ್ನು ಆ ಲೋಕಸಭೆಯ 'ಮುಗಿಯದ ಅವಧಿ' (ಅಥವಾ ಬಾಕಿ ಉಳಿದಿರುವ ಅವಧಿ) ಎಂದು ಕರೆಯಬೇಕು.

ಪರಿಚ್ಛೇದ (5): ಲೋಕಸಭೆಯನ್ನು ಅವಧಿಗೂ ಮುನ್ನ ವಿಸರ್ಜನೆ ಮಾಡಿದ ಸಂದರ್ಭದಲ್ಲಿ, ಚುನಾವಣೆಯ ಮೂಲಕ ಅಸ್ತಿತ್ವಕ್ಕೆ ಬರಲಿರುವ ಹೊಸ ಲೋಕಸಭೆಯು ಹಿಂದಿನ ಲೋಕಸಭೆಯ ಮುಗಿಯದ ಅವಧಿಗೆ ಕಾರ್ಯನಿರ್ವಹಿಸುತ್ತದೆ. ಈ ಅವಧಿ ಮುಕ್ತಾಯವಾದರೆ ಸದನವು ವಿಸರ್ಜನೆಯಾದಂತೆ.

ಪರಿಚ್ಛೇದ (6): ಪರಿಚ್ಛೇದ (5)ರ ಅಡಿ ರಚನೆಯಾದ ಲೋಕಸಭೆಯು ಹಿಂದಿನ ಲೋಕಸಭೆಯ ಮುಂದುವರಿಕೆಯಲ್ಲ. ಪರಿಚ್ಛೇದ (4) ರಲ್ಲಿ ವಿವರಿಸಲಾದ ಸದನ ವಿಸರ್ಜನೆಗೆ ಸಂಬಂಧಿಸಿದ ಎಲ್ಲ ಸಾಧಕ ಬಾಧಕಗಳು ಈ ಲೋಕಸಭೆಗೂ ಅನ್ವಯವಾಗುತ್ತವೆ.

ಪರಿಚ್ಛೇದ (7): ಬಾಕಿ ಉಳಿದಿರುವ ಅವಧಿಗಾಗಿ ಲೋಕಸಭೆ ರಚಿಸಲು ನಡೆಸಲಾಗುವ ಚುನಾವಣೆಯನ್ನು 'ಮಧ್ಯಂತರ ಚುನಾವಣೆ' ಎಂದು ಕರೆಯಬೇಕು. ಪೂರ್ಣಾವಧಿ ಕೊನೆಗೊಂಡ ನಂತರ ನಡೆಯುವ ಚುನಾವಣೆಯನ್ನು ಸಾರ್ವತ್ರಿಕ ಚುನಾವಣೆ ಎಂದು ಕರೆಯಬೇಕು.

172ನೇ ವಿಧಿಗೆ ತಿದ್ದುಪಡಿ

ವಿಧಿಯ (1)ನೇ ಪರಿಚ್ಛೇದದ ನಂತರ ಉಪ ಪರಿಚ್ಛೇದ (1ಎ) ಸೇರ್ಪಡೆ ಬಗ್ಗೆ ಮಸೂದೆ ಪ್ರಸ್ತಾಪಿಸುತ್ತದೆ.

ಪರಿಚ್ಛೇದ (1ಎ): ರಾಜ್ಯ ವಿಧಾನಸಭೆಯ ಮೊದಲ ಅಧಿವೇಶನದ ಮೊದಲ ದಿನದಿಂದ ಮುಂದಿನ ಐದು ವರ್ಷಗಳನ್ನು ರಾಜ್ಯ ವಿಧಾನಸಭೆಯ ಪೂರ್ಣಾವಧಿ ಎಂದು ಕರೆಯಲಾಗುತ್ತದೆ.

(2)ನೇ ಪರಿಚ್ಛೇದದ ನಂತರ ಮೂರು ಹೊಸ ಪರಿಚ್ಛೇದಗಳ ಸೇರ್ಪಡೆಯ ಬಗ್ಗೆಯೂ ಮಸೂದೆ ಪ್ರಸ್ತಾಪಿಸುತ್ತದೆ.

ಪರಿಚ್ಛೇದ (3): ಪೂರ್ಣಾವಧಿಗೂ ಮುನ್ನ ರಾಜ್ಯ ವಿಧಾನಸಭೆ ವಿಸರ್ಜನೆಯಾದರೆ, ವಿಸರ್ಜನೆಯಾದ ದಿನದಿಂದ ಆ ವಿಧಾನಸಭೆಯ ಕೊನೆಯ ದಿನದವರೆಗಿನ ಅವಧಿಯನ್ನು 'ಮುಗಿಯದ ಅವಧಿ' ಎಂದು ಕರೆಯಬೇಕು.

ಪರಿಚ್ಛೇದ (4): ವಿಧಾನಸಭೆಯನ್ನು ಅವಧಿಗೂ ಮುನ್ನ ವಿಸರ್ಜನೆ ಮಾಡಿದ ಸಂದರ್ಭದಲ್ಲಿ, ಚುನಾವಣೆಯ ಮೂಲಕ ಅಸ್ತಿತ್ವಕ್ಕೆ ಬರಲಿರುವ ಹೊಸ ವಿಧಾನಸಭೆಯು ಹಿಂದಿನ ವಿಧಾನಸಭೆಯ ಮುಗಿಯದ ಅವಧಿಗೆ ಕಾರ್ಯನಿರ್ವಹಿಸುತ್ತದೆ. ಈ ಅವಧಿ ಮುಕ್ತಾಯವಾದಾಗ ಹೊಸ ವಿಧಾನಸಭೆಯು ವಿಧಾನಸಭೆ ವಿಸರ್ಜನೆಯಾಯಿತು ಎಂದೇ ಪರಿಗಣಿಸಬೇಕು.

ಪರಿಚ್ಛೇದ (5): ಪರಿಚ್ಛೇದ (4)ರ ಅಡಿ ರಚನೆಯಾದ ರಾಜ್ಯ ವಿಧಾನಸಭೆಯು ಹಿಂದಿನ ರಾಜ್ಯ ವಿಧಾನಸಭೆಯ ಮುಂದುವರಿಕೆಯಲ್ಲ. ಪರಿಚ್ಛೇದ (3)ರಲ್ಲಿ ಉಲ್ಲೇಖಿಸಲಾಗಿರುವ ಸದನದ ವಿಸರ್ಜನೆಗೆ ಸಂಬಂಧಿಸಿದ ಎಲ್ಲ ವಿವರಗಳು ಈ ವಿಧಾನಸಭೆ ಅನ್ವಯವಾಗುತ್ತವೆ.

ಮತ್ತೊಂದು ಮಸೂದೆ

ಸಂವಿಧಾನ ತಿದ್ದುಪಡಿ ಮಸೂದೆಗೆ ಪೂರಕವಾಗಿ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆಗಳ (ತಿದ್ದುಪಡಿ) ಮಸೂದೆ– 2024 ಅನ್ನೂ ಕೇಂದ್ರ ಸರ್ಕಾರ ಮಂಡಿಸಿದೆ. ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಿಗೂ ಚುನಾವಣೆ ನಡೆಸಲು ಅನುವು ಮಾಡುವುದಕ್ಕಾಗಿ ಈ ಮಸೂದೆಯು 1963ರ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಕಾಯ್ದೆ, ದೆಹಲಿಯ ರಾಷ್ಟ್ರ ರಾಜಧಾನಿ ಪ್ರದೇಶದ ಸರ್ಕಾರ ಕಾಯ್ದೆ– 1991 ಮತ್ತು ಜಮ್ಮು ಮತ್ತು ಕಾಶ್ಮೀರ ಪುನರ್‌ರಚನೆ ಕಾಯ್ದೆ– 2019ಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾಪಿಸುತ್ತದೆ.

ಸಿನಿ ಬಿಟ್ಸ್

ಶಿವರಾಜ್‌ಕುಮಾರ್‌ಗೆ ಪವನ್ ಆ್ಯಕ್ಷನ್ ಕಟ್

ನಟ ಶಿವರಾಜ್‌ಕುಮಾರ್‌ಗೆ ಆ್ಯಕ್ಷನ್ ಕಟ್ ಹೇಳಲು 'ಗೂಗ್ಲಿ' ಖ್ಯಾತಿಯ ನಿರ್ದೇಶಕ ಪವನ್ ಒಡೆಯರ್ ಸಜ್ಜಾಗುತ್ತಿದ್ದಾರೆ.


ಆರೋಗ್ಯ ಸಮಸ್ಯೆಯ ಕಾರಣದಿಂದ ಸದ್ಯ ಚಿತ್ರೀಕರಣದಿಂದ ತಾತ್ಕಾಲಿಕ ಬಿಡುವು ಪಡೆದಿದ್ದಾರೆ ಶಿವರಾಜ್‌ಕುಮಾರ್. ಅಮೆರಿಕದಲ್ಲಿ ಚಿಕಿತ್ಸೆ ಪಡೆದು ವಾಪಸ್ ಬಂದ ಬಳಿಕ 'ಭೈರವನ ಕೊನೆ ಪಾಠ', '#131', 'ಎ ಫಾರ್ ಆನಂದ್', 'ಉತ್ತರಕಾಂಡ' ಹೀಗೆ ಸಾಲು ಸಾಲು ಚಿತ್ರಗಳ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಇದಕ್ಕೆ ಪವನ್ ಸಿನಿಮಾ ಇದೀಗ ಸೇರ್ಪಡೆಯಾಗಿದೆ.

ನಿರ್ದೇಶನದಲ್ಲಷ್ಟೇ ಅಲ್ಲದೆ ನಿರ್ಮಾಪಕರಾಗಿಯೂ ಪವನ್ ಹೆಸರು ಮಾಡಿದ್ದು, 'ಡೊಳ್ಳು' ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಪವನ್ ಒಡೆಯರ್ ತಮ್ಮ ಒಡೆಯರ್ ಮೂವೀಸ್ ಬ್ಯಾನರ್‌ನಡಿ ನಾಲ್ಕನೇ ಚಿತ್ರ ನಿರ್ಮಿಸುತ್ತಿದ್ದು, ಅದು ಶಿವರಾಜ್‌ಕುಮಾರ್ ಅವರಿಗೆ ಎನ್ನುವುದು ವಿಶೇಷ. 2025ಕ್ಕೆ ಈ ಸಿನಿಮಾ ಸೆಟ್ಟೇರಲಿದ್ದು, 'ಪ್ರತಿಯೊಬ್ಬ ನಿರ್ದೇಶಕನಿಗೂ ಶಿವಣ್ಣನಿಗೆ ಚಿತ್ರ ಮಾಡಬೇಕೆಂಬ ಕನಸು ಇರುತ್ತದೆ. ನನ್ನ ಈ ಕನಸು ಈಗ ನನಸಾಗುತ್ತದೆ. ಥ್ರಿಲ್ಲರ್ ಜೊತೆಗೆ ಔಟ್ ಆ್ಯಂಡ್ ಔಟ್ ಕಮರ್ಷಿಯಲ್ ಎಂಟರ್‌ಟೈನರ್ ಚಿತ್ರ ಇದಾಗಿದೆ. ಈ ಹಿಂದಿನ ಸಿನಿಮಾಗಳಿಗಿಂತ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ವಿಭಿನ್ನವಾದ ಪಾತ್ರದ ಮೂಲಕ ಪ್ರೇಕ್ಷಕರೆದುರಿಗೆ ಬರಲಿದ್ದಾರೆ' ಎಂದರು ಪವನ್.


ಶಿವರಾಜ್‌ಕುಮಾರ್

'ಫಾದರ್' ಮೋಷನ್ ಪೋಸ್ಟರ್ ರಿಲೀಸ್

'ಆರ್.ಸಿ. ಸ್ಟುಡಿಯೊಸ್'ನಡಿ ನಿರ್ದೇಶಕ ಆರ್. ಚಂದ್ರು ನಿರ್ಮಾಣ ಮಾಡುತ್ತಿರುವ, ರಾಜ್‌ಮೋಹನ್ ನಿರ್ದೇಶನದ 'ಫಾದರ್' ಸಿನಿಮಾದ ಮೋಷನ್ ಪೋಸ್ಟರ್ ಅನ್ನು ನಟ ಸುದೀಪ್ ಈಚೆಗೆ ಬಿಡುಗಡೆ ಮಾಡಿದರು.


ಡಾರ್ಲಿಂಗ್ ಕೃಷ್ಣ, ಪ್ರಕಾಶ್ ರಾಜ್

ಈ ಸಂದರ್ಭದಲ್ಲಿ ಮಾತನಾಡಿ, 'ಚಂದ್ರು ಅವರು ಐದು ಸಿನಿಮಾ ಘೋಷಣೆ ಮಾಡಿದಾಗ ಹಲವರು ಆರ್.ಚಂದ್ರು ಅಲ್ಲ ಐದ್ ಚಂದ್ರು ಎಂದರು. ಅದು ಒಳ್ಳೆಯದೇ. ಕಾಲೆಳೆಯುವವರು ಇದ್ದಾಗಲೇ ನಾವು ಬೆಳೆಯುವುದು. 'ಕಬ್ಜ' ಬಗ್ಗೆ ಹಲವು ಮಾತುಗಳು ಬಂದಿರಬಹುದು. ಕಮೆಂಟ್ ಮಾಡುವ ಬದಲು ಪ್ರೋತ್ಸಾಹಿಸುವುದರಲ್ಲಿ ಖುಷಿ ಇರುತ್ತದೆ. ಆರ್.ಚಂದ್ರು ಅವರು ಕನ್ನಡಕ್ಕೆ ಸಿನಿಮಾ ಮಾಡುತ್ತಿದ್ದಾರೆ ಎನ್ನುವುದೇ ಖುಷಿ' ಎಂದರು ಸುದೀಪ್.

ನಿರ್ಮಾಪಕ ಆರ್. ಚಂದ್ರು ಮಾತನಾಡಿ, 'ಆರ್.ಸಿ. ಸ್ಟುಡಿಯೋಸ್ ಸಂಸ್ಥೆಯ ಮೊದಲ ಚಿತ್ರ 'ಫಾದರ್'. ಎರಡು ಹಾಡುಗಳ ಚಿತ್ರೀಕರಣ ಬಾಕಿ ಇದೆ. 'ಫಾದರ್' ಚಿತ್ರ ಪ್ಯಾನ್ ಇಂಡಿಯಾ ಸಿನಿಮಾವಾಗಿ ಬಿಡುಗಡೆಯಾಗಲಿದೆ' ಎಂದರು. ತಂದೆ-ಮಗನ ಬಾಂಧವ್ಯ ಸಾರುವ 'ಫಾದರ್' ಸಿನಿಮಾದಲ್ಲಿ 'ಲವ್ ಮಾಕ್ಟೇಲ್' ಖ್ಯಾತಿಯ ಡಾರ್ಲಿಂಗ್ ಕೃಷ್ಣ ಹಾಗೂ ಬಹುಭಾಷಾ ನಟ ಪ್ರಕಾಶ್ ರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ಕೃಷ್ಣನಿಗೆ ಅಮೃತಾ ಅಯ್ಯಂಗಾರ್ ಜೋಡಿಯಾಗಿದ್ದಾರೆ. ನಾಗಭೂಷಣ್ ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತ ಮತ್ತು ಕೆನಡಾದ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಉಂಟಾಗಿರುವುದರ ನಡುವೆಯೇ, ಸಾಮಾಜಿಕ ಜಾಲತಾಣಗಳ ಕೆಲವು ಬಳಕೆದಾರರು, ಕೆನಡಾವು ಭಾರತವನ್ನು 'ಭಯೋತ್ಪಾದನೆಗೆ ಪ್ರೋತ್ಸಾಹ ನೀಡುವ ರಾಷ್ಟ್ರ' ಎಂದು ಘೋಷಿಸಿದೆ ಎಂದು ಪೋಸ್ಟ್ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು. ಕೆನಡಾ ಅಂತಹ ನಿರ್ಧಾರ ಕೈಗೊಂಡಿಲ್ಲ.



ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ, ಈ ವಾದವನ್ನು ದೃಢಪಡಿಸುವಂತಹ ಯಾವುದೇ ಅಧಿಕೃತ ಮಾಹಿತಿ ಸಿಗಲಿಲ್ಲ. ಒಂದು ವೇಳೆ ಅಂತಹ ನಿರ್ಧಾರ ಕೈಗೊಂಡಿದ್ದೇ ಆದರೆ, ಎರಡೂ ರಾಷ್ಟ್ರಗಳಲ್ಲಿ ಇದು ದೊಡ್ಡ ಸುದ್ದಿಯಾಗುತ್ತಿತ್ತು. ಕೆನಡಾ ಸರ್ಕಾರದ ಅಧಿಕೃತ ವೆಬ್‌ಸೈಟ್ ಆದ ಪಬ್ಲಿಕ್ ಸೇಫ್ಟಿ ಕೆನಡಾಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ, ಅದರಲ್ಲಿ ಭಯೋತ್ಪಾದಕ ಸಂಘಟನೆಗಳ ಹೆಸರು ಇದ್ದವಾದರೂ ಪಟ್ಟಿಯಲ್ಲಿ ಭಾರತದ ಉಲ್ಲೇಖ ಇರಲಿಲ್ಲ. ಕೆನಡಾ ಪ್ರಧಾನಿ ಮತ್ತು ವಿದೇಶಾಂಗ ಸಚಿವಾಲಯದ ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಪರಿಶೀಲಿಸಿದಾಗಲೂ ಈ ಬಗ್ಗೆ ಯಾವುದೇ ಮಾಹಿತಿ ಸಿಗಲಿಲ್ಲ. ಆದರೆ, ಕೆನಡಾವು ಭಾರತವನ್ನು ಸೈಬರ್ ಬೆದರಿಕೆ ಇರುವ ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿಸಿರುವ ಬಗ್ಗೆ ಮಾಧ್ಯಮಗಳಲ್ಲಿ ನವೆಂಬರ್ ಮೊದಲ ವಾರದಲ್ಲಿ ವರದಿಯಾಗಿತ್ತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮಾದರಿಯಾಗಲಿ ಶರಣೆ ಸತ್ಯಕ್ಕ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 90

ನೀವು ಎಷ್ಟೇ ದೊಡ್ಡವರಿದ್ದರೂ ಏನಾದರೂ ಕೇಳಿದಿರಿ ಅಂದರೆ ಚಿಕ್ಕವರಾಗುತ್ತೀರಿ. ಕೇಳಾವ ಚಿಕ್ಕವ, ಕೊಡಾವ ದೊಡ್ಡವ. ಯಾವಾಗಲೂ ಕೊಡುವ ಕೈ ಮೇಲೆ. ಕೇಳುವ ಕೈ ಕೆಳಗೆ ಇದು ತಿಳಿದಿರಬೇಕು.

ನಿಜಗುಣ ಶಿವಯೋಗಿಗಳು ಎರಡು ಸೂತ್ರ ಕೊಟ್ಟರು. ದೇವರ ಮುಂದೆ ನಿಜಗುಣ ಶಿವಯೋಗಿಗಳ ಪ್ರಾರ್ಥನೆ ಏನು ಅಂದರ, 'ದೇವನೆ ನನ್ನ ಪ್ರಾಣ ಹೋಗಲಿ, ಆದರೆ ಇನ್ನೊಬ್ಬರ ಮನೆಯ ಮುಂದೆ ಕೈಯೊಡ್ಡುವ ಪ್ರಸಂಗ ತರಬೇಡ. ದುಡಿದು ಬದುಕುವ ಹಾಗೆ ಮಾಡು' ಅಂತಾರೆ. ಇದು ಮೊದಲ ಸೂತ್ರ. 'ದೇವರೇ ನೀನು ನನಗೆ ಏನಾದರೂ ಕೊಡು. ಎಷ್ಟಾದರೂ ಕೊಡು. ಆದರೆ ಅದೆಲ್ಲವನ್ನೂ ನನ್ನವರೊಂದಿಗೆ ಹಂಚಿಕೊಂಡು ತಿನ್ನುವ ಮನಸ್ಸು ಕೊಡು. ಅದರಲ್ಲಿ ನನಗೆ ಸಂತೋಷ ಕೊಡು'. ಇದು ಎರಡನೇ ಸೂತ್ರ. 'ಅಸುವಳಿಯಲು ದೇಹಿಯೆನಲೊಲ್ಲ-ದಧಟನು' ಎನ್ನುತ್ತಾರೆ ಅವರು.

ಒಬ್ಬ ಒಂದು ಮನೆಗೆ ಭಿಕ್ಷಾ ಕೇಳಲು ಹೊಂಟಿದ್ದ. ಆಗ ನಾಯಿ ಬೊಗಳಿತು. ಪಕ್ಕದಲ್ಲಿಯೇ ಇದ್ದ ಗಿಡವೊಂದು ನಾಯಿಗೆ, 'ಆ ಭಿಕ್ಷುಕನ ನೋಡಿ ನೀನು ಯಾಕೆ ಬೊಗಳ್ತಾ ಇದ್ದಿ' ಎಂದು ಕೇಳಿತು. ಅದಕ್ಕೆ ನಾಯಿ, 'ಅವ ಭಿಕ್ಷಾ ಕೇಳಾಕೆ ಹೊಂಟಾನಲ್ಲ, ಆ ಮನಿಯವನೂ ಭಿಕ್ಷುಕನೇ ಇದ್ದಾನೆ. ನೀನು ಭಿಕ್ಷುಕನ ಮನೆಗೇ ಹೋಗಿ ಭಿಕ್ಷೆ ಕೇಳಬೇಡ. ನೀನು ಕೇಳಬೇಕು ಅಂತಿದ್ದರೆ ಮಹಾದಾನಿ ಕೂಡಲ ಸಂಗಮನಿಗೆ ಕೇಳು. ಅವನು ಮಹಾದಾನಿ. ಅದಕ್ಕೆ ಬೊಗಳ್ತಾ ಇದ್ದೀನಿ' ಅಂತು. 'ಒಡೆಯಂಗೊಡಲು ತೋರಿ ಎನ್ನ ಬಡತನವ ಭಿನ್ನೈಸುವೆ ಮಹಾದಾನಿ ಕೂಡಲ ಸಂಗಮ ದೇವ' ಅಂತಾರೆ ಶರಣರು. ನೀನು ಯಾವುದೇ ಮನುಷ್ಯನಿಗೆ ಏನಾದರೂ ಕೇಳಿದರೆ ಅವರು ಕೊಡದೇ ಇರಬಹುದು. ಕೊಟ್ಟರೂ ಏನಾದರೂ ಷರತ್ತು ವಿಧಿಸಬಹುದು ಅಥವಾ ನಿನ್ನ ಹಂಗಿಸಬಹುದು. ಆದರೆ, ನೀನು ದೇವರನ್ನು ಕೇಳಿದರೆ ದೇವರು ನಿನಗೆ ಈ ಜಗತ್ತು ಎನ್ನುವ ಬ್ಲ್ಯಾಂಕ್ ಚೆಕ್ ಕೊಟ್ಟಿದ್ದಾನೆ. ಏನಾದರೂ ಬರಕೋ, ಎಷ್ಟಾದರೂ ಬರಕೋ ಅಂತ. ಅದನ್ನು ಉಪಯೋಗಿಸು.

12 ನೇ ಶತಮಾನದಲ್ಲಿ ಸತ್ಯಕ್ಕ ಅಂತ ಒಬ್ಬಳು ಶರಣೆ ಇದ್ದಳು. ಕಲ್ಯಾಣದಲ್ಲಿ ಕಸ ಗುಡಿಸುವುದು ಅವಳ ಕೆಲಸ. ಆಕೆ ಬರೀತಾಳೆ, 'ಲಂಚವಂಚನಕ್ಕೆ ಕೈಯಾನದಭಾಷೆ. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ನಾನು ಕೈ ಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ, ನೀನಾಗಲೆ ಎನ್ನ ನರಕದಲ್ಲಿ ಅದ್ದಿ ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ' ಎಂದು. ಶಾಲೆಗೆ ಹೋಗದ ಸತ್ಯಕ್ಕ ಹೀಗಿದ್ದಳು. ನಾವು ಹ್ಯಾಂಗದೀವಿ? ಒಬ್ಬ ಅಂದ 'ನಮ್ಮೂರಾಗ ಎಂತೆಂತಹ ಜನ ಇದ್ದಾರೆ ಮಾರಾಯ, ಸೂಜಿ ನುಂಗುತ್ತಾರೆ' ಎಂದ. ಅದಕ್ಕೆ ಇನ್ನೊಬ್ಬ, 'ನಿಮ್ಮೂರಾಗ ಸೂಜಿ ನುಂಗೋರು ಇದ್ದರೆ ನಮ್ಮೂರಾಗ ದಬ್ಬಣ ನುಂಗೋರು ಇದಾರೆ' ಎಂದ. ಇದನ್ನು ಕೇಳಿದ ಇನ್ನೊಬ್ಬ 'ಅದೆಲ್ಲ ಏನು ನಮ್ಮೂರಲ್ಲಿ ಚೇಳು, ಹಾವು ನುಂಗೋರು ಇದಾರೆ' ಎಂದು ಹೆಮ್ಮೆ ಪಟ್ಟ. ಅದಕ್ಕೆ ಮತ್ತೊಬ್ಬ 'ನೀವೆಲ್ಲ ಸಣ್ಣ ಸಣ್ಣ ವಿಚಾರ ಹೇಳ್ತೀರಿ. ನಮ್ಮೂರಲ್ಲಿ ಶಾಲೆ ನುಂಗೋರು, ರಸ್ತೆ ನುಂಗೋರು, ಹೊಲ ನುಂಗೋರು ಎಲ್ಲಾ ಇದಾರೆ' ಎಂದ. ಇದಲ್ಲ ಬದುಕು. ಶರಣೆ ಸತ್ಯಕ್ಕ ಮಾದರಿಯಾಗಬೇಕು ನಮಗೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಡಿಸೆಂಬರ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ತೃತೀಯ ಗಂ. 10-07 ನಕ್ಷತ್ರ: ಪುಷ್ಯ ಗಂ. 24-59 ಯೋಗ: ಐಂದ್ರ ಗಂ. 19-34 ಕರಣ: ವಿಷ್ಟಿ ಗಂ. 10-07, ಧನು ಮಾಸದ 02 ನೇ ದಿನ, ಮಳೆನಕ್ಷತ್ರ: ಮೂಲ 1.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-51 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 15 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 8, 5

ಮೇಷ: ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರಗೊಳಿಸಲು ಕಾರಣವಾಗುವುದು. ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ಮುಂದುವರಿಯಲಿದೆ. ಹಿಡಿದ ಕೆಲಸ ಪೂರ್ಣಗೊಳಿಸುವ ಬಗ್ಗೆ ಪ್ರಯತ್ನವಿರಲಿ.

ವೃಷಭ: ಮಕ್ಕಳ ನಡವಳಿಕೆಯಿಂದ ಬೇಸರವಾಗುವುದು. ಕಚೇರಿಯಲ್ಲಿ ಸಹದ್ಯೋಗಿಗಳ ಸಹಕಾರ ಪಡೆಯುವುದು ಅಗತ್ಯವಾಗುವುದು. ದಾಖಲೆಗಳ ಹುಡುಕಾಟದಲ್ಲಿ ಸಮಯ ವ್ಯಯವಾಗುವುದು.

ಮಿಥುನ: ಜವಾಬ್ದಾರಿಯಲ್ಲಿ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಅನಗತ್ಯ ವಿಷಯಗಳತ್ತ ಗಮನಹರಿಸದಿರಿ. ಕೆಲಸ ಬದಲಿಸುವ ಯೋಚನೆ ಮಾಡುವವರಿಗೆ ಸಕಾಲ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಲಿದೆ.

ಕರ್ಕಾಟಕ: ಹಣವಂತರ ಸಹಾಯ ಹಸ್ತ ಇರುವುದರಿಂದ ಮಂಗಳ ಕಾರ್ಯಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಗರ್ವ ತೋರಿಸುವ ಜನರನ್ನು ದೂರವಿಡುವಂಥ ಉಪಾಯ ಮಾಡುವುದು ಒಳ್ಳೆಯದು.

ಸಿಂಹ: ಉತ್ತಮ ವಾಗ್ಸಾಮರ್ಥ್ಯವನ್ನು ಹೊಂದಿರುವ ನಿಮಗೆ ಜನರ ಮನಸ್ಸಿನಲ್ಲಿ ಸ್ಥಾನ ಹೊಂದುವುದು ಕಷ್ಟವಾಗದು. ಅನವಶ್ಯಕ ಮಾತುಗಳಿಂದ ಆತ್ಮೀಯರಲ್ಲಿ ಕಲಹ ಉಂಟಾಗಬಹುದು.

ಕನ್ಯಾ: ಕುಟುಂಬ ನಿರ್ವಹಣೆ ಮಾಡುವಾಗ ಒಡಹುಟ್ಟಿದವರ ತಪ್ಪು ಕಲ್ಪನೆಗಳು ಕಾಣಿಸಬಹುದು. ಅರ್ಥ ಮಾಡಿಸಲು ಪ್ರಯತ್ನಿಸಿ. ಮುಖ್ಯವಾಗಿ ಸಂಗಾತಿಯ ಮನಸ್ಥಿತಿಯನ್ನು ಎದುರಿಸಿ.

ತುಲಾ: ಕಾನೂನಿನ ವ್ಯವಹಾರ ಇತ್ಯರ್ಥವಾಗದ ಸಮಸ್ಯೆಯಾಗಿರುತ್ತದೆ. ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಸಂಭ್ರಮವಿರುವುದು. ಸ್ವತ್ತಿನ ವಿಷಯವಾಗಿ ಕಾನೂನು ಸಲಹೆ ಪಡೆದುಕೊಳ್ಳಿ.

ವೃಶ್ಚಿಕ: ಸಮಸ್ಯೆಗಳಿಗೆ ಧಾರ್ಮಿಕ ಮಾರ್ಗದಲ್ಲಿ ನಡೆದರೆ ಉತ್ತರ ಸಿಗುವುದು. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ ಹಾಗೂ ಲಾಭವಾಗುವುದು. ರಾಜಕೀಯ ವ್ಯಕ್ತಿಗಳು ಪ್ರಚಾರಕ್ಕಾಗಿ ಮಾತನಾಡಬೇಡಿ.

ಧನು: ಪ್ರೀತಿಯಿಂದ ಗೆಲ್ಲಬೇಕೆಂಬ ಮಾತಿನ ಮಹತ್ವ ಅನುಭವದಿಂದಾಗಿ ತಿಳಿದುಬರಲಿದೆ. ಮಡದಿಯೊಂದಿಗೆ ನಡೆದ ಮನಸ್ತಾಪಗಳೆಲ್ಲಾ ಸರಿ ಹೋಗುವುದು. ಮಗಳ ಮದುವೆಯ ಸಲುವಾಗಿ ಆಭರಣ ಕೊಳ್ಳುವ ಬಗ್ಗೆ ಯೋಚಿಸಿ.

ಮಕರ: ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಅಪರೂಪದ ಸಮಾರಂಭವೊಂದಕ್ಕೆ ಆಹ್ವಾನ ಬರುವುದು. ಲಕ್ಷ್ಮಿ ಕೃಪಾಕಟಾಕ್ಷವನ್ನು ಸಂಪಾದಿಸಿ.

ಕುಂಭ: ಕಫ ಅಥವಾ ಉಸಿರಾಟದ ಸಮಸ್ಯೆ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ. ಸಣ್ಣ-ಪುಟ್ಟ ಮಾಹಿತಿಯಿಂದ ಸಂಸ್ಥೆಗೆ ಅನುಕೂಲವಾಗುತ್ತದೆ. ವೈದ್ಯರ ಸಲಹೆ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಿರಿ.


ಮೀನ: ಯಾರನ್ನು ನಿರ್ಲಕ್ಷ್ಯ ಮಾಡುತ್ತಿರೋ ಅವರಿಂದಲೇ ಕೆಲಸಗಳಾಗುವ ಸಾಧ್ಯತೆಗಳಿವೆ. ಕಾರ್ಯಕ್ಷೇತ್ರದಲ್ಲಿ ಹೊಸ ವಿಚಾರಗಳ ಅನ್ವೇಷಣೆ ಉತ್ತಮ ಫಲ ನೀಡಲಿವೆ. ಆಸ್ತಿ ಖರೀದಿಯಂತಹ ಮಹತ್ವದ ಕೆಲಸಗಳಿಗೆ ಸಕಾಲ.

ಪದಬಂಧ 5895

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ದುಡ್ಡಿಲ್ಲದವನು (3)
3.ಕ್ರೈಸ್ತರು ಧರಿಸುವ ಒಂದು ಧಾರ್ಮಿಕ ಲಾಂಛನ (3)
5.ಮುಂದೆ ಬರಲಿರುವ ಕಾಲ (3)
7.ರುಚಿಯುಳ್ಳ ರಸಸ್ವಾದನ ಶಕ್ತಿ! (4)
10.ತಂಬಾಕು ಕೊಯ್ಯಲು ಬಳಸುವ ಕಿರುಗತ್ತಿ (2)
11.ಈತ ಬಲು ಜಿಪುಣ (2)
12.ಮನದೊಳಗಿರುವ ಕಾಮ (3)
13.ಹೆಜ್ಜೆ ಹಾಕುವಾಗ ಕಿಣಿಕಿಣಿ ಶಬ್ದ ಮಾಡುವ ಕಿರುಗಂಟೆ (2)
14.ಪರಾಜಯದಲ್ಲೇ ಗೆಲುವು ಅಡಗಿದೆಯಲ್ಲಾ! (2)
15.ದಾರ ಹಿಡಿದ ಸೈನ್ಯದ ಮುಖ್ಯಸ್ಥ ತಿರುಗಿದ್ದಾನಲ್ಲಾ! (4)
17.ದಯೆಗೊಂದು ಪರ್ಯಾಯ ಪದ (3)
19. ಈತ ಕಬ್ಬಿಣದ ಕೆಲಸಗಾರ (3)
20.ಹೊಟ್ಟೆಕಿಚ್ಚು ಈ ರೀತಿ ಬಂದಿದೆ (3)

ಮೇಲಿಂದ ಕೆಳಕ್ಕೆ
1.ಬರುವಾಗ ಕಾಣಿಸಿದ ಗರ್ಭಕೋಶ! (3)
2.ಭವನದಲ್ಲಿರುವ ಸಂಸಾರ ತಲೆಕೆಳಗಾಗಿದೆ (2)
3. ಗುರುವಿಗೆ ತಕ್ಕ ವಿದ್ಯಾರ್ಥಿ! (2)
4.ಸೂರ್ಯ ದೀಪ ಮುಂತಾದವುಗಳ ಪ್ರಕಾಶ (3)
6.ಶ್ರೀಕೃಷ್ಣದೇವರಾಯ ಈ ಸಾಮ್ರಾಜ್ಯದ ಚಕ್ರವರ್ತಿ (6)
8.ಬೇರೆಯ ಅಭಿಪ್ರಾಯ (5)
9.ಕಾಫಿನಾಡು ಎಂದೇ ಹೆಸರಾಗಿರುವ ಜಿಲ್ಲೆ (6)
10.ಬಾಡಿಗೆ ಕೊಡುವವನು (5)
14.ಜನರ ಹತ್ತಿರವಿರುವ ತಂದೆ (3)
16.ದಾರದೊಳಗಿರುವ ಒಡೆಯ (3)
17.ಕಠೋರವಾಗಿರುವ ಕೈ! (2)
18.ಮರದ ಪೀಠವಿಲ್ಲಿ ಉಲ್ಟಾ ಆಗಿದೆಯಲ್ಲಾ! (2)



5894ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮರ್ದನ 2.ಪಂಕ
5.ಪರಂಪರೆ 7.ರಕಾರಿಹ
9.ಮಾತ್ರೆ 10.ಪ್ರಾಥಮಿಕಶಿಕ್ಷಣ
12.ಗೋಂದು 15.ರಣರಂಗ
16.ಅವಸಾನ 17.ಕಡ
18.ಕೊನರು

ಮೇಲಿಂದ ಕೆಳಕ್ಕೆ:
1.ಮನೋರಥ 3.ಕಪಟಿ 4.ಕರೆ
6.ಪರಿಮಾಣ 8.ಹರಾಮಿ
10.ಪ್ರಾದುರ್ಭಾವ
11.ಶಿಬಿರ 13.ಮಂಗಳೂರು
14.ಪಾನಕ 16.ಅಗ್ಗ

ಸುಡೊಕು 6280

	4	8				6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6279 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಸರ್ಕಾರಿ ಭೂಮಿ ರಕ್ಷಣೆಗೆ ಕ್ರಮ • ಕಾಯ್ದೆಯ 4 ತಿದ್ದುಪಡಿಗಳಿಗೆ ವಿಧಾನಸಭೆ ಅಸ್ತು • ಮೇಲ್ಮನವಿ ಸಲ್ಲಿಸಲು ಅವಕಾಶ

ಒತ್ತುವರಿ ತೆರವು ಅಧಿಕಾರ ತಹಶೀಲ್ದಾರ್‌ಗೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬೆಂಗಳೂರು ಸೇರಿ ರಾಜ್ಯದ ಯಾವುದೇ ಭಾಗದಲ್ಲಿ ಸರ್ಕಾರಿ ಜಮೀನು ಒತ್ತುವರಿಯಾಗಿದ್ದರೆ ಅದನ್ನು ತೆರವುಗೊಳಿಸುವ ಸಂಪೂರ್ಣ ಅಧಿಕಾರವನ್ನು ತಹಶೀಲ್ದಾರರಿಗೆ ನೀಡಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ 'ಕರ್ನಾಟಕ ಭೂಕಂದಾಯ 3ನೇ ತಿದ್ದುಪಡಿ ಮಸೂದೆ'ಗೆ ವಿಧಾನಸಭೆ ಅಂಗೀಕಾರ ನೀಡಿದೆ. ಈ ಮಸೂದೆಯಲ್ಲಿ ಒಟ್ಟು 4 ತಿದ್ದುಪಡಿಗಳಿಗೆ ಒಪ್ಪಿಗೆ ನೀಡಲಾಯಿತು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಸೂದೆ ಮಂಡಿಸಿದರು.

ಈ ಕುರಿತು ವಿವರಣೆ ನೀಡಿದ ಕೃಷ್ಣಬೈರೇಗೌಡ, ಕರ್ನಾಟಕ ಭೂಕಂದಾಯ ಸೆಕ್ಷನ್ 104 ಅನ್ನು ಈ ಹಿಂದೆ ಕ್ಲಿಷ್ಟಕರವಾಗಿ ವ್ಯಾಖ್ಯಾನಗೊಳಿಸಲಾಗಿತ್ತು. ಈಗ ಅದನ್ನು ಸರಳಗೊಳಿಸಲಾಗಿದೆ ಎಂದು ಹೇಳಿದರು.



ಕಾಲುವೆ, ಬಿ-ಖರಾಬು ಸೇರಿ ಯಾವುದೇ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವ ಪರಮಾಧಿಕಾರ ತಹಶೀಲ್ದಾರರಿಗೆ ಇದೆ. ಇದರಿಂದ ಸರ್ಕಾರದ ಆಸ್ತಿರಕ್ಷಣೆ ಸಾಧ್ಯ

ಕೃಷ್ಣ ಬೈರೇಗೌಡ
ಕಂದಾಯ ಸಚಿವ

ಮೂರು ಹಂತದ ಮೇಲ್ಮನವಿ ಅವಕಾಶ: ಸರ್ಕಾರಿ ಜಮೀನು ಒತ್ತುವರಿ ಮಾಡಿ ಕಾನೂನು ಹೋರಾಟಕ್ಕೆ ನೇರವಾಗಿ ಜಿಲ್ಲಾಧಿಕಾರಿಗಳ ಬಳಿ ಮೇಲ್ಮನವಿ ಹೋಗಲು ಇನ್ನು ಮುಂದೆ ಸಾಧ್ಯವಿಲ್ಲ. ಮೊದಲಿಗೆ ಉಪ-ವಿಭಾಗಾಧಿಕಾರಿ, ನಂತರ ಜಿಲ್ಲಾಧಿಕಾರಿ ಮತ್ತು ಮೂರನೇ ಹಂತದಲ್ಲಿ ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ ಮುಂದೆ ಹೋಗಬೇಕು. ಈ ಮೂರು ಹಂತ ದಾಟಿದ ಬಳಿಕವೇ ಹೈಕೋರ್ಟ್‌ಗೆ ಹೋಗಬಹುದು.

ಇದರಿಂದ ಕಾನೂನು ಹೋರಾಟ ನಡೆಸಲು ಸರ್ಕಾರಕ್ಕೆ ಹೆಚ್ಚಿನ ಸಮಯ ಸಿಗುತ್ತದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಯಾವುದೇ ಜಮೀನು ವ್ಯಕ್ತಿಗೆ ಸೇರಿಲ್ಲದಿದ್ದರೆ ಅದು ಸರ್ಕಾರಕ್ಕೆ ಸೇರಿದೆ ಎಂದು ಭೂಕಂದಾಯ ಕಾನೂನಿನ ಕಲಂ 67 ಹೇಳುತ್ತದೆ. ಕೆಲವರು ತಮ್ಮ ಹೆಸರಿಗೆ ಅಂತಹ ಜಮೀನುಗಳ ಖಾತೆ ಮಾಡಿಕೊಡಿ ಎಂದು ತಹಶೀಲ್ದಾರರಿಗೆ ಮನವಿ ಮಾಡುತ್ತಾರೆ. ಆದರೆ, ಅವರ ಬಳಿ ಜಮೀನಿನ ಮಾಲೀಕತ್ವ ನಿರೂಪಿಸುವ ಮೂಲ ದಾಖಲೆ ಅಥವಾ ಸಮರ್ಪಕ ದಾಖಲೆ ಇಲ್ಲದಿದ್ದರೆ ಅವರಿಗೆ ಖಾತೆ ಮಾಡಿಕೊಡುವುದು ಸಾಧ್ಯವಿಲ್ಲ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಕಂದಾಯ ಇಲಾಖೆಗೆ ಪ್ರತ್ಯೇಕ ಕಾನೂನು ವಿಭಾಗವನ್ನು ರಚಿಸಬೇಕು. ಅತಿ ಹೆಚ್ಚು ತಕರಾರು ಅರ್ಜಿಗಳು ಸಲ್ಲಿಕೆ ಆಗುತ್ತವೆ. ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಲು ವಕೀಲರ ಕೊರತೆ ಇದೆ ಎಂದು ಹೇಳಿದರು.

ರೆಡ್ ಜೋನ್ ಇದ್ದರೆ ಭೂ ಪರಿವರ್ತನೆ ಬೇಡ

ನಗರ ಯೋಜನೆಯಲ್ಲಿಈಗಾಗಲೇ ಕೈಗಾರಿಕಾ ವಲಯ ಅಥವಾ ರೆಡ್ ಜೋನ್, ಯೆಲ್ಲೋ ಜೋನ್ ಎಂದು ಗುರುತಿಸಿದ್ದರೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರು ಭೂ ಪರಿವರ್ತನೆಗೆ ಅನುಮತಿ ಕೇಳುತ್ತಿದ್ದರು. ಇನ್ನು ಮುಂದೆ ಪರಿವರ್ತನೆಗೆ ಅವಕಾಶ ಕೇಳುವ ಅಗತ್ಯವಿಲ್ಲ. 2 ಎಕರೆವರೆಗೆ ಜಮೀನು ಪರಿವರ್ತನೆ ಅವಕಾಶವನ್ನು ತೆಗೆದು ಹಾಕಲಾಗಿದೆ ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಬಡಾವಣೆ ನಿರ್ಮಾಣಕ್ಕೆ ಹೊಸ ಕಾನೂನು: ಶಿಫಾರಸು

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಬಡಾವಣೆ ನಿರ್ಮಾಣ ಸಂಬಂಧ ಹೊಸ ಕಾನೂನು ಜಾರಿಗೆ ತರಬೇಕು ಎಂದು ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಶಿಫಾರಸು ಮಾಡಿದೆ.

ಸರ್ಕಾರ ಅಥವಾ ಖಾಸಗಿಯವರು ನಿರ್ಮಿಸುವ ಬಡಾವಣೆಗಳಲ್ಲಿ ಮನೆ ನೀರಿನ ಸಂಪರ್ಕ, ವಿದ್ಯುತ್, ಒಎಫ್‌ಸಿ ಅಳವಡಿಕೆಗೆ ರಸ್ತೆಗಳ ಎರಡೂ ಬದಿ ಪೈಪ್‌ಲೈನ್ ಮಾಡಿ ಕೇಬಲ್‌ಗಳನ್ನು ಅಳವಡಿಸಬೇಕು ಎಂದು ರಿಜ್ವಾನ್ ಅರ್ಷದ್ ಅಧ್ಯಕ್ಷತೆಯ ಸಮಿತಿ ಸಲಹೆ ಮಾಡಿದೆ.

ಈವರೆಗೂ ನಿರ್ಮಾಣ ಆಗಿರುವ ಬಡಾವಣೆಗಳಲ್ಲಿ ರಸ್ತೆಯ ಒಂದು ಬದಿ ಮಾತ್ರ ವ್ಯವಸ್ಥೆ ಇರುತ್ತದೆ. ಇನ್ನೊಂದು ಬದಿ ಮನೆಗಳಿಗೆ ಸಂಪರ್ಕ ಕಲ್ಪಿಸಲು ರಸ್ತೆ ಅಗೆಯಲಾಗುತ್ತಿತ್ತು. ಇದರಿಂದ ರಸ್ತೆಗಳು ಹಾಳಾಗುತ್ತಿದ್ದವು. ಬೆಂಗಳೂರಿನಲ್ಲಿ ಹೀಗೆ ಕೇಬಲ್‌ಗಳ ದುರಸ್ತಿಗೆ ರಸ್ತೆ ಅಗೆದ ಪರಿಣಾಮ ವಿವಿಧ ಇಲಾಖೆಗಳು ದುರಸ್ತಿಗಾಗಿ ₹18.38 ಕೋಟಿ ವೆಚ್ಚ ಮಾಡಿವೆ. ಇಂತಹ ಲೋಪ ಸರಿಪಡಿಸಲು ರಸ್ತೆಯ ಎರಡೂ ಬದಿ ನೀರು, ವಿದ್ಯುತ್, ಒಎಫ್‌ಸಿ ಕೇಬಲ್‌ಗಳನ್ನು ಅಳವಡಿಸುವ ಅಗತ್ಯವಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ರಸ್ತೆ ಅಗೆಯಲು ಅನುಮತಿ ಪಡೆಯದಿರುವುದು, ಅಗೆದ ರಸ್ತೆಗಳನ್ನು ದುರಸ್ತಿ ಮಾಡದೆ ನಿರ್ಲಕ್ಷ್ಯ ತೋರುವ ಘಟನೆಗಳಿಂದ ಅಪಘಾತ, ಸಾವು ನೋವು ವರದಿಯಾಗಿವೆ. ಸರ್ಕಾರಕ್ಕೂ ಆರ್ಥಿಕ ನಷ್ಟವಾಗಿದೆ ಎಂದು ಹೇಳಿದೆ.

ಸುದ್ದಿ 2 ನಿಮಿಷ

'ಹಿಂದುಳಿದ ವರ್ಗಗಳ 2.50 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ'

ಸುವರ್ಣ ವಿಧಾನಸೌಧ (ಬೆಳಗಾವಿ): ಪ್ರತಿ ವರ್ಷ ಹಿಂದುಳಿದ ವರ್ಗಗಳ 2.50 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೆಟ್ರಿಕ್ ನಂತರದ 150 ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಆನ್‌ಲೈನ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ವರ್ಷ ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಸ್ಟೆಲ್ ಪ್ರವೇಶ ಕೋರಿ ಅರ್ಜಿ ಸಲ್ಲಿಸುತ್ತಾರೆ. ಹಾಸ್ಟೆಲ್ ದೊರಕದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ನೆರವು ನೀಡಲಾಗುತ್ತಿದೆ ಎಂದರು.

ಹಾಸ್ಟೆಲ್‌ಗಳ ಮೂಲಸೌಕರ್ಯ, ಪುಸ್ತಕ, ಗ್ರಂಥಾಲಯಗಳಿಗೂ ಆದ್ಯತೆ ನೀಡಲಾಗಿದೆ. ಉತ್ತಮ ಗುಣಮಟ್ಟದ ಆಹಾರ, ಹಾಸ್ಟೆಲ್‌ಗಳ ನವೀಕರಣ, ಪುಸ್ತಕ ವಿತರಣೆ, ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು ಹಿಂದುಳಿದ ವರ್ಗದವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಇಂದು ಸಿದ್ದರಾಮಯ್ಯ ಅವರು ನೆರವಾಗುತ್ತಿದ್ದಾರೆ ಎಂದರು.

ಇಲಾಖೆಯ ಕಾರ್ಯದರ್ಶಿ ಸಂಜಯ್ ಶೆಟ್ಟಣ್ಣನವರ್, ಆಯುಕ್ತ ಶ್ರೀನಿವಾಸ್, ಜಂಟಿ ನಿರ್ದೇಶಕ ಜಿ. ಜಗದೀಶ್, ಸಿ.ಕೆ.ಜಗದೀಶ್ ಕುಮಾರ್, ಪ್ರದೀಪ್ ಇದ್ದರು.



ಹಣದುಬ್ಬರ ನಿಯಂತ್ರಣ; ರಾಜ್ಯ ಯಶಸ್ವಿ

ಸುವರ್ಣ ವಿಧಾನಸೌಧ (ಬೆಳಗಾವಿ): 'ರಾಜ್ಯದಲ್ಲಿ ಹಣದುಬ್ಬರ ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. 2024ರ ಮೇ ತಿಂಗಳಲ್ಲಿ ಶೇಕಡ 6.11ಕ್ಕೆ ತಲುಪಿದ್ದ ಹಣದುಬ್ಬರದ ದರವು ಸೆಪ್ಟೆಂಬರ್ ವೇಳೆಗೆ ಶೇ 4.92ಕ್ಕೆ ತಗ್ಗಿದೆ' ಎಂದು ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ ಹೇಳಿದೆ.

ವಿಧಾನಮಂಡಲದಲ್ಲಿ ಈ ವರದಿಯನ್ನು ಮಂಗಳವಾರ ಮಂಡಿಸಲಾಯಿತು. ಈ ಆರ್ಥಿಕ ವರ್ಷದ ಮೊದಲ ಅರ್ಧದಲ್ಲಿ ವಿದೇಶಿ ನೇರ ಹೂಡಿಕೆಯಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಸ್ಥಾನದಲ್ಲಿತ್ತು. ಈ ಅವಧಿಯಲ್ಲಿ 350 ಕೋಟಿ ಅಮೆರಿಕನ್ ಡಾಲರ್ ವಿದೇಶಿ ನೇರ ಹೂಡಿಕೆ ಹರಿದುಬಂದಿದೆ ಎಂಬ ಅಂಶ ವರದಿಯಲ್ಲಿದೆ.

ಶೇ 44.7ರಷ್ಟು ತೆರಿಗೆ ಸಂಗ್ರಹ: ಪ್ರಸಕ್ತ ಆರ್ಥಿಕ ವರ್ಷದ ಮೊದಲ ಅರ್ಧದಲ್ಲಿ ಸ್ವಂತ ತೆರಿಗೆ ಸಂಗ್ರಹದ ಒಟ್ಟು ಗುರಿಯ ಶೇ 45.02ರಷ್ಟು (₹91,569 ಕೋಟಿ) ಸಾಧನೆ ಆಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸ್ವಂತ ತೆರಿಗೆಗಳ ಬೆಳವಣಿಗೆ ದರ ಶೇ 10.5ರಷ್ಟಿತ್ತು. ನೋಂದಣಿ ಮತ್ತು ಮುದ್ರಾಂಕ ತೆರಿಗೆಯಲ್ಲಿ ಶೇ 27.6ರಷ್ಟು ಬೆಳವಣಿಗೆ ದಾಖಲಾಗಿದೆ. 2024ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ₹1.29 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ ₹1.16 ಲಕ್ಷ ರಾಜಸ್ವ ವೆಚ್ಚ ಮತ್ತು ₹ 13,204 ಕೋಟಿ ಬಂಡವಾಳ ವೆಚ್ಚ. ರಾಜಸ್ವ ವೆಚ್ಚದಲ್ಲಿ ಶೇ 18.4 ಮತ್ತು ಬಂಡವಾಳ ವೆಚ್ಚದಲ್ಲಿ ಶೇ 28.3ರಷ್ಟು ಬೆಳವಣಿಗೆ ಕಂಡುಬಂದಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಸೆಪ್ಟೆಂಬರ್‌ವರೆಗೆ ಕೇಂದ್ರ ಸರ್ಕಾರವು ₹1,456 ಕೋಟಿಯನ್ನು ರಾಜ್ಯಕ್ಕೆ ಹೂಡಿಕೆಗಾಗಿ ವಿಶೇಷ ನೆರವು ನೀಡಿದೆ. ಇದು ರಾಜ್ಯದ ಬಂಡವಾಳ ವೆಚ್ಚ ಹೆಚ್ಚಿಸಲು ಸಹಕಾರಿಯಾಗಿದೆ ಎಂದು ವರದಿ ತಿಳಿಸಿದೆ.



ಅಭಿವೃದ್ಧಿ ಮಾತುಕತೆ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ಕಚೇರಿಯಲ್ಲಿ ವಸತಿ ಮತ್ತು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಂಗಳವಾರ ಭೇಟಿ ಮಾಡಿ ಕ್ಷೇತ್ರದ ಅಭಿವೃದ್ಧಿ ಯೋಜನೆಗಳ ಕುರಿತು ಚರ್ಚೆ ನಡೆಸಿದರು

ಕೈಗಾರಿಕೆಗಳಲ್ಲಿ ರೈತರಿಗೂ ಸಹಭಾಗಿತ್ವ

ಕೆಐಎಡಿಬಿ ಸ್ವಾಧೀನ ಪಡೆಯುವ ಜಮೀನಿಗೆ ಅನ್ವಯ; ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನಪಡಿಸಿಕೊಳ್ಳುವ ಜಮೀನಿನಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಲ್ಲಿ ರೈತರಿಗೂ ಸಹಭಾಗಿತ್ವ ನೀಡಲು ಅಥವಾ ಅವರೇ ಕೈಗಾರಿಕೆ ಸ್ಥಾಪಿಸಲು ಮುಂದಾದರೆ ನೆರವು ನೀಡುವ ಕುರಿತು ಪರಿಶೀಲಿಸುತ್ತೇವೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಸ್ತುತ ಇರುವ ಕಾಯ್ದೆಯ ಪ್ರಕಾರ ಕೆಐಎಡಿಬಿ ವಶಪಡಿಸಿಕೊಳ್ಳುವ ಭೂಮಿಗೆ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಲಾಗುತ್ತಿದೆ. ಅವರು ಬಯಸಿದರೆ ಅಭಿವೃದ್ಧಿಗೊಳಿಸಿದ ಅವರ ಪ್ರದೇಶದಲ್ಲಿ ಪ್ರತಿ ಎಕರೆಗೆ ಪರ್ಯಾಯವಾಗಿ 10,781 ಚದರ ಅಡಿ ಜಾಗ ನೀಡಲಾಗುತ್ತಿದೆ. ನಗರಾಭಿವೃದ್ಧಿ ಪ್ರಾಧಿಕಾರಗಳು ರೈತರಿಂದ ಸ್ವಾಧೀನಪಡಿಸಿಕೊಂಡ ಜಮೀನಿನ ಬದಲಿಗೆ ಅಭಿವೃದ್ಧಿಪಡಿಸಲಾದ ನಿವೇಶನಗಳನ್ನು ನೀಡುವ ಮಾದರಿಯಲ್ಲಿ ಕೈಗಾರಿಕಾ ಪ್ರದೇಶದಲ್ಲೂ ರೈತರನ್ನೂ ಒಳಗೊಳ್ಳುವಂತೆ ಮಾಡಲು ಸೂಕ್ತ ನಿಯಮ ರೂಪಿಸಬೇಕಿದೆ ಎಂದರು.

ನ್ಯಾಯಾಂಗ ತನಿಖೆಗೆ ಆಗ್ರಹ: ಕೆಐಎಡಿಬಿ ಸ್ವಾಧೀನದಲ್ಲಿರುವ ನಾಗರಿಕ ಸೌಲಭ್ಯಕ್ಕೆ ಮೀಸಲಾದ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡುವಾಗ ನಿಯಮಗಳನ್ನು ಪಾಲಿಸಿಲ್ಲ. ಮನಬಂದಂತೆ ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಲಾಗಿದೆ. ಈ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ. ರವಿ ಒತ್ತಾಯಿಸಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಸಚಿವ ಎಂ.ಬಿ. ಪಾಟೀಲ, ಮಾರ್ಗಸೂಚಿ ಅನ್ವಯವೇ ಹಂಚಿಕೆ ಮಾಡಲಾಗಿದೆ. ವಸತಿ ಸಮುಚ್ಚಯ, ಹೋಟೆಲ್‌ಗಳಿಗೆ ನೀಡಲು ಕಾನೂನಿನ ಅಡಿ ಅವಕಾಶವಿದೆ ಎಂದರು.

ಕೆಟಿಸಿಪಿ ಕಾಯ್ದೆಗೆ ತಿಂಗಳೊಳಗೆ ನಿಯಮ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆಗೆ ಒಂದು ತಿಂಗಳ ಒಳಗೆ ನಿಯಮಾವಳಿಗಳನ್ನು ರೂಪಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು. ಜೆಡಿಎಸ್‌ನ ಟಿ.ಎಸ್. ಶರವಣ ಪ್ರಶ್ನೆಗೆ ಉತ್ತರಿಸಿದ ಅವರು, ತಿದ್ದುಪಡಿ ಕಾಯ್ದೆಯ ಅನ್ವಯ ಕರಡು ನಿಯಮಾವಳಿ ರೂಪಿಸಲಾಗಿದೆ. ಕಾನೂನು ಹಾಗೂ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಆದೇಶ ಹೊರಡಿಸಲಾಗುವುದು ಎಂದರು.

ಆನ್‌ಲೈನ್ ಗೇಮಿಂಗ್: 'ಸುಪ್ರೀಂ' ತೀರ್ಮಾನದ ಬಳಿಕ ಕ್ರಮ

ಸುವರ್ಣ ವಿಧಾನಸೌಧ (ಬೆಳಗಾವಿ): ಆನ್‌ಲೈನ್ ಗೇಮ್‌ಗಳನ್ನು ನಿರ್ಬಂಧಿಸಿ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಆದೇಶ ಹೊರಡಿಸಲಾಗಿತ್ತು. ಗೇಮಿಂಗ್ ಪ್ರವರ್ತಕರು ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಗೃಹ ಇಲಾಖೆಯ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಅದನ್ನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದೆ. ಕೋರ್ಟ್ ತೀರ್ಮಾನದ ಬಳಿಕ ಆನ್‌ಲೈನ್ ಗೇಮಿಂಗ್ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪರಮೇಶ್ವರ ಭರವಸೆ ನೀಡಿದರು.

ಬಿಜೆಪಿಯ ಎಸ್.ಟಿ. ಸೋಮಶೇಖರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು,

'ರಾಜ್ಯದಲ್ಲಿ ಅನೇಕ ಗೇಮಿಂಗ್ ಆ್ಯಪ್‌ಗಳು ಪರವಾನಗಿ ಇಲ್ಲದೆ ಕಾರ್ಯಾಚರಣೆ ನಡೆಸುತ್ತಿವೆ. ಹೈಕೋರ್ಟ್ ಆದೇಶದ ಕಾರಣದಿಂದ ಅವುಗಳ ವಿರುದ್ಧ ಕ್ರಮ ಕೈಗೊಳ್ಳಲು ಈಗ ಆಗುತ್ತಿಲ್ಲ. ಆನ್‌ಲೈನ್ ಗೇಮಿಂಗ್ ವ್ಯಾಮೋಹಕ್ಕೆ ಬಿದ್ದು ಹಣ ಕಳೆದುಕೊಂಡ ಐವರು ಬೆಂಗಳೂರಿನಲ್ಲಿ ಮತ್ತು ಒಬ್ಬರು ವಿಜಯನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ದಾಖಲಾಗಿವೆ' ಎಂದು ಮಾಹಿತಿ ನೀಡಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಆನ್‌ಲೈನ್ ಗೇಮಿಂಗ್ ಚಟಕ್ಕೆ ಜನರು ಬಲಿಯಾಗುತ್ತಿದ್ದಾರೆ. ಕೋಟ್ಯಧೀಶರಾಗಿದ್ದವರು ಹಣ ಕಳೆದುಕೊಂಡು ಬೀದಿಗೆ ಬೀಳುತ್ತಿದ್ದಾರೆ. ಮನೆಗಳಲ್ಲಿ ಕೆಲಸಕ್ಕೆ ಬರುವವರು ಆನ್‌ಲೈನ್ ಗೇಮಿಂಗ್ ಕಾರಣಕ್ಕಾಗಿ ಕಳ್ಳತನ ಮಾಡುತ್ತಿರುವುದೂ ನಡೆಯುತ್ತಿದೆ. ಆನ್‌ಲೈನ್ ಗೇಮಿಂಗ್ ನಿಯಂತ್ರಣಕ್ಕೆ ಬಿಗಿಯಾದ ಕ್ರಮ ಕೈಗೊಳ್ಳಿ' ಎಂದು ಆಗ್ರಹಿಸಿದರು.

ಪಂಚಾಯತ್ ರಾಜ್ ವಿಶ್ವವಿದ್ಯಾಲಯ: ಬಿಜೆಪಿ–ಜೆಡಿಎಸ್ ವಿರೋಧ, ಸಭಾತ್ಯಾಗ

ರಾಜ್ಯಪಾಲರ ಅಧಿಕಾರ ಮೊಟಕು: ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕುಲಪತಿ ಅಧಿಕಾರವನ್ನು ರಾಜ್ಯಪಾಲರಿಂದ ಹಿಂದಕ್ಕೆ ಪಡೆದು ಮುಖ್ಯಮಂತ್ರಿಯವರಿಗೆ ನೀಡುವ 'ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ'ಯನ್ನು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರ ವಿರೋಧ ಮತ್ತು ಸಭಾತ್ಯಾಗದ ಮಧ್ಯೆ ವಿಧಾನಸಭೆ ಅಂಗೀಕರಿಸಿತು.

ರಾಜ್ಯಪಾಲರ ವಿರುದ್ಧ ದ್ವೇಷದ ಕಾರಣಕ್ಕಾಗಿ ಮತ್ತು ಸಂಘರ್ಷ ನಡೆಸಲು ಈ ಮಸೂದೆಯನ್ನು ಮಂಡಿಸಲಾಗಿದೆ. ಇದರಿಂದ ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಒಳ್ಳೆಯದಾಗುವುದಿಲ್ಲ ಎಂದು ವಿರೋಧಪಕ್ಷದ ಸದಸ್ಯರು ಟೀಕಿಸಿದರು.

ಮಸೂದೆಯನ್ನು ಸಮರ್ಥಿಸಿಕೊಂಡ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ರಾಜಕೀಯ ಕಾರಣಕ್ಕಾಗಿ ಅಥವಾ ಯಾರನ್ನೋ ಕುಲಪತಿ ಮಾಡಲು ಮಸೂದೆ ಮಂಡಿಸಿಲ್ಲ. ವಿಶ್ವವಿದ್ಯಾಲಯವನ್ನು ಚುರುಕುಗೊಳಿಸಲು ಮತ್ತು ಆಡಳಿತವನ್ನು ಹೆಚ್ಚು ಪರಿಣಾಮಕಾರಿ ಮಾಡುವ ಉದ್ದೇಶದಿಂದ ತಿದ್ದುಪಡಿ ಮಾಡಿದ್ದೇವೆ. ರಾಜ್ಯಪಾಲರೇ ಕುಲಪತಿ ಆಗಬೇಕು ಎಂಬ ಕಾನೂನು ಎಲ್ಲೂ ಇಲ್ಲ. ಗುಜರಾತ್ ಮತ್ತು ಅರುಣಾಚಲ ಪ್ರದೇಶದ ತಲಾ ಒಂದೊಂದು ವಿಶ್ವವಿದ್ಯಾಲಯ, ಉತ್ತರ ಪ್ರದೇಶದ ಲೋಹಿಯಾ ಕಾನೂನು ವಿಶ್ವವಿದ್ಯಾಲಯವೂ ಇದೇ ಮಾದರಿಯಲ್ಲಿವೆ ಎಂದು ಹೇಳಿದರು.

ಗದಗದ ಈ ವಿಶ್ವವಿದ್ಯಾಲಯಕ್ಕೆ ಮಹಾತ್ಮಗಾಂಧಿ ಹೆಸರಿಡಬೇಕು ಎನ್ನುವ ಶಾಸಕ ಬಿ.ಆರ್.ಪಾಟೀಲ ಅವರ ಸಲಹೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಭರವಸೆ ನೀಡಿದರು.

ಬಿಜೆಪಿಯ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮಾತನಾಡಿ, ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಸ್ವಾಯತ್ತೆ ಮತ್ತು ಸ್ವಾತಂತ್ರ್ಯ ನೀಡುವುದರ ಕಡೆ ಗಮನ ಕೊಡದೇ, ಸರ್ಕಾರ ರಾಜ್ಯಪಾಲರ ಜತೆ ಸಂಘರ್ಷಕ್ಕೆ ಇಳಿದಿರುವುದು ಸರಿಯಲ್ಲ ಎಂದರು.

ವಿರೋಧಪಕ್ಷದ ನಾಯಕ ಆರ್. ಅಶೋಕ, ಬಿಜೆಪಿಯ ಆರಗ ಜ್ಞಾನೇಂದ್ರ, ಚನ್ನಬಸಪ್ಪ, ಸಿಮೆಂಟ್ ಮಂಜು, ಡಾ. ಭರತ್ ಶೆಟ್ಟಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶಬಾಬು, ನೇಮಿರಾಜ ನಾಯಕ್, ಕಾಂಗ್ರೆಸ್‌ನ ಶರತ್ ಬಚ್ಚೇಗೌಡ, ಕೆ.ಎಂ.ಶಿವಲಿಂಗೇಗೌಡ ಮಾತನಾಡಿದರು.

ವಿಧಾನಸಭೆಯಲ್ಲಿ ಸೋಮವಾರ ಅನುಮೋದನೆಗೊಂಡ ಐದು ಮಸೂದೆಗಳು ವಿಧಾನಪರಿಷತ್ತಿನಲ್ಲಿ ಅಂಗೀಕಾರಗೊಂಡವು.

ಅಂಗೀಕಾರಗೊಂಡ ಮಸೂದೆಗಳು

- ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಗೆ ದರವನ್ನು ಹೆಚ್ಚಿಸುವ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಮಸೂದೆ
- ಖನಿಜ ಹೊಂದಿರುವ ಭೂಮಿಗಳ ಮೇಲೆ ತೆರಿಗೆ ವಿಧಿಸಲು ಮತ್ತು ಒಂದೇ ಪ್ರವರ್ಗದಡಿ ಬರುವ ಗಣಿಗ ಗುತ್ತಿಗೆಗಳಿಗೆ ಏಕರೂಪದ ತೆರಿಗೆ ದರ ವಿಧಿಸುವ ಉದ್ದೇಶದ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ಮಸೂದೆ– 2024
- ವಾಣಿಜ್ಯ ಪ್ರಕರಣಗಳ ನ್ಯಾಯಾಲಯಗಳ ಮಾದರಿಯಲ್ಲಿ ವಿಚಾರಣಾ ಪ್ರಕ್ರಿಯೆಗೆ ಕಾಲಮಿತಿ ನಿಗದಿಪಡಿಸುವ ಮೂಲಕ ಸಿವಿಲ್ ಪ್ರಕರಣಗಳ ತ್ವರಿತ ವಿಲೇವಾರಿಗೆ ಅವಕಾಶ ಕಲ್ಪಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆ(ಕರ್ನಾಟಕ ತಿದ್ದುಪಡಿ) ಮಸೂದೆ– 2024
- ಮೋಟಾರು ಸಾರಿಗೆ ಮತ್ತು ಸಂಬಂಧಿತ ಇತರ ಕಾರ್ಮಿಕರ ಸಾಮಾಜಿಕ ಭದ್ರತೆ ಹಾಗೂ ಕ್ಷೇಮಾಭಿವೃದ್ಧಿ ನಿಧಿಗೆ ದ್ವಿಚಕ್ರ ವಾಹನಗಳ ನೋಂದಣಿ ವೇಳೆ ತಲಾ ₹ 500 ಮತ್ತು ಮೋಟಾರು ಕಾರುಗಳ ನೋಂದಣಿ ವೇಳೆ ₹ 1,000 ಉಪಕರ ಸಂಗ್ರಹಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ– 2024

ಮಂಡನೆಯಾದ ಮಸೂದೆ

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಉದ್ದೇಶದಿಂದ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ– 2024



ಶಿರಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಟಿ.ಬಿ.ಜಯಚಂದ್ರ ಅವರಿಗೆ ನೀಡಲಾದ 2024ನೇ ಸಾಲಿನ 'ಅತ್ಯುತ್ತಮ ಶಾಸಕ ಪ್ರಶಸ್ತಿ'ಯನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿರೋಧಪಕ್ಷದ ನಾಯಕ ಆರ್.ಅಶೋಕ ಜತೆಗೂಡಿ ಪ್ರದಾನ ಮಾಡಿದರು

'ಸೈಬರ್ ಸುರಕ್ಷತೆಗೆ ಡಿಜಿಪಿ ಹುದ್ದೆ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯದಲ್ಲಿ ಸೈಬರ್ ಅಪರಾಧ ನಿಯಂತ್ರಣ ಮತ್ತು ಸೈಬರ್ ಸುರಕ್ಷತೆಗಾಗಿ ಹೊಸದಾಗಿ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಹುದ್ದೆಯೊಂದನ್ನು ಸೃಜಿಸಲಾಗಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ವಿಧಾನಸಭೆಗೆ ಮಂಗಳವಾರ ತಿಳಿಸಿದರು.

ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ನೂತನ ಡಿಜಿಪಿ ಅವರ ಅಧೀನದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಐಜಿಪಿ, ಎಸ್‌ಪಿ ಮತ್ತು ಕಿರಿಯ ಅಧಿಕಾರಿಗಳು ಇರುತ್ತಾರೆ. ಸೈಬರ್ ಅಪರಾಧ ಪ್ರಕರಣಗಳ ತನಿಖೆಯ ಮೇಲುಸ್ತುವಾರಿಗಾಗಿ ಏಳು ವಲಯಗಳಿಗೂ ತಲಾ ಒಬ್ಬ ಎಸ್‌ಪಿಯನ್ನು ನೇಮಿಸಲಾಗಿದೆ. 43 ಸೈಬರ್ ಅಪರಾಧ (ಸೆನ್) ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ' ಎಂದರು.

ಗುಜರಾತ್‌ನಲ್ಲಿ ವಿಧಿ ವಿಜ್ಞಾನ ವಿ.ವಿಯ ಮಾದರಿಯಲ್ಲಿ ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ನಗರದಲ್ಲಿ 7,500 ಸಿಸಿಟಿವಿ ಕ್ಯಾಮೆರಾಗಳನ್ನು ಕಮಾಂಡ್ ಸೆಂಟರ್‌ಗೆ ಜೋಡಿಸಲಾಗಿದೆ. ಇತರ 1,000 ಪೊಲೀಸ್ ಠಾಣೆಗಳ ವ್ಯಾಪ್ತಿಗಳಲ್ಲಿನ ಸಿಸಿಟಿವಿ ಕ್ಯಾಮೆರಾಗಳನ್ನು ವಿಶೇಷ ಕಮಾಂಡ್ ಸೆಂಟರ್ ಜೊತೆ ಜೋಡಿಸಲಾಗುವುದು. ಸ್ಮಾರ್ಟ್ ಸಿಟಿಗಳನ್ನು ಹೊರತುಪಡಿಸಿದ ನಗರಗಳಲ್ಲೂ ಕಮಾಂಡ್ ಸೆಂಟರ್‌ಗಳನ್ನು ಅಸ್ತಿತ್ವಕ್ಕೆ ತರಲಾಗುವುದು ಎಂದರು.

ಉಪ ಸಭಾಪತಿ ಮಾತಿಗೆ ಕೆರಳಿದ ಹರಿಪ್ರಸಾದ್

ಪ್ರಜಾವಾಣಿ ವಾರ್ತೆ


ಸುವರ್ಣ ವಿಧಾನಸೌಧ (ಬೆಳಗಾವಿ): 'ಕಾಯ್ದೆ ತಿದ್ದುಪಡಿಗೆ ಮಂಡಿಸಿರುವ ಮಸೂದೆಯಲ್ಲಿ ಪ್ರಸ್ತಾಪಿಸಿರುವ ಅಂಶಕ್ಕೆ ಸೀಮಿತವಾಗಿ ಅಭಿಪ್ರಾಯ ವ್ಯಕ್ತಪಡಿಸಬೇಕು. ಅದನ್ನು ಹೊರತುಪಡಿಸಿ ಸಂಬಂಧಪಡದ ವಿಷಯಗಳ ಕುರಿತು ಮಾತನಾಡಲು ಅವಕಾಶ ಇಲ್ಲ' ಎಂದು ವಿಧಾನಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ನೀಡಿದ ಸಲಹೆಗೆ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದ ಪ್ರಸಂಗ ನಡೆಯಿತು.

ಖಾಸಗಿ ವಲಯದ ಚಾಣಕ್ಯ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಸರ್ಕಾರದ ಪ್ರತಿನಿಧಿಯಾಗಿ ತಜ್ಞರೊಬ್ಬರನ್ನು ನೇಮಕ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ 'ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ'ಯನ್ನು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಮಂಡಿಸಿದರು.

ಮಸೂದೆಯ ಕುರಿತು ಮಾತನಾಡಿದ ಹರಿಪ್ರಸಾದ್, 'ಇದು ಅಕ್ರಮವನ್ನು ಸಕ್ರಮ ಮಾಡುವ ಮಸೂದೆ. ಚಾಣಕ್ಯ ವಿಶ್ವವಿದ್ಯಾಲಯಕ್ಕೆ ದೇವನಹಳ್ಳಿಯಲ್ಲಿ ಕೆಐಎಡಿಬಿ 106 ಎಕರೆ ಜಮೀನನ್ನು ಕೇವಲ ₹2.90 ಕೋಟಿಗೆ 10 ವರ್ಷದ ಗುತ್ತಿಗೆ ಕಂ ಕ್ರಯಪತ್ರದ ಆಧಾರದಲ್ಲಿ ನೀಡಿದೆ. ಅಂದಾಜು ₹600 ಕೋಟಿ ಮೌಲ್ಯದ ಜಾಗವನ್ನು ರೈತರಿಂದ ಕಿತ್ತುಕೊಂಡು ನೀಡಲಾಗಿದೆ. ಈ ಸಂಸ್ಥೆಯ ಧ್ಯೇಯೋದ್ದೇಶ ಏನೆಂದು ಯಾರಿಗೂ ಗೊತ್ತಿಲ್ಲ. ಈ ಮಸೂದೆಯನ್ನು ವಾಪಸ್ ಪಡೆದು ಅಕ್ರಮವನ್ನು ಮೊದಲು ಸರಿ ಮಾಡಬೇಕು' ಎಂದರು.

ಆಗ ಬಿಜೆಪಿಯ ಸಿ.ಟಿ. ರವಿ, 'ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಭೂಮಿ ನೀಡುವ ನಿರ್ಧಾರವನ್ನು ಹಿಂದಿನ ಸರ್ಕಾರ ತೆಗೆದುಕೊಂಡಿತ್ತು. ಆಧಾರ ಇಲ್ಲದೆ ಆರೋಪ ಮಾಡಬಾರದು. ಅಕ್ರಮ ಆಗಿದೆ ಎನ್ನುವುದಕ್ಕೆ ಆಧಾರಗಳಿದ್ದರೆ ಲೋಕಾಯುಕ್ತಕ್ಕೆ ದೂರು ನೀಡಲಿ' ಎಂದರು.

ಈ ವೇಳೆ ಹರಿಪ್ರಸಾದ್ ಮಾತನಾಡಲು ಮುಂದಾದಾಗ, ಸಭಾಪತಿ ಪೀಠದಲ್ಲಿದ್ದ ಎಂ.ಕೆ.ಪ್ರಾಣೇಶ್, ಅವಕಾಶ ನೀಡಲಿಲ್ಲ. ಆಗ ಕೆರಳಿದ ಹರಿಪ್ರಸಾದ್, 'ನೀವು ಅವರ ಪರವಾಗಿದ್ದೀರಿ' ಎಂದರು. ಇಬ್ಬರ ಮಧ್ಯೆ ವಾಗ್ವಾದ ನಡೆಯಿತು.



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಂಡ್ಯದಲ್ಲಿ ಮಂಗಳವಾರ ನಡೆದ 'ಕನ್ನಡಕ್ಕಾಗಿ ಓಡು' ಮ್ಯಾರಥಾನ್‌ನಲ್ಲಿ ಜಿಲ್ಲಾಧಿಕಾರಿ ಕುಮಾರ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಸಚಿವ ಎನ್‌.ಚಲುವರಾಯಸ್ವಾಮಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಪಾಲ್ಗೊಂಡಿದ್ದರು

'ಕನ್ನಡಕ್ಕಾಗಿ ಓಡು' ಮ್ಯಾರಥಾನ್‌ನಲ್ಲಿ ಪಾಲ್ಗೊಂಡ ಚಿತ್ರನಟರು

'ಕನ್ನಡ ಸಾಹಿತ್ಯ, ಸಿನಿಮಾ ಪ್ರೋತ್ಸಾಹಿಸಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಯುವಜನರ ಜೋಶ್ ಸಿಕ್ಕಿದೆ. ಕನ್ನಡವನ್ನೇ ಉಸಿರಾಗಿಸಿಕೊಂಡ ನೀವೆಲ್ಲರೂ, ಈ ಆಚರಣೆಯನ್ನು ನಿತ್ಯೋತ್ಸವವನ್ನಾಗಿಸಿ. ಕನ್ನಡ ಸಾಹಿತ್ಯ ಮತ್ತು ಸಿನಿಮಾಗಳನ್ನು ಪ್ರೋತ್ಸಾಹಿಸಿ. ಕವಿಗಳ ಕಾವ್ಯಗಳನ್ನು ಓದುವುದೇ ಒಂದು ಖುಷಿ. ಕನ್ನಡದ ದೀಪ ಎಲ್ಲೆಡೆ ಬೆಳಗಲಿ' ಎಂದು ಚಿತ್ರನಟ ಡಾಲಿ ಧನಂಜಯ ಹೇಳಿದರು.

'ಕನ್ನಡಕ್ಕಾಗಿ ಓಡು' ಮ್ಯಾರಥಾನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯುವಜನರನ್ನು ಹುರಿದುಂಬಿಸಿದರು.

'ಕನ್ನಡ ಹಬ್ಬದಲ್ಲಿ ಎಲ್ಲರೂ ಪಾಲ್ಗೊಳ್ಳಿ. ಯುವಜನರಿದ್ದಾಗ ಮಾತ್ರ ಅಲ್ಲಿ ಸಂಭ್ರಮವಿರುತ್ತದೆ. ಕನ್ನಡ ಭಾಷಾ ಬೆಳವಣಿಗೆಗೆ ಇಂಥ ಸಮ್ಮೇಳನ, ಕಾರ್ಯಕ್ರಮಗಳು ಪೂರಕ' ಎಂದರು.

ಕ್ರೀಡಾಂಗಣದಿಂದ ಸ್ಯಾಂಜೋ ಆಸ್ಪತ್ರೆ ಸಮೀಪದ ಸಮ್ಮೇಳನದ ವೇದಿಕೆ ಸ್ಥಳದವರೆಗೆ 6 ಕಿ.ಮೀ. ಓಟದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಧನಂಜಯ ಅವರೊಂದಿಗೆ ನಿನಾಸಂ ಸತೀಶ್, ಸಪ್ತಮಿಗೌಡ, ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರವಿಕುಮಾರ್, ಎಡಿಜಿಪಿ ಅಲೋಕ್‌ಕುಮಾರ್ ಅವರೂ ಪಾಲ್ಗೊಂಡು ಸ್ಫೂರ್ತಿ ತುಂಬಿದರು.

ಓಟದಲ್ಲಿ ಪಾಲ್ಗೊಂಡವರಿಗೆ ಉಚಿತವಾಗಿ ಟೀ-ಶರ್ಟ್ ನೀಡಲಾಯಿತು. ದಾರಿ ಮಧ್ಯೆ ನೀರು, ಬಿಸ್ಕತ್ ಹಾಗೂ ಕೊನೆಯಲ್ಲಿ ಎಲ್ಲರಿಗೂ ಉಪಾಹಾರ ನೀಡಲಾಯಿತು. ಆದಿಚುಂಚನಗಿರಿ ಮಠದ ನಿರ್ಮಲಾನಂದಶ್ರೀ, ಗೌರಿಗದ್ದೆ ವಿನಯ್ ಗುರೂಜಿ, ಐಜಿಪಿ ಬಿ.ಆರ್.ರವಿಕಾಂತೇಗೌಡ, ಜಿಲ್ಲಾಧಿಕಾರಿ ಕುಮಾರ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಸಮ್ಮೇಳನ ಸಂಚಾಲಕಿ ಮೀರಾ ಶಿವಲಿಂಗಯ್ಯ ಪಾಲ್ಗೊಂಡಿದ್ದರು.

ವಿಧಾನಸಭೆಯಲ್ಲಿ ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಪ್ರತಿಪಾದನೆ

ಉ.ಕ. ಅಭಿವೃದ್ಧಿಗೆ ಪಕ್ಷಾತೀತ ಹೋರಾಟ ಅಗತ್ಯ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಸಂಪೂರ್ಣವಾಗಿ ದಕ್ಷಿಣ ಕರ್ನಾಟಕವನ್ನು ಕೇಂದ್ರೀಕರಿಸಿವೆ. ಉತ್ತರ ಕರ್ನಾಟಕ ಕೇಂದ್ರಿತ ಅಭಿವೃದ್ಧಿ ಯೋಜನೆಗಳಿಗಾಗಿ ಪಕ್ಷಾತೀತವಾಗಿ, ಜಾತ್ಯತೀತವಾಗಿ ಪ್ರಬಲ ಹೋರಾಟ ನಡೆಸುವ ಅಗತ್ಯವಿದೆ' ಎಂದು ಕಾಂಗ್ರೆಸ್‌ನ ಪ್ರಕಾಶ್ ಕೋಳಿವಾಡ ಅವರು ವಿಧಾನಸಭೆಯಲ್ಲಿ ಮಂಗಳವಾರ ಪ್ರತಿಪಾದಿಸಿದರು.

ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಎಲ್ಲ ಯೋಜನೆಗಳಿಂದಲೂ ದಕ್ಷಿಣ ಕರ್ನಾಟಕಕ್ಕೆ ಹೆಚ್ಚು ಲಾಭವಾಗುತ್ತಿದೆ. ಉತ್ತರ ಕರ್ನಾಟಕದ ಅಭಿವೃದ್ಧಿ ಕುಂಠಿತವಾಗಿದೆ. ಈ ಪರಿಸ್ಥಿತಿ ಬದಲಾಗಬೇಕಾದರೆ ಅಭಿವೃದ್ಧಿಯ ಪರಿಕಲ್ಪನೆಯೇ ಬದಲಾಗಬೇಕು. ದಕ್ಷಿಣ ಕರ್ನಾಟಕದ ಜನಪ್ರತಿನಿಧಿಗಳ ಮಾದರಿಯಲ್ಲಿ ನಾವೂ ಸಂಘಟಿತ ಪ್ರಯತ್ನ ನಡೆಸಬೇಕು' ಎಂದರು.

ನಿವ್ವಳ ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆ ನೀಡುವುದರಲ್ಲಿ ಮೊದಲ ಹತ್ತು ಜಿಲ್ಲೆಗಳು ದಕ್ಷಿಣ ಕರ್ನಾಟಕದಲ್ಲಿದ್ದರೆ, ಕಡೆಯ ಹತ್ತು ಜಿಲ್ಲೆಗಳು ಉತ್ತರ ಕರ್ನಾಟಕದಲ್ಲಿವೆ. ಸಾರ್ವಜನಿಕ ಉದ್ದಿಮೆಗಳು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಲ್ಲವೂ ದಕ್ಷಿಣ ಕರ್ನಾಟಕದಲ್ಲೇ ಇವೆ. ಇನ್ನು ಮುಂದಾದರೂ ಈ ಪರಿಸ್ಥಿತಿ ಬದಲಾವಣೆ ಆಗಬೇಕು ಎಂದು ಹೇಳಿದರು.

ಬೆಳಗಾವಿಯಲ್ಲಿ ಮೂರು ಖಾಸಗಿ ಎಪಿಎಂಸಿಗಳು ಬಂದಿವೆ. ತಕ್ಷಣ ಕಾಯ್ದೆಯನ್ನು ಹಿಂಪಡೆದು ಖಾಸಗಿ ಎಪಿಎಂಸಿಗಳನ್ನು ರದ್ದುಪಡಿಸಬೇಕು

ದರ್ಶನ್ ಪುಟ್ಟಣ್ಣಯ್ಯ
ಸರ್ವೋದಯ ಕರ್ನಾಟಕ ಪಕ್ಷದ ಸದಸ್ಯ

ಗೋವಾ, ಮಹಾರಾಷ್ಟ್ರ, ಕೇಂದ್ರ ಮೂರೂ ಕಡೆ ಬಿಜೆಪಿ ಸರ್ಕಾರಗಳಿವೆ. ಈಗಲಾದರೂ ಬಿಜೆಪಿಯವರು ಕಳಸಾ–ಬಂಡೂರಿ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ಕೊಡಿಸಬೇಕು

ಯಾಸೀರ್ ಅಹಮದ್ ಪಠಾಣ್
ಕಾಂಗ್ರೆಸ್ ಸದಸ್ಯ

ಬಿಜೆಪಿಯ ಬಿ.ವೈ. ವಿಜಯೇಂದ್ರ ಮಾತನಾಡಿ, 'ತೊಗರಿ ಬೆಳೆ ನಾಶದಿಂದ ಸಂಕಷ್ಟದಲ್ಲಿರುವ ಮೂರು ಲಕ್ಷ ರೈತರಿಗೆ ಪರಿಹಾರ ನೀಡಬೇಕು. ಕಾಂಗ್ರೆಸ್ ಪಕ್ಷವು ಚುನಾವಣೆಗೂ ಮೊದಲು ಕೊಟ್ಟಿದ್ದ ಭರವಸೆಯಂತೆ ಪ್ರತಿ ವರ್ಷ ₹40,000 ಕೋಟಿಯನ್ನು ಒದಗಿಸಿ, ಕಾಲಮಿತಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಬೇಕು' ಎಂದು ಆಗ್ರಹಿಸಿದರು.

'ಶಿಕ್ಷಕರ ಕೊರತೆ ನಿವಾರಣೆಗೆ ಆದ್ಯತೆ ನೀಡಬೇಕು. ಅಂತರ್ಜಲ ಮಟ್ಟ ಹೆಚ್ಚಳಕ್ಕೆ ಪೂರಕವಾಗಿ ವಿಶೇಷ ಯೋಜನೆ ರೂಪಿಸಬೇಕು. ಅರಣ್ಯ ಉತ್ಪನ್ನಗಳ ಮೂಲಕ ವರಮಾನ ಗಳಿಸುವ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕು' ಎಂದು ಕಾಂಗ್ರೆಸ್‌ನ ಬಿ.ಆರ್. ಪಾಟೀಲ ಸಲಹೆ ನೀಡಿದರು.

ಬಿಜೆಪಿಯ ಡಾ. ಅವಿನಾಶ್ ಜಾಧವ್ ಮಾತನಾಡಿ, 'ಕಲಬುರಗಿಯ ತೊಗರಿ ಬೇಳೆಗೆ ಜಿಐ ಟ್ಯಾಗ್ ದೊರಕಿದೆ. ವಿಶೇಷ ಗುಣಮಟ್ಟ ಹೊಂದಿರುವ ಕಲಬುರಗಿ ತೊಗರಿ ಬೇಳೆಗೆ ನೀಡುತ್ತಿರುವ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಳ ಮಾಡಬೇಕು' ಎಂದು ಒತ್ತಾಯಿಸಿದರು.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪೂರಕವಾಗಿ ಕೈಗಾರಿಕಾ ನೀತಿ ರೂಪಿಸುವಂತೆ ಬಿಜೆಪಿಯ ಮಹೇಶ್ ಟೆಂಗಿನಕಾಯಿ ಆಗ್ರಹಿಸಿದರೆ, ಕೃಷಿ ಜಮೀನಿನಲ್ಲಿ ಸವಳು–ಜವಳು ಸಮಸ್ಯೆ ಪರಿಹಾರಕ್ಕೆ ರೈತರಿಗೆ ನೆರವು ನೀಡಲು ವಿಶೇಷ ಯೋಜನೆ ರೂಪಿಸುವಂತೆ ಕಾಂಗ್ರೆಸ್‌ನ ರಾಜು ಕಾಗೆ ಸಲಹೆ ನೀಡಿದರು.

ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ 20 ಕೆರೆ ತುಂಬುವ ಯೋಜನೆಯಲ್ಲಿ ಕೆಲಸ ಮಾಡದೇ ₹115 ಕೋಟಿ ಬಿಲ್ ಪಾವತಿಸಿದ್ದು, ಈ ಬಗ್ಗೆ ತನಿಖೆ ನಡೆಸಬೇಕು ಎಂದು ಬಿಜೆಪಿಯ ಡಾ. ಚಂದ್ರು ಲಮಾಣಿ ಒತ್ತಾಯಿಸಿದರು. ಕಾಂಗ್ರೆಸ್‌ನ ಜಿ.ಟಿ. ಪಾಟೀಲ, ಅಶೋಕ ಮನಗೂಳಿ, ಬಸನಗೌಡ ದದ್ದಲ್, ವೇಣುಗೋಪಾಲ ನಾಯಕ, ಬಿಜೆಪಿಯ ಬಸವರಾಜ ಮತ್ತಿಮೋಡ್, ಕೃಷ್ಣಾ ನಾಯ್ಕ್, ಜೆಡಿಎಸ್‌ನ ಕರೆಮ್ಮ ಜಿ. ನಾಯಕ ಸೇರಿದಂತೆ ಹಲವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಮಾದರಿಯಲ್ಲಿ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಬೇಕು ಮತ್ತು ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡಬೇಕು ಎಂಬ ಆಗ್ರಹ ಕೇಳಿಬಂತು.

ಅಂಬೇಡ್ಕರ್ ಭೇಟಿ ಶತಮಾನೋತ್ಸವ ಆಚರಣೆಗೆ ಆಗ್ರಹ

'ಮಹಾತ್ಮ ಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ 100 ವರ್ಷ ಆಗುತ್ತಿರುವುದಕ್ಕಾಗಿ ವಿಶೇಷ ಅಧಿವೇಶನ ನಡೆಸಲಾಗುತ್ತಿದೆ. ಅದೇ ರೀತಿ 1924ರ ಡಿಸೆಂಬರ್ 26ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ನಿಪ್ಪಾಣಿಗೆ ಭೇಟಿ ನೀಡಿ, ಎರಡು ದಿನ ಅಲ್ಲಿನ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು. ಅಂಬೇಡ್ಕರ್ ಭೇಟಿಯ ಶತಮಾನೋತ್ಸವದ ಆಚರಣೆಗೂ ಕಾರ್ಯಕ್ರಮ ನಡೆಸಬೇಕು' ಎಂದು ಬಿಜೆಪಿಯ ಶಶಿಕಲಾ ಜೊಲ್ಲೆ ಆಗ್ರಹಿಸಿದರು.

'ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬೇಕು'

'ಉತ್ತರ ಕನ್ನಡ ಜಿಲ್ಲೆ ದೇಶಕ್ಕಾಗಿ ಹಲವು ತ್ಯಾಗ ಮಾಡಿದೆ. ಆದರೆ, ನಾವು ಯಾವ ಕರ್ನಾಟಕದಲ್ಲೂ ಇಲ್ಲ. ನಮ್ಮ ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಬೇಕೆಂಬ ಬೇಡಿಕೆಗೆ ಸರ್ಕಾರ ಸ್ಪಂದಿಸಿಲ್ಲ. ಆದಷ್ಟು ಬೇಗ ಆಸ್ಪತ್ರೆ ಆರಂಭಿಸಿ' ಎಂದು ಬಿಜೆಪಿಯ ದಿನಕರ ಶೆಟ್ಟಿ ಮತ್ತು ಕಾಂಗ್ರೆಸ್‌ನ ಭೀಮಣ್ಣ ನಾಯ್ಕ ಆಗ್ರಹಿಸಿದರು.

ಇ.ಡಿ. ಕ್ರಮದ ಕುರಿತು ಸಚಿವೆ ನಿರ್ಮಲಾ ಸೀತಾರಾಮನ್ ವಿವರಣೆ

₹22,280 ಕೋಟಿ ಮೌಲ್ಯದ ಆಸ್ತಿ ವಾಪಸ್

ಮುಖ್ಯಾಂಶಗಳು

- ಪಿಎಂಎಲ್‌ಎ: 163 ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್
- ವಿದೇಶಗಳಲ್ಲಿ ಸ್ವತ್ತು: 120 ಪ್ರಕರಣಗಳಲ್ಲಿ ಕ್ರಮ
- ತನಿಖೆ ಚುರುಕುಗೊಳಿಸಲು 'ಬಹು ಸಂಸ್ಥೆಗಳ ಗುಂಪು' ರಚನೆ

ನವದೆಹಲಿ (ಪಿಟಿಐ): 'ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದ್ದ ₹22,280 ಕೋಟಿ ಮೌಲ್ಯದ ಆಸ್ತಿಯನ್ನು ಕಾನೂನುಬದ್ಧ ಹಕ್ಕುದಾರರಿಗೆ ಹಿಂದಿರುಗಿಸಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪೂರಕ ಅಂದಾಜುಗಳ ಮೇಲಿನ ಚರ್ಚೆ ವೇಳೆ ಈ ಮಾಹಿತಿ ನೀಡಿದ ಅವರು, 'ಆರ್ಥಿಕ ಅಪರಾಧಗಳನ್ನು ಎಸಗುವವರ ವಿರುದ್ಧದ ಹೋರಾಟ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿದರು.

'ದೇಶದಿಂದ ಪಲಾಯನ ಮಾಡಿರುವ ಉದ್ಯಮಿ ವಿಜಯ್ ಮಲ್ಯಗೆ ಸೇರಿದ ₹14,131.6 ಕೋಟಿ ಆಸ್ತಿಯನ್ನು ಸಾರ್ವಜನಿಕ ಸ್ವಾಮ್ಯದ ಬ್ಯಾಂಕ್‌ಗಳಿಗೆ ಹಿಂದಿರುಗಿಸಲಾಗಿದೆ. ದೇಶಭ್ರಷ್ಟ ವಜ್ರವ್ಯಾಪಾರಿ ನೀರವ್ ಮೋದಿಗೆ ಸೇರಿದ ₹1,052.58 ಕೋಟಿ ಆಸ್ತಿಯನ್ನು ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್, ಇತರೆ ಖಾಸಗಿ ಬ್ಯಾಂಕ್‌ಗಳಿಗೆ ಹಿಂದಿರುಗಿಸಲಾಗಿದೆ. ಮೆಹುಲ್ ಚೋಕ್ಸಿ ಪ್ರಕರಣದಲ್ಲಿ ₹2,562.90 ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆದಿದ್ದು, ಸದ್ಯದಲ್ಲೇ ಹರಾಜು ಹಾಕಲಾಗುವುದು' ಎಂದು ವಿವರಿಸಿದರು.

'ನ್ಯಾಷನಲ್ ಸ್ಪಾಟ್ ಎಕ್ಸ್‌ಚೇಂಜ್ ಲಿಮಿಟೆಡ್ (ಎನ್‌ಎಸ್‌ಇಎಲ್) ಪ್ರಕರಣದಲ್ಲಿ ವಂಚನೆಗೆ ಒಳಗಾದ ನೈಜ ಹೂಡಿಕೆದಾರರಿಗೆ ₹17.47 ಕೋಟಿ ವಾಪಸ್ ಮಾಡಲಾಗಿದೆ' ಎಂದೂ ತಿಳಿಸಿದರು.

'ಪ್ರಮುಖ ಪ್ರಕರಣಗಳಲ್ಲಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯವು ₹22,280 ಕೋಟಿ ಮೊತ್ತದ ಆಸ್ತಿಯನ್ನು ವಾಪಸ್ ನೀಡಿದೆ. ಯಾರನ್ನೂ ನಾವು ಸುಮ್ಮನೆ ಬಿಟ್ಟಿಲ್ಲ. ಒಂದೊಮ್ಮೆ ಅವರು ದೇಶ ಬಿಟ್ಟು ಹೋಗಿದ್ದರೂ, ಅವರ ಆಸ್ತಿಯನ್ನು ವಶಕ್ಕೆ ಪಡೆದುಕೊಂಡು ಬ್ಯಾಂಕ್‌ಗಳಿಗೆ ಹಿಂತಿರುಗಿಸಿದ್ದೇವೆ' ಎಂದು ವಿವರಿಸಿದರು.

'ಆರ್ಥಿಕ ಅಪರಾಧವೆಸಗಿದ ಯಾರನ್ನೂ ಬಿಟ್ಟಿಲ್ಲ. ಹಣವನ್ನು ಮರಳಿ ವಶಕ್ಕೆ ಪಡೆದು, ಬ್ಯಾಂಕ್‌ಗಳಿಗೆ ನೀಡಿದ್ದೇವೆ' ಎಂದರು.

'ಕಪ್ಪು ಹಣ ಕಾಯ್ದೆ -2015 ಕಾಯ್ದೆ ಜಾರಿ ಬಳಿಕ ವಿದೇಶದಲ್ಲಿ ಆಸ್ತಿ ಹೊಂದಿರುವವರು ಅವರಾಗಿಯೇ ತಮ್ಮ ಆಸ್ತಿ ಕುರಿತು ಮಾಹಿತಿ ಬಹಿರಂಗಪಡಿಸಲು ಮುಂದೆ ಬಂದಿದ್ದಾರೆ' ಎಂದು ಹೇಳಿದರು.

ಈ ಕಾಯ್ದೆಯ ಅಡಿ, ಕಳೆದ ಜೂನ್‌ಗೆ ಅಂತ್ಯಗೊಂಡಂತೆ, 687 ಪ್ರಕರಣಗಳನ್ನು ದಾಖಲಿಸಲಾಗಿದ್ದು, 163 ಪ್ರಕರಣಗಳ ಕುರಿತು ಕಾನೂನು ಕ್ರಮ ನಡೆಯುತ್ತಿದೆ ಎಂದೂ ಅವರು ಮಾಹಿತಿ ನೀಡಿದರು.

ಲೆಕ್ಕಪತ್ರ ಇಲ್ಲದ ಹಾಗೂ ಬಹಿರಂಗಪಡಿಸದೇ ಇರುವ ವಿದೇಶ ಸ್ವತ್ತುಗಳ ವಿಚಾರವಾಗಿಯೂ ಸರ್ಕಾರ ಕ್ರಮ ಕೈಗೊಂಡಿದೆ. ಪನಾಮಾ ಪೇಪರ್ಸ್, ಪ್ಯಾರಡೈಸ್ ಪೇಪರ್ಸ್, ಎಚ್‌ಎಸ್‌ಬಿಸಿ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ಪಡೆದ ಮಾಹಿತಿ ಆಧರಿಸಿ, 120 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದೂ ಹೇಳಿದರು.

'ವಿದೇಶಗಳಲ್ಲಿ ಹೊಂದಿರುವ ಸ್ವತ್ತುಗಳ ಕುರಿತು 2021ರಲ್ಲಿ 60,467 ತೆರಿಗೆದಾರರು ಮಾಹಿತಿ ಬಹಿರಂಗಪಡಿಸಿದ್ದರು. 2024–25ರಲ್ಲಿ ಇಂತಹವರ ಸಂಖ್ಯೆ 2 ಲಕ್ಷಕ್ಕೆ ಏರಿಕೆಯಾಗಿದೆ' ಎಂದು ಅವರು ಸದನಕ್ಕೆ ವಿವರಿಸಿದರು.

ಅತಿವೇಗದ ಸ್ಕೇಟಿಂಗ್: ಯುವಕ ಬಂಧನ

ತಿರುವನಂತಪುರ: ಮುಂಬೈನಿಂದ ಕೇರಳದವರೆಗೂ ಅತ್ಯಂತ ವೇಗವಾಗಿ ಸ್ಕೇಟಿಂಗ್ ಮಾಡಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಸಾರ್ವಜನಿಕರ ಜೀವಕ್ಕೆ ಅಪಾಯ ತಂದೊಡ್ಡಿದ ಕಾರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಪಶ್ಚಿಮ ಬಂಗಾಳದ ಸುಬ್ರತೋ ಮಂಡಲ್ ಮುಂಬೈನಲ್ಲಿ ನೆಲೆಸಿದ್ದಾರೆ. ಸುಬ್ರತೋ ಅವರು, ಆರು ದಿನದ ಹಿಂದೆ ಮುಂಬೈನಿಂದ ಸ್ಕೇಟಿಂಗ್ ಆರಂಭಿಸಿ, 1,300 ಕಿ.ಮೀ ದೂರ ಕ್ರಮಿಸಿ ಕೇರಳದ ತ್ರಿಶ್ಶೂರ್‌ನಲ್ಲಿ ತಮ್ಮ ಸಹೋದರನನ್ನು ಭೇಟಿಯಾಗಿದ್ದರು. 'ಮಾರ್ಗದ ಮಧ್ಯೆ ವಾಹನಕ್ಕಿಂತಲೂ ವೇಗದಲ್ಲಿ ಸ್ಕೇಟಿಂಗ್ ಮಾಡಿದ್ದೇನೆ' ಎಂದು ಸುಬ್ರತೋ ಹೇಳಿಕೊಂಡಿದ್ದರು.

'ನಗರದ ರಸ್ತೆಯಲ್ಲಿ ಅತ್ಯಂತ ವೇಗವಾಗಿ ಯುವಕನೊಬ್ಬ ಸ್ಕೇಟಿಂಗ್ ಮಾಡುತ್ತಿರುವ ಕುರಿತು ದೂರು ಬಂದಿತ್ತು. ಮಂಗಳವಾರ ಬಂಧಿಸಲಾಗಿದೆ' ಎಂದು ತ್ರಿಶ್ಶೂರ್ ಪೂರ್ವ ಠಾಣೆಯ ಇನ್‌ಸ್ಪೆಕ್ಟರ್ ಜಿಜೊ ತಿಳಿಸಿದರು.

'ಪುಷ್ಪ–2' ಸಿನಿಮಾ ಪ್ರದರ್ಶನದ ವೇಳೆ ನೂಕುನುಗ್ಗಲು

ಚಿತ್ರಮಂದಿರ ಆಡಳಿತಕ್ಕೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಪುಷ್ಪ -2' ಚಿತ್ರ ಪ್ರದರ್ಶನದ ವೇಳೆ ನೂಕುನುಗ್ಗಲು ಸಂಭವಿಸಿದ್ದ ಪ್ರಕರಣದ ಸಂಬಂಧ ಇಲ್ಲಿನ 'ಸಂಧ್ಯಾ 70 ಎಂಎಂ' ಚಿತ್ರಮಂದಿರದ ಆಡಳಿತವರ್ಗಕ್ಕೆ ಪೊಲೀಸರು ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

'ಸುರಕ್ಷತಾ ಕ್ರಮ ಕೈಗೊಳ್ಳದೆ ಇರುವ ಕಾರಣಕ್ಕೆ ಏಕೆ ಲೈಸೆನ್ಸ್ ರದ್ದುಪಡಿಸಬಾರದು' ಎಂದು ಪೊಲೀಸರು ನೋಟಿಸ್ ಮೂಲಕ ಪ್ರಶ್ನಿಸಿದ್ದಾರೆ.

ಡಿಸೆಂಬರ್ 4ರಂದು ಚಿತ್ರ ವೀಕ್ಷಣೆಗೆ ನಟ ಅಲ್ಲು ಅರ್ಜುನ್ ಹೋಗಿದ್ದರು. ಆಗ ಹೆಚ್ಚಿನ ಪ್ರೇಕ್ಷಕರು ಸೇರಿದ್ದರು. ಚಿತ್ರ ಪ್ರದರ್ಶನದ ವೇಳೆ ನೂಕುನುಗ್ಗಲು ಸಂಭವಿಸಿತ್ತು. ಈ ಗೊಂದಲದಲ್ಲಿ ಮಹಿಳೆ ಮೃತಪಟ್ಟಿದ್ದು, ಆಕೆಯ ಪುತ್ರ ಗಾಯಗೊಂಡಿದ್ದರು. ಈಚೆಗೆ ಈ ಸಂಬಂಧ ಪೊಲೀಸರು ನಟ ಅಲ್ಲು ಅರ್ಜುನ್ ಅವರನ್ನೂ ಬಂಧಿಸಿದ್ದರು. ನಂತರ, ಅಲ್ಲು ಅರ್ಜುನ್ ಅವರಿಗೆ ಜಾಮೀನು ಸಿಕ್ಕಿದೆ.


ಚಿತ್ರಮಂದಿರದ ಆಡಳಿತ ವರ್ಗಕ್ಕೆ ಕೆಲವು ದಿನಗಳ ಹಿಂದೆ ಎರಡು ಪುಟಗಳ ನೋಟಿಸ್ ನೀಡಲಾಗಿದ್ದು, ಮಂಗಳವಾರ ಈ ವಿಷಯ ಬಯಲಾಗಿದೆ. ನೋಟಿಸ್‌ನಲ್ಲಿ ಪೊಲೀಸರು ಒಟ್ಟು 11 ತಪ್ಪುಗಳನ್ನು ಪಟ್ಟಿ ಮಾಡಿದ್ದಾರೆ.

ಚಿತ್ರಮಂದಿರದಲ್ಲಿ ಮೂಲಸೌಕರ್ಯ ತೃಪ್ತಿದಾಯಕವಾಗಿಲ್ಲ. ಬಾಲ್ಕನಿಯ ಪ್ರವೇಶ ದ್ವಾರದ ಗ್ರಿಲ್ ಸರಿಯಾದ ಕ್ರಮದಲ್ಲಿ ಇಲ್ಲ. ಹೆಚ್ಚಿನ ಜನರ ಒತ್ತಡದಿಂದ ಅದು ಜಖಂಗೊಂಡಿದೆ. ಆ ದಿನ ನಟನ ಭೇಟಿ ಕುರಿತು ಆಡಳಿತ ವರ್ಗವು ಪೊಲೀಸರಿಗೆ ಮಾಹಿತಿ ನೀಡಿಲ್ಲ. ಚಿತ್ರದ ಪ್ರಮುಖ ತಾರಾ ಬಳಗಕ್ಕೆ ಪ್ರತ್ಯೇಕ ಆಗಮನ, ನಿರ್ಗಮನ ಸ್ಥಳ, ಆಸನ ವ್ಯವಸ್ಥೆ ಮಾಡಿರಲಿಲ್ಲ. ನಟನ ಜೊತೆಗೆ ಅವರ ಖಾಸಗಿ ಭದ್ರತಾ ಸಿಬ್ಬಂದಿಗೂ ಪ್ರವೇಶ ಕಲ್ಪಿಸಲಾಗಿದೆ. ಇದೇ ಆ ದಿನ ಗೊಂದಲಕ್ಕೆ ಕಾರಣವಾಗಿದೆ ಎಂಬುದು ಇದರಲ್ಲಿ ಸೇರಿವೆ.

ಜನರ ಒತ್ತಡ ನಿಭಾಯಿಸಲು ಹೆಚ್ಚುವರಿ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ನಟನ ಖಾಸಗಿ ಭದ್ರತಾ ಸಿಬ್ಬಂದಿಯು ಜನರನ್ನು ತಳ್ಳಿದ್ದಾರೆ. ಇದರಿಂದಾಗಿ ಗೊಂದಲ ಶುರುವಾಗಿದೆ. ಇದರ ಅನುಕೂಲ ಪಡೆದು ಇನ್ನಷ್ಟು ಜನರು ಚಿತ್ರಮಂದಿರದ ಒಳಗೆ ಪ್ರವೇಶಿಸಿದ್ದಾರೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

ಡಿಸೆಂಬರ್ 4ರಂದು ನಡೆದಿದ್ದ ನೂಕುನುಗ್ಗಲಿನಲ್ಲಿ ಸ್ಥಳೀಯ ಮಹಿಳೆ ರೇವತಿ ಎಂಬವರು ಮೃತಪಟ್ಟಿದ್ದರೆ ಆಕೆಯ ಪುತ್ರ ಶ್ರೀತೇಜ್ ಗಾಯಗೊಂಡಿದ್ದರು. ಪೊಲೀಸರೇ ಇವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು ಎಂದು ಹೇಳಿದ್ದಾರೆ.


ಷೇರುಪೇಟೆ ವಹಿವಾಟು 1,064



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,668
ಇಂದಿನ ಅಂತ್ಯ	24,336
▼	332
ದಿನದ ಕನಿಷ್ಠ	24,320

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹615
12 ಕ್ಕೆ	₹80
ಮೈಸೂರು	
100ಕ್ಕೆ	₹615

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹335-626

ದ್ವಿತಳಿ (ಬಿ.ವಿ) ₹291-750

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹187

ಆರ್‌ಎಸ್‌ಎಸ್-5 ₹182

ಗುಡ್ ಲಾಟ್ ₹177

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹22750
ಎಸಿ	₹11560
ಆರ್‌ಪಿ	₹19000
ಆರ್‌ಸಿ	₹10790

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಸಾಗರ		ರಾಶಿ	27000-50300
ಚಾಲಿ	33169-37019	ಚಾಲಿ	33211-33811	ಸರಕು	44659-82109
ಚಿಪ್ಪು	18099-26299	ಕೋಕ	8299-8299	ಸಿದ್ದಾಪುರ	
ಕೋಕ	6099-22569	ಕೆಂಪುಗೋಟು	26000-26786	ಬಿಳಿಗೋಟು	10000-27599
ಹಳೆಚಾಲಿ	37089-39499	ರಾಶಿ	45009-48449	ಚಾಲಿ	32669-37201
ಹೊಸಚಾಲಿ	23569-27599	ಸಿಪ್ಪೆಗೋಟು	16089-16589	ಕೋಕ	9700-22899
ಪುತ್ತೂರು		ಶಿವಮೊಗ್ಗ		ಕೆಂಪುಗೋಟು	2689-21312
ಕೋಕ	22000-28500	ಬೆಟ್ಟೆ	42159-57399	ರಾಶಿ	39099-47809
ಹೊಸತು	25000-33500	ಗೊರಬಲು	17100-33000	ತಟ್ಟಬೆಟ್ಟೆ	25812-39499
ಹಳತು	36000-48500	ಹೊಸತು	36009-49699		

ಸಕ್ಕರೆ ಉತ್ಪಾದನೆ ಶೇ 17ರಷ್ಟು ಕುಸಿತ

ನವದೆಹಲಿ (ಪಿಟಿಐ): 2024–25ನೇ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಇಲ್ಲಿಯವರೆಗೆ ದೇಶದ ಸಕ್ಕರೆ ಉತ್ಪಾದನೆಯಲ್ಲಿ ಶೇ 17ರಷ್ಟು ಕುಸಿತವಾಗಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ತಿಳಿಸಿದೆ.

ಅಕ್ಟೋಬರ್‌ನಿಂದ ಮಾರುಕಟ್ಟೆ ವರ್ಷ ಶುರುವಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 74.05 ಲಕ್ಷ ಟನ್ ಉತ್ಪಾದನೆಯಾಗಿತ್ತು. ಈಗ 61.39 ಲಕ್ಷ ಟನ್ ಉತ್ಪಾದನೆಯಾಗಿದೆ ಎಂದು ವಿವರಿಸಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಅರೆಯುವಿಕೆಯು 7ರಿಂದ 12 ದಿನ ವಿಳಂಬವಾಗಿದೆ.

ಮಹಾರಾಷ್ಟ್ರದಲ್ಲಿ 15ರಿಂದ 20 ದಿನ ತಡವಾಗಿದೆ. ಇದೇ ಉತ್ಪಾದನೆ ಕುಸಿತಕ್ಕೆ ಕಾರಣ ಎಂದು ಹೇಳಿದೆ.

ಉತ್ತರ ಪ್ರದೇಶದಲ್ಲಷ್ಟೇ ಉತ್ಪಾದನೆಯಲ್ಲಿ ಏರಿಕೆಯಾಗಿದೆ. ಒಟ್ಟು 23.04 ಲಕ್ಷ ಟನ್ ಉತ್ಪಾದನೆಯಾಗಿದೆ. ಮಹಾರಾಷ್ಟ್ರದಲ್ಲಿ 16.78 ಲಕ್ಷ ಟನ್ ಮತ್ತು ಕರ್ನಾಟಕದಲ್ಲಿ 13.85 ಲಕ್ಷ ಟನ್ ಉತ್ಪಾದನೆಯಾಗಿದೆ.

ಕಳೆದ ವರ್ಷ ಕಬ್ಬಿನ ಹಾಲು ಹಾಗೂ ಮೊಲಾಸಿಸ್–ಬಿ (ಕಾಕಂಬಿ) ಬಳಸಿ ಎಥೆನಾಲ್ ತಯಾರಿಕೆಗೆ 21.5 ಲಕ್ಷ ಟನ್ ಸಕ್ಕರೆ ಬಳಸಲು ಮಿತಿ ನಿಗದಿಪಡಿಸಲಾಗಿತ್ತು. ಈ ಬಾರಿ 40 ಲಕ್ಷ ಟನ್ ಬಳಕೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ವಿಶ್ವಾಸ

‘ಜಿಡಿಪಿ ಏರಿಕೆ ನಿರೀಕ್ಷೆ’

ನವದೆಹಲಿ (ಪಿಟಿಐ): ‘2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ನಿರೀಕ್ಷೆಗಿಂತಲೂ ಶೇ 5.4ರಷ್ಟು ಕಡಿಮೆ ದಾಖಲಾಗಿದೆ. ಇದು ಅಲ್ಪ ಪ್ರಮಾಣದ ಕುಸಿತವಷ್ಟೇ. ಮುಂಬರುವ ತ್ರೈಮಾಸಿಕಗಳಲ್ಲಿ ಉತ್ತಮ ಪ್ರಗತಿ ಕಾಣಲಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪೂರಕ ಬೇಡಿಕೆಗಳ ಕುರಿತ ಅನುದಾನದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ‘ಭಾರತದ ಜಿಡಿಪಿ ಬೆಳವಣಿಗೆಯು ಸ್ಥಿರವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸರಾಸರಿ ಜಿಡಿಪಿ ಶೇ 8.3ರಷ್ಟು ದಾಖಲಾಗಿರುವುದೇ ಇದಕ್ಕೆ ಸಾಕ್ಷಿ’ ಎಂದರು.

ಮೊದಲ ತ್ರೈಮಾಸಿಕದಲ್ಲಿ ಶೇ 6.7 ಹಾಗೂ ಎರಡನೇ ತ್ರೈಮಾಸಿಕದಲ್ಲಿ ಶೇ 5.4ರಷ್ಟು ದಾಖಲಾಗಿದೆ. ಎರಡನೇ ತ್ರೈಮಾಸಿಕದಲ್ಲಿನ ಬೆಳವಣಿಗೆಯು ಸವಾಲಿನಿಂದ ಕೂಡಿತ್ತು. ಇದು ಭಾರತಕ್ಕಷ್ಟೇ ಸೀಮಿತವಾಗಿರಲಿಲ್ಲ. ವಿಶ್ವದ ಇತರೆ ದೇಶಗಳು ಈ ಸವಾಲು ಎದುರಿಸಿವೆ ಎಂದರು.

ಭಾರತವು ಜಾಗತಿಕ ಮಟ್ಟದಲ್ಲಿ ಅತಿವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಆರ್ಥಿಕತೆಯಾಗಿದೆ. ಇದರ ಶ್ರೇಯ ಎಲ್ಲಾ ಭಾರತೀಯರಿಗೂ ಸಲ್ಲಬೇಕಿದೆ ಎಂದು ಹೇಳಿದರು.

ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಕುಗ್ಗಿಲ್ಲ. 23 ತಯಾರಿಕಾ ವಿಭಾಗಗಳ ಪೈಕಿ ಬೆರಳೆಣಿಕೆಯಷ್ಟು ವಿಭಾಗದಲ್ಲಿ ಚಟುವಟಿಕೆ ಮಂದಗತಿಯಲ್ಲಿದೆ. ಅರ್ಧದಷ್ಟು ವಿಭಾಗಗಳ ಚಟುವಟಿಕೆಯು ಸದೃಢವಾಗಿದೆ ಎಂದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರವು ಸಾರ್ವಜನಿಕ ವೆಚ್ಚಕ್ಕೆ ₹11.11 ಲಕ್ಷ ಕೋಟಿ ನಿಗದಿಪಡಿಸಿದೆ. ಜುಲೈನಿಂದ ಅಕ್ಟೋಬರ್‌ವರೆಗೆ ಸಾರ್ವಜನಿಕ ವೆಚ್ಚವು ಶೇ 6.4ರಷ್ಟಾಗಿದೆ ಎಂದರು.



ಲೋಕಸಭೆಯಲ್ಲಿ ಮಂಗಳವಾರ ನಡೆದ ಚರ್ಚೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದರು —ಪಿಟಿಐ ಚಿತ್ರ

ಹಣದುಬ್ಬರ ನಿಯಂತ್ರಣಕ್ಕೆ ಕ್ರಮ

ದೇಶದಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಚಿಲ್ಲರೆ ಹಣದುಬ್ಬರವು ಎರಡಂಕಿ ಮುಟ್ಟಿತ್ತು. ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಇದರ ನಿಯಂತ್ರಣಕ್ಕೆ ಕ್ರಮ ವಹಿಸಲಾಗಿದೆ. ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ಶೇ 4.8ರಷ್ಟಿದೆ. ಕೋವಿಡ್ ಬಳಿಕ ದಾಖಲಾಗಿರುವ ಕನಿಷ್ಠ ಮಟ್ಟದ ಹಣದುಬ್ಬರ ಇದಾಗಿದೆ ಎಂದು ಸಚಿವೆ ನಿರ್ಮಲಾ ವಿವರಿಸಿದರು.

ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸೂಚಕವಾದ ಕೋರ್ ಹಣದುಬ್ಬರವು ಶೇ 3.6ರಷ್ಟಿದೆ. ಇದು ದಶಕದ ಕನಿಷ್ಠ ಮಟ್ಟವಾಗಿದೆ ಎಂದು ಹೇಳಿದರು.

2017–18ರಲ್ಲಿ ದೇಶದ ನಿರುದ್ಯೋಗದ ದರವು ಶೇ 6ರಷ್ಟಿತ್ತು. ಸದ್ಯ ಶೇ 3.2ಕ್ಕೆ ಇಳಿದಿದೆ ಎಂದರು.

50 ಸೌರ ಪಾರ್ಕ್ ನಿರ್ಮಾಣ: ಸಚಿವ

ನವದೆಹಲಿ (ಪಿಟಿಐ): ‘ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ನವೆಂಬರ್ ಅವಧಿಯಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವು ದ್ವಿಗುಣಗೊಂಡಿದೆ’ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದಿಂದ (ಸಿಐಐ) ಮಂಗಳವಾರ ನಡೆದ ಅಂತರರಾಷ್ಟ್ರೀಯ ಇಂಧನ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 7.54 ಗಿಗಾ ವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆಯಾಗಿತ್ತು. ಸದ್ಯ 15 ಗಿಗಾ ವಾಟ್ ಉತ್ಪಾದನೆಯಾಗಿದೆ.ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಒಟ್ಟು ಸಾಮರ್ಥ್ಯ 214 ಗಿಗಾ ವಾಟ್‌ಗೆ ಮುಟ್ಟಿದೆ ಎಂದರು.

2025–26ರೊಳಗೆ ಒಟ್ಟು 38 ಗಿಗಾ ವಾಟ್ ಸಾಮರ್ಥ್ಯದ 50 ಸೌರ ಪಾರ್ಕ್‌ಗಳ ನಿರ್ಮಾಣಕ್ಕೆ ನಿರ್ಧರಿಸಿದ್ದು, ಈ ಸಂಬಂಧ ಸಿದ್ಧತೆ ನಡೆದಿದೆ ಎಂದರು.

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಸತತ ಎರಡು ದಿನಗಳಿಂದ ಇಳಿಕೆಯಾಗಿದ್ದ ಚಿನ್ನದ ಬೆಲೆಯು ಮಂಗಳವಾರದ ವಹಿವಾಟಿನಲ್ಲಿ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹950 ಏರಿಕೆಯಾಗಿದ್ದು, ₹79,300 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹78,900 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಸತತ ಮೂರನೇ ದಿನವು ಬೆಳ್ಳಿ ಧಾರಣೆ ಇಳಿಕೆಯಾಗಿದೆ. ಪ್ರತಿ ಕೆ.ಜಿಗೆ ₹1 ಸಾವಿರ ಇಳಿಕೆಯಾಗಿದ್ದು, ₹91,500 ಆಗಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆ ಆರಂಭವಾಗಿದೆ. ಸಭೆಯಲ್ಲಿ ಬಡ್ಡಿದರ ಕಡಿತದ ಬಗ್ಗೆ ಕೈಗೊಳ್ಳುವ ನಿರ್ಧಾರವು ಹಳದಿ ಲೋಹದ ಬೆಲೆ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ 1,064 ಅಂಶ ಇಳಿಕೆ

ಮುಂಬೈ (ಪಿಟಿಐ): ಬ್ಲೂಚಿಪ್ ಕಂಪನಿಗಳ ಷೇರು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಂಗಳವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತ ನಿರ್ಧಾರದ ಮೇಲೆ ಹೂಡಿಕೆದಾರರು ದೃಷ್ಟಿ ನೆಟ್ಟಿರುವುದು ದೇಶೀಯ ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಹೂಡಿಕೆದಾರರ ಸಂಪತ್ತು ₹4.92 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,064 ಅಂಶ ಇಳಿಕೆ ಕಂಡು 80,684 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 322 ಅಂಶ ಇಳಿಕೆ ಕಂಡು 24,336 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.



ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ಲಾ ಬ್ಲೂಚಿಪ್ ಕಂಪನಿಗಳ ಷೇರಿನ ಮೌಲ್ಯ ಇಳಿಕೆಯಾಗಿದೆ. ಭಾರ್ತಿ ಏರ್‌ಟೆಲ್, ಇಂಡಸ್ ಇಂಡ್ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಟಿಸಿಎಸ್, ಏಷ್ಯನ್ ಪೇಂಟ್ಸ್, ಎಲ್ ಆ್ಯಂಡ್ ಟಿ, ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮೌಲ್ಯ ಇಳಿಕೆಯಾಗಿದೆ.

ಈಗಾಗಲೇ ಫೆಡರಲ್ ರಿಸರ್ವ್ ಶೇ 0.25ರಷ್ಟು ಬಡ್ಡಿದರ ಕಡಿತಗೊಳಿಸಿದೆ.

ಮತ್ತೆ ಬಡ್ಡಿದರ ಇಳಿಕೆ ಮಾಡುವ ನಿರೀಕ್ಷೆಯಿದೆ. ಆದರೆ, ಬ್ಯಾಂಕ್ ಆಫ್ ಜಪಾನ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ. ಇದು ದೇಶದ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ ಎಂದು ಷೇರುಪೇಟೆ ತಜ್ಞರು ಹೇಳಿದ್ದಾರೆ.

ಸುದ್ದಿ 2 ನಿಮಿಷ

1,394 ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): 2023–24ರಲ್ಲಿ 1,394 ಔಷಧಗಳು ಪ್ರಮಾಣಿತ ಗುಣಮಟ್ಟ ಪರೀಕ್ಷೆಯಲ್ಲಿ ವೈಫಲ್ಯ ಕಂಡಿವೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

2019–20ರಲ್ಲಿ 950 ಹಾಗೂ 2022–23ರಲ್ಲಿ 1,171 ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲವೆಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆಯು (ಸಿಡಿಎಸ್‌ಸಿಒ) ವರದಿ ನೀಡಿದೆ ಎಂದು ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2023–24ರಲ್ಲಿ (ಏಪ್ರಿಲ್–ಮಾರ್ಚ್) ಒಟ್ಟು 1.06 ಲಕ್ಷ ಔಷಧ ಮಾದರಿಗಳನ್ನು ಪರೀಕ್ಷೆಗೆ ಸ್ವೀಕರಿಸಲಾಗಿತ್ತು. ಈ ಪೈಕಿ 2,988 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ. ಈ ಪೈಕಿ 282 ಮಾದರಿಗಳು ನಕಲಿ ಅಥವಾ ಕಲಬೆರಕೆಯಿಂದ ಕೂಡಿರುವುದು ಪತ್ತೆಯಾಗಿದೆ ಎಂದು ಹೇಳಿದ್ದಾರೆ.

ನಕಲಿ ಹಾಗೂ ಕಲಬೆರಕೆ ಔಷಧ ಮಾದರಿಗಳನ್ನು ತಯಾರಿಸಿದ ಕಂಪನಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಸಿಡಿಎಸ್‌ಸಿಒ ಮತ್ತು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದೇಶೀಯ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ಔಷಧಗಳ ತಯಾರಿಕೆಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಂಡಿವೆ ಎಂದು ಹೇಳಿದ್ದಾರೆ.



ಶೇ 6.68ರಷ್ಟು ಜನರಿಂದ ತೆರಿಗೆ ರಿಟರ್ನ್ಸ್ ಸಲ್ಲಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ 8.09 ಕೋಟಿ ತೆರಿಗೆದಾರರು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ. ದೇಶದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಿಟರ್ನ್ಸ್ ಸಲ್ಲಿಸಿದವರ ಸಂಖ್ಯೆ ಶೇ 6.68ರಷ್ಟಿದೆ ಎಂದು ಕೇಂದ್ರ ಸರ್ಕಾರವು ಮಂಗಳವಾರ ಸಂಸತ್‌ಗೆ ತಿಳಿಸಿದೆ.

2022–23ರಲ್ಲಿ 7.40 ಕೋಟಿ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದರು. ಇದಕ್ಕೆ ಹೋಲಿಸಿದರೆ ರಿಟರ್ನ್ಸ್ ಸಲ್ಲಿಕೆಯಲ್ಲಿ ಏರಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2021–22ರಲ್ಲಿ 6.96 ಕೋಟಿ, 2020–21ರಲ್ಲಿ 6.72 ಕೋಟಿ ಹಾಗೂ 2019–20ರಲ್ಲಿ 6.48 ಕೋಟಿ ರಿಟರ್ನ್ಸ್ ಸಲ್ಲಿಕೆಯಾಗಿದ್ದವು ಎಂದು ಹೇಳಿದ್ದಾರೆ.

2022–23ರಲ್ಲಿ 4.64 ಲಕ್ಷ ತೆರಿಗೆದಾರರು ಶೂನ್ಯ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದರು. 2023–24ರಲ್ಲಿ ಈ ತೆರಿಗೆದಾರರ ಸಂಖ್ಯೆ 4.90 ಕೋಟಿಗೆ ಮುಟ್ಟಿದೆ. ಇವರ ಆದಾಯವು ತೆರಿಗೆ ವಿನಾಯಿತಿ ಮಟ್ಟವನ್ನು ಮೀರಿಲ್ಲ. ಹಾಗಾಗಿ, ಅವರಿಂದ ಸರ್ಕಾರದ ಬೊಕ್ಕಸಕ್ಕೆ ಪಾವತಿಯಾಗುವ ಆದಾಯ ತೆರಿಗೆ ಶೂನ್ಯವಾಗಿದೆ.

ಹಸೀನಾ ವಿರುದ್ಧ ತನಿಖೆ ಎರಡು ತಿಂಗಳ ಗಡುವು

ಢಾಕಾ (ಪಿಟಿಐ): ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು, ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧದ ಪ್ರಕರಣಗಳ ಕುರಿತ ತನಿಖೆಯನ್ನು ಪೂರ್ಣಗೊಳಿಸಲು ಮಂಗಳವಾರ ಎರಡು ತಿಂಗಳ ಗಡುವು ನೀಡಿದೆ.

ನ್ಯಾಯಮೂರ್ತಿ ಗೋಲಂ ಮೊರ್ತುಜಾ ಮಜುಂದಾರ್ ಅವರ ನೇತೃತ್ವದ ತ್ರಿಸದಸ್ಯ ಪೀಠವು, ಫೆ.18 ರವರೆಗೆ ತನಿಖೆಗೆ ಕಾಲಾವಕಾಶ ನೀಡಿ ಆದೇಶ ಹೊರಡಿಸಿದೆ ಎಂದು ಡೈಲಿ ಸ್ಟಾರ್ ದಿನಪತ್ರಿಕೆ ವರದಿ ಮಾಡಿದೆ.

ಜುಲೈನಿಂದ ಆಗಸ್ಟ್‌ವರೆಗೆ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಸಂಭವಿಸಿದ ಹಿಂಸಾಚಾರಕ್ಕೆ ಸಂಬಂಧಿಸಿ ಹಸೀನಾ, ಮಾಜಿ ಸಚಿವರು ಸೇರಿದಂತೆ 46 ಜನರ ವಿರುದ್ಧ ಪ್ರಕರಣ ದಾಖಲಾಗಿತ್ತು. ಸರ್ಕಾರದ ವಿರುದ್ಧ ಪ್ರತಿಭಟನೆ ತೀವ್ರವಾದ ಕಾರಣ ಹಸೀನಾ ಅವರು ಆಗಸ್ಟ್ 5ರಂದು ಭಾರತಕ್ಕೆ ಪಲಾಯನ ಮಾಡಿದ್ದರು.

ಶಿಕ್ಷೆ ರದ್ದು ಕೋರಿ ಡೊನಾಲ್ಡ್ ಟ್ರಂಪ್ ಸಲ್ಲಿಸಿದ್ದ ಅರ್ಜಿ ವಜಾ

ನ್ಯೂಯಾರ್ಕ್ (ಎಪಿ): ತಮ್ಮ ನಡುವಿನ ಸಂಬಂಧದ ಕುರಿತು ಸಾರ್ವಜನಿಕವಾಗಿ ಮಾತನಾಡದಂತೆ ನೀಲಿಚಿತ್ರ ನಟಿ ಸ್ಟಾರ್ಮಿ ಡೇನಿಯಲ್ಸ್ ಅವರಿಗೆ 1.30 ಲಕ್ಷ ಡಾಲರ್ (ಸುಮಾರು ₹1.10 ಕೋಟಿ) ನೀಡಿದ್ದ ಪ್ರಕರಣದಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ದೋಷಿ ಎಂದು ಘೋಷಿಸಿ ಶಿಕ್ಷೆ ವಿಧಿಸಲಾಗಿತ್ತು. ಇದನ್ನು ರದ್ದು ಮಾಡುವಂತೆ ಕೋರಿ ಟ್ರಂಪ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸೋಮವಾರ ಇಲ್ಲಿನ ನ್ಯಾಯಾಲಯ ವಜಾ ಮಾಡಿದೆ.

‘ತಮ್ಮ ಅಧಿಕಾರ ಅವಧಿಯಲ್ಲಿ ಆಡಳಿತಕ್ಕೆ ಸಂಬಂಧಿಸಿ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ಮಾಜಿ ಅಧ್ಯಕ್ಷರಿಗೆ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ. ಆ ನಿರ್ಧಾರಗಳು ಆಡಳಿತಕ್ಕೆ ಸಂಬಂಧಿಸಿದ್ದಾಗಿರುತ್ತವೆ. ಅವು ವೈಯಕ್ತಿಕವಾಗಿ ತೆಗೆದುಕೊಂಡ ನಿರ್ಧಾರ ಆಗಿರುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿತ್ತು. ಈ ತೀರ್ಪಿನ ಆಧಾರದಲ್ಲಿ, ಟ್ರಂಪ್ ಅವರು ಶಿಕ್ಷೆ ವಜಾ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯ ವಿಚಾರಣೆಯು ಮುಂದೆ ಯಾವ ಹಂತಕ್ಕೆ ತಲುಪಲಿದೆ ಎಂಬ ಬಗ್ಗೆ ಸ್ಪಷ್ಟನೆ ಇಲ್ಲ. ಆದರೆ, ತಾವು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲೇ ಈ ಪ್ರಕರಣ ರದ್ದಾಗಲಿದೆ ಎಂದುಕೊಂಡಿದ್ದ ಅಮೆರಿಕದ ಚುನಾಯಿತ ಅಧ್ಯಕ್ಷ ಟ್ರಂಪ್ ಅವರಿಗೆ ಮ್ಯಾನ್‌ಹ್ಯಾಟನ್ ನ್ಯಾಯಾಧೀಶ ಜಾನ್ ಎಂ. ಮರ್ಚನ್ ಅವರು ನೀಡಿರುವ ತೀರ್ಪು ನಿರಾಸೆಯನ್ನುಂಟು ಮಾಡಿದೆ.

‘ಟ್ರಂಪ್ ಅವರು ಜ.20ರಂದು ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವುದರಿಂದ ಈ ಪ್ರಕರಣದ ಸಂಬಂಧ ಅವರಿಗೆ ತುಸು ವಿನಾಯಿತಿ ನೀಡಬಹುದು. ಆದರೆ, ಶಿಕ್ಷೆಯನ್ನು ರದ್ದು ಮಾಡುವಂತಿಲ್ಲ’ ಎಂದು ಟ್ರಂಪ್ ವಿರುದ್ಧ ವಾದಿಸುತ್ತಿರುವ ವಕೀಲರು ಕೋರಿದರು.

‘ನನ್ನ ವಿರುದ್ಧ ಸಲ್ಲಿಸಲಾಗಿರುವ ದಾಖಲೆಗಳೆಲ್ಲವೂ ಆಡಳಿತಕ್ಕೆ ಸಂಬಂಧಿಸಿದ್ದಾಗಿವೆ. ಸುಪ್ರೀಂ ಕೋರ್ಟ್ ಹೇಳಿರುವಂತೆ ಅದು ಆಡಳಿತದ ಅವಧಿಯಲ್ಲಿ ತೆಗೆದುಕೊಂಡ ನಿರ್ಧಾರವಾಗಿರುವುದರಿಂದ ಶಿಕ್ಷೆಯನ್ನು ರದ್ದು ಮಾಡಬೇಕು’ ಎಂದು ಅರ್ಜಿಯಲ್ಲಿ ಕೋರಿದ್ದರು. ಆದರೆ, ನ್ಯಾಯಾಧೀಶರು ಟ್ರಂಪ್ ಅವರ ಈ ವಾದವನ್ನು ಒಪ್ಪಿಕೊಳ್ಳಲಿಲ್ಲ.

ರಷ್ಯಾ ಸೇನೆಯ ಅಧಿಕಾರಿ ಹತ್ಯೆ

ಮಾಸ್ಕೊ: ವಸತಿ ಸಮುಚ್ಚಯದ ಬಳಿ ಬಾಂಬ್ ಸ್ಫೋಟ, ಉಕ್ರೇನ್ ಕೈವಾಡ ಶಂಕೆ

ಮಾಸ್ಕೊ(ಎಪಿ/ಎಎಫ್‌ಪಿ): ಇಲ್ಲಿನ ವಸತಿ ಸಮುಚ್ಚಯದ ಬಳಿ ಮಂಗಳವಾರ ಬೆಳಿಗ್ಗೆ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ರಷ್ಯಾ ಸೇನೆಯ ಅಣು, ಜೈವಿಕ ಮತ್ತು ರಾಸಾಯನಿಕ ರಕ್ಷಣಾ ಪಡೆಗಳ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಇಗೋರ್ ಕಿರಿಲೊವ್ ಮೃತಪಟ್ಟಿದ್ದಾರೆ.



ಇಗೋರ್ ಕಿರಿಲೊವ್

ಸ್ಕೂಟರ್‌ನಲ್ಲಿ ಇರಿಸಲಾಗಿದ್ದ ಬಾಂಬ್ ಸ್ಫೋಟದಲ್ಲಿ ಕಿರಿಲೊವ್ ಅವರ ಸಹಾಯಕ ಕೂಡಾ ಬಲಿಯಾಗಿದ್ದಾರೆ ಎಂದು ರಷ್ಯಾದ ತನಿಖಾ ಸಂಸ್ಥೆಯ ವಕ್ತಾರೆ ಸ್ವೆಟ್ಲಾನಾ ಪೆಟ್ರೆಂಕೊ ಹೇಳಿದ್ದಾರೆ.

‘ಇಬ್ಬರ ಸಾವಿನ ಕುರಿತು ತನಿಖೆ ಆರಂಭವಾಗಿದೆ. ತನಿಖಾಧಿಕಾರಿಗಳು, ವಿಧಿ ವಿಜ್ಞಾನ ತಂಡದ ತಜ್ಞರು ಸ್ಥಳದಲ್ಲಿ ಶೋಧ ನಡೆಸಿದ್ದಾರೆ. ಸ್ಫೋಟಕ ಇರಿಸಿದವರ ಪತ್ತೆಗೆ ವ್ಯಾಪಕ ಶೋಧ ಕಾರ್ಯ ಆರಂಭಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಕಿರಿಲೊವ್ ಅವರು ಉಕ್ರೇನ್ ವಿರುದ್ಧದ ಯುದ್ಧ ಆರಂಭವಾದ ಬಳಿಕ ಹತ್ಯೆಯಾದ ರಷ್ಯಾದ ಅತ್ಯಂತ ಹಿರಿಯ ಸೇನಾಧಿಕಾರಿ ಆಗಿದ್ದಾರೆ. ಉಕ್ರೇನ್ ಯುದ್ಧದಲ್ಲಿ ರಷ್ಯಾ ಸಾಧಿಸಿರುವ ಯಶಸ್ಸಿನ ಬಗ್ಗೆ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಹೆಮ್ಮೆಯ ಮಾತುಗಳನ್ನಾಡಿದ ಮರುದಿನ ಈ ಬೆಳವಣಿಗೆ ನಡೆದಿದೆ.

ಬಾಂಬ್ ಇರಿಸಿದ್ದ ಸ್ಕೂಟರ್‌ಅನ್ನು ವಸತಿ ಸಮುಚ್ಚಯದ ಪ್ರವೇಶ ದ್ವಾರದ ಬಳಿ ನಿಲ್ಲಿಸಲಾಗಿತ್ತು. ರಿಮೋಟ್ ಕಂಟ್ರೋಲ್ ಮೂಲಕ ಬಾಂಬ್ ಸ್ಫೋಟಿಸಲಾಗಿದೆ ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ.



ತನಿಖಾ ತಂಡದ ಅಧಿಕಾರಿಗಳು ಸ್ಫೋಟದ ತಾಣದಲ್ಲಿ ಪರಿಶೀಲನೆ ನಡೆಸಿದರು —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಲೆಫ್ಟಿನೆಂಟ್ ಜನರಲ್ ಇಗೋರ್ ಕಿರಿಲೊವ್ ಬಲಿ
- ಸ್ಕೂಟರ್‌ನಲ್ಲಿ ಇಟ್ಟಿದ್ದ ಸ್ಫೋಟಕ
- ಮಂಗಳವಾರ ಬೆಳಿಗ್ಗೆ ನಡೆದ ಘಟನೆ

54 ವರ್ಷದ ಕಿರಿಲೊವ್ ಅವರು ವಸತಿ ಸಮುಚ್ಚಯದಲ್ಲಿರುವ ತಮ್ಮ ಮನೆಯಿಂದ ಕಚೇರಿಗೆ ಹೊರಟಿದ್ದ ಸಂದರ್ಭದಲ್ಲಿ ಸ್ಫೋಟ ಸಂಭವಿಸಿದೆ.

ಸ್ಫೋಟದ ತೀವ್ರತೆಗೆ ಕಟ್ಟಡದ ಹಲವು ಕಿಟಕಿಗಳು ಮತ್ತು ಬಾಗಿಲುಗಳಿಗೆ ಹಾನಿಯಾಗಿದೆ. ಈ ಕೃತ್ಯವನ್ನು ‘ಭಯೋತ್ಪಾದಕ ದಾಳಿ’ ಎಂದು ಪರಿಗಣಿಸಿ ತನಿಖೆ ಕೈಗೆತ್ತಿಕೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್ ಕೈವಾಡ ಶಂಕೆ: ಕಿರಿಲೊವ್ ಅವರ ಹತ್ಯೆಯ ಹಿಂದೆ ಉಕ್ರೇನ್ ಕೈವಾಡವಿರುವ ಶಂಕೆ ವ್ಯಕ್ತವಾಗಿದೆ. ಇದು ತನ್ನ ‘ವಿಶೇಷ ಕಾರ್ಯಾಚರಣೆ’ ಎಂದು ಉಕ್ರೇನ್‌ನ ಭದ್ರತಾ ಮತ್ತು ಗುಪ್ತಚರ ಸಂಸ್ಥೆ ‘ಎಸ್‌ಬಿಯು’ ಹೇಳಿರುವುದಾಗಿ ಉಕ್ರೇನ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಕಿರಿಲೊವ್ ಯುದ್ಧಾಪರಾಧಿಯಾಗಿದ್ದು, ಕಾನೂನಿನ ಪ್ರಕಾರವೇ ಅವರನ್ನು ಗುರಿಯಾಗಿಸಲಾಗಿದೆ. ಏಕೆಂದರೆ, ಉಕ್ರೇನ್ ಸೇನೆಯ ವಿರುದ್ಧ ರಾಸಾಯನಿಕ ಅಸ್ತ್ರಗಳನ್ನು ಬಳಸುವಂತೆ ಅವರು ರಷ್ಯಾ ಸೇನೆಗೆ ಆದೇಶಿಸಿದ್ದರು. ಉಕ್ರೇನ್‌ನ ಜನರನ್ನು ಕೊಲ್ಲುವ ಎಲ್ಲರಿಗೂ ಇಂತಹ ಅಪಮಾನಕರ ಅಂತ್ಯ ಕಾದು ಕುಳಿತಿದೆ. ಯುದ್ಧಾಪರಾಧಿಗಳ ವಿರುದ್ಧ ಪ್ರತೀಕಾರ ತೀರಿಸುವುದು ಅನಿವಾರ್ಯವಾಗಿದೆ’ ಎಂದಿದ್ದಾರೆ.

ಆರೋಪ ಮಾಡಿದ್ದ ಉಕ್ರೇನ್

ಉಕ್ರೇನ್ ವಿರುದ್ಧದ ಕಾರ್ಯಾಚರಣೆಯಲ್ಲಿ ರಷ್ಯಾ ಸೇನೆಯು ಇಗೋರ್ ಕಿರಿಲೊವ್ ಅವರ ಆದೇಶದಂತೆ ನಿಷೇಧಿತ ರಾಸಾಯನಿಕ ಅಸ್ತ್ರಗಳನ್ನು ಬಳಸಿದೆ ಎಂದು ಉಕ್ರೇನ್‌ನ ಭದ್ರತಾ ಸಂಸ್ಥೆ ‘ಎಸ್‌ಬಿಯು’ ಡಿಸೆಂಬರ್ 16ರಂದು ಆರೋಪಿಸಿತ್ತು.

‘2022ರ ಫೆಬ್ರುವರಿಯಲ್ಲಿ ಯುದ್ಧ ಆರಂಭವಾದಾಗಿನಿಂದ ಕೆ-1 ಗ್ರೆನೇಡ್ ಒಳಗೊಂಡಂತೆ 4,800ಕ್ಕೂ ಹೆಚ್ಚು ರಾಸಾಯನಿಕ ಅಸ್ತ್ರಗಳನ್ನು ಬಳಸಲಾಗಿದೆ’ ಎಂದು ಹೇಳಿತ್ತು.

ಪುಟಿನ್, ಝೆಲೆನ್‌ಸ್ಕಿ ಜತೆ ಮಾತನಾಡುವೆ: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಯುದ್ಧದ ಹೆಸರಲ್ಲಿ ನಡೆಯುತ್ತಿರುವ ‘ಹತ್ಯಾಕಾಂಡ’ವನ್ನು ಕೊನೆಗೊಳಿಸಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್‌ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸುವುದಾಗಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ.



ರಷ್ಯಾ ದಾಳಿಯ ವಿರುದ್ಧ ಹೋರಾಡಲು ಜೋ ಬೈಡನ್ ಆಡಳಿತವು ಉಕ್ರೇನ್‌ಗೆ ಭಾರಿ ಹಣಕಾಸಿನ ನೆರವು ನೀಡಿರುವುದನ್ನು ಟ್ರಂಪ್ ಕಟುವಾಗಿ ಟೀಕಿಸುತ್ತಾ ಬಂದಿದ್ದಾರೆ.

‘ನಾವು ಈ ಯುದ್ಧವನ್ನು ನಿಲ್ಲಿಸಲೇಬೇಕು. ಅದಕ್ಕಾಗಿ ಪುಟಿನ್ ಮತ್ತು ಅವರ ಪ್ರತಿನಿಧಿಗಳು ಹಾಗೂ ಝೆಲೆನ್‌ಸ್ಕಿ ಮತ್ತು ಅವರ ಪ್ರತಿನಿಧಿಗಳ ಜತೆ ಮಾತುಕತೆ ನಡೆಸುತ್ತೇವೆ’ ಎಂದು ಫ್ಲಾರಿಡಾದ ತಮ್ಮ ನಿವಾಸದಲ್ಲಿ ಅವರು ಮಾಧ್ಯಮದವರಿಗೆ ತಿಳಿಸಿದ್ದಾರೆ.

ಸಂಘರ್ಷವನ್ನು ಶೀಘ್ರವಾಗಿ ಕೊನೆಗೊಳಿಸಲು ಸಾಧ್ಯ ಎಂದು ಟ್ರಂಪ್ ಅವರು ಪದೇ ಪದೇ ಹೇಳಿಕೊಂಡಿದ್ದಾರೆ. ಆದರೆ, ಅದು ಹೇಗೆ ಎಂಬುದರ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿಲ್ಲ.

‘ತಕ್ಷಣದಲ್ಲೇ ಕದನ ವಿರಾಮ’ ಘೋಷಣೆಯಾಗಬೇಕು ಎಂದು ಈ ತಿಂಗಳ ಆರಂಭದಲ್ಲಿ ಒತ್ತಾಯಿಸಿದ್ದ ಅವರು ‘ಮಾತುಕತೆ ಪ್ರಾರಂಭವಾಗಬೇಕು’ ಎಂದಿದ್ದರು.

ವಿಜಯ ದಿವಸ ಆಚರಣೆ ಅಂಗವಾಗಿ ಪ್ರಧಾನಿ ಪೋಸ್ಟ್

ಮೋದಿ ವಿರುದ್ಧ ಬಾಂಗ್ಲಾ ಟೀಕೆ

ಢಾಕಾ (ಪಿಟಿಐ): ‘ವಿಜಯ ದಿವಸ’ದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹಂಚಿಕೊಂಡಿದ್ದ ಪೋಸ್ಟ್ ಅನ್ನು ಟೀಕಿಸಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಕಾನೂನು ಸಲಹೆಗಾರ ಆಸಿಫ್ ನಜರೂಲ್ ಅವರು ಪೋಸ್ಟ್ ಮಾಡಿದ್ದಾರೆ. ‘ಈ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧ ಹೋರಾಡಲು ಭಾರತವು ನಮ್ಮ ಹೋರಾಟದಲ್ಲಿ ಭಾಗಿಯಾಗಿತ್ತಷ್ಟೆ. ಇದಕ್ಕಿಂತ ಹೆಚ್ಚಿನದು ಏನೂ ಇಲ್ಲ’ ಎಂದಿದ್ದಾರೆ.

ನಜರೂಲ್ ಅವರ ಪೋಸ್ಟ್ ಅನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರೂ ಹಂಚಿಕೊಂಡಿದ್ದಾರೆ. ಪಾಕಿಸ್ತಾನ ಸೇನೆಯು ಭಾರತದ ಸೇನೆಯ ಮುಂದೆ 1971ರ ಡಿ.16ರಂದು ಶರಣಾಗತಿಯಾಗಿತ್ತು. ಈ ಬಳಿಕ ಬಾಂಗ್ಲಾದೇಶವು ಸ್ವಾತಂತ್ರ್ಯಗೊಂಡಿತು. ಈ ನಂತರದಿಂದ ಡಿ.16 ಅನ್ನು ‘ವಿಜಯ ದಿವಸ’ವನ್ನಾಗಿ ಆಚರಿಸಲಾಗುತ್ತಿದೆ.

ವಿದ್ಯಾರ್ಥಿ ಚಳವಳಿಯ ಸಂಚಾಲಕ ಹಸ್ನತ್ ಅಬ್ದುಲ್ಲಾ ಅವರೂ ಪ್ರಧಾನಿ ಮೋದಿ ಅವರ ಪೋಸ್ಟ್‌ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ‘ಇದು ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಯುದ್ಧವಾಗಿದೆ. ಮೋದಿ ಅವರು ಇದೊಂದು ಭಾರತದ ಯುದ್ಧ ಎಂಬಂತೆ, ಇದು ಭಾರತದ ಗೆಲುವು ಎಂಬಂತೆ ಹೇಳಿಕೊಂಡಿದ್ದಾರೆ. ತಮ್ಮ ಈ ಹೇಳಿಕೆಯ ಮೂಲಕ ಬಾಂಗ್ಲಾದೇಶದ ಅಸ್ತಿತ್ವವನ್ನು ಅಗೌರವದಿಂದ ನೋಡಿದಂತಾಗಿದೆ’ ಎಂದಿದ್ದಾರೆ.

‘ನಾವು ಸ್ವಾತಂತ್ರ್ಯ ಪಡೆದುಕೊಂಡಿದ್ದನ್ನು ತಮ್ಮ ಸಾಧನೆ ಎಂದು ಭಾರತವು ಹೇಳಿಕೊಳ್ಳುತ್ತಿದೆ. ಇದು ನಮ್ಮ ಸ್ವಾತಂತ್ರ್ಯಕ್ಕೆ, ಸಾರ್ವಭೌಮತ್ವಕ್ಕೆ, ಏಕತೆಗೆ ಒಡ್ಡುತ್ತಿರುವ ಬೆದರಿಕೆ ಎಂದೇ ನಾವು ನೋಡಬೇಕಾಗುತ್ತದೆ. ಭಾರತದ ಈ ಬೆದರಿಕೆಯ ವಿರುದ್ಧ ಹೋರಾಡುವುದು ಅಗತ್ಯವಾಗಿದೆ. ನಾವು ಹೋರಾಟವನ್ನು ಮಾಡಬೇಕಿದೆ’ ಎಂದು ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿ ಹೇಳಿದ್ದೇನು?

ಇವತ್ತು, ವಿಜಯ ದಿವಸದ ಈ ದಿನದಂದು 1971ರ ಭಾರತದ ಐತಿಹಾಸಿಕ ವಿಜಯಕ್ಕೆ ಕೊಡುಗೆ ನೀಡಿದ ಎಲ್ಲ ಧೀರೋದಾತ್ತ ಸೈನಿಕರ ಧೈರ್ಯ ಹಾಗೂ ತ್ಯಾಗವನ್ನು ನಾವು ಗೌರವಿಸುತ್ತೇವೆ. ಅವರ ನಿಸ್ವಾರ್ಥ ಸಮರ್ಪಣೆ ಹಾಗೂ ಅಚಲ ಸಂಕಲ್ಪವು ಭಾರತವನ್ನು ಸಂರಕ್ಷಿಸಿದೆ ಮತ್ತು ದೇಶಕ್ಕೆ ಘನತೆ ತಂದುಕೊಟ್ಟಿದೆ. ಇಂದು ಅವರಿಗೆ ಗೌರವ ಸಲ್ಲಿಸುವ ದಿನ. ನಮ್ಮ ಸೈನಿಕರ ತ್ಯಾಗವು ಮುಂಬರುವ ಪೀಳಿಗೆಗಳಿಗೆ ಸ್ಫೂರ್ತಿ ತುಂಬುತ್ತಲೇ ಇರುತ್ತದೆ. ಇದು ನಮ್ಮ ದೇಶದ ಇತಿಹಾಸದಲ್ಲಿ ಅಚ್ಚಾಗಿ ಉಳಿಯುತ್ತದೆ

ನರೇಂದ್ರ ಮೋದಿ, ಪ್ರಧಾನಿ

(ಡಿ.16ರಂದು ಹಂಚಿಕೊಂಡಿದ್ದ ‘ಎಕ್ಸ್’ ಪೋಸ್ಟ್)

‘ಮಲಗುಂಡಿ ಸ್ವಚ್ಛತಾ ವೃತ್ತಿ ಜಾತಿ ಆಧಾರಿತವಲ್ಲ’



ಎಸ್‌ಸಿ ಸಮುದಾಯದ ಕಾರ್ಮಿಕರೇ ಅಧಿಕ


ಸಾಮಾನ್ಯ ವರ್ಗದವರು ಅತ್ಯಂತ ಕಡಿಮೆ

ಭಾರತದಲ್ಲಿರುವ ಒಟ್ಟು ಮಲಗುಂಡಿ ಸ್ವಚ್ಛತಾ ಕಾರ್ಮಿಕರ ಪೈಕಿ ಪರಿಶಿಷ್ಟ ಜಾತಿಗೆ ಸೇರಿದವರು ಶೇ 67ರಷ್ಟಿದ್ದಾರೆ. ಸಾಮಾನ್ಯ ವರ್ಗಕ್ಕೆ ಸೇರಿದವರು ಅತ್ಯಂತ ಕಡಿಮೆ ಅಂದರೆ, ಶೇ 8.05ರಷ್ಟಿದ್ದಾರೆ. ‘ಮಲಗುಂಡಿ ಸ್ವಚ್ಛತಾ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು? ಕಾರ್ಮಿಕರ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗದವರೇ ಅಧಿಕ ಸಂಖ್ಯೆಯಲ್ಲಿದ್ದಾರೆಯೇ? ಒಂದು ವೇಳೆ ಈ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿದ್ದರೆ, ಬೇರೆ ಬೇರೆ ಸಮುದಾಯದವರೂ ಈ ವೃತ್ತಿ ಕೈಗೆತ್ತಿಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆಯೇ’ ಎಂಬ ಪ್ರಶ್ನೆಗಳನ್ನು ರಾಜಸ್ಥಾನದ ಕಾಂಗ್ರೆಸ್ ಸಂಸದ ಕುಲ್‌ದೀಪ್ ಇಂದೋರ್ ಅವರು ಲೋಕಸಭೆಯಲ್ಲಿ ಕೇಳಿದರು. ಇದಕ್ಕೆ ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಇಲಾಖೆಯು ಲೋಕಸಭೆಗೆ ಮಂಗಳವಾರ ಉತ್ತರ ನೀಡಿದೆ.

57,758 ದೇಶದಲ್ಲಿರುವ ಮಲಗುಂಡಿ ಸ್ವಚ್ಛತಾ ಕಾರ್ಮಿಕರ ಒಟ್ಟು ಸಂಖ್ಯೆ

54,574 ಒಟ್ಟು ಕಾರ್ಮಿಕರ ಪೈಕಿ ಕೇಂದ್ರ ಸರ್ಕಾರವು ವೃತ್ತಿ ವಿವರ ಸಿದ್ಧಪಡಿಸಿರುವ ಕಾರ್ಮಿಕರ ಸಂಖ್ಯೆ

ಜಾತಿವಾರು ಕಾರ್ಮಿಕರ ಸಂಖ್ಯೆ (ಶೇಕಡವಾರುಗಳಲ್ಲಿ)



37,060 (67.91%) ಪರಿಶಿಷ್ಟ ಜಾತಿ

4,536 (8.31%) ಪರಿಶಿಷ್ಟ ವರ್ಗ

8,587 (15.73%) ಇತರೆ ಹಿಂದುಳಿದ ವರ್ಗ

4,391 (8.05%) ಸಾಮಾನ್ಯ ವರ್ಗ



ಮಲಗುಂಡಿ ಸ್ವಚ್ಛತಾ ಚಟುವಟಿಕೆಯು ಜಾತಿ ಆಧಾರಿತವಾಗಿಲ್ಲ. ಬದಲಿಗೆ ಇದು ವೃತ್ತಿ ಆಧಾರಿತವಾಗಿದೆ

ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಇಲಾಖೆ

‘ನಮಸ್ತೆ’ ಯೋಜನೆ: ಏನು ಕೆಲಸ?

- ತುರ್ತು ಪ್ರತಿಕ್ರಿಯಾ ಸ್ವಚ್ಛತಾ ಘಟಕಗಳಿಗೆ 16,791 ಪಿಪಿಇ ಕಿಟ್ ಮತ್ತು 43 ಸುರಕ್ಷತಾ ಸಾಧನಗಳ ಕಿಟ್ ವಿತರಣೆ
- 13,604 ಫಲಾನುಭವಿಗಳಿಗೆ ಆಯುಷ್ಮಾನ್ ಕಾರ್ಡ್‌ಗಳ ವಿತರಣೆ
- ಇಲ್ಲಿಯವರೆಗೆ 2,585 ಮಲಗುಂಡಿಯ ತ್ಯಾಜ್ಯ ಪಂಪಿಂಗ್ ವಾಹನಗಳಿಗೆ ಮಂಜೂರಾತಿ

ಸಂವಿಧಾನ ಕುರಿತು ರಾಜ್ಯಸಭೆಯಲ್ಲಿ ಚರ್ಚೆ: ಕಾಂಗ್ರೆಸ್ ವಿರುದ್ಧ ಸಚಿವ ನಡ್ಡಾ ವಾಗ್ದಾಳಿ

‘ಅಪ್ರಾಮಾಣಿಕರಿಂದ ಸಂವಿಧಾನಕ್ಕೆ ಅಪಚಾರ’

ನವದೆಹಲಿ (ಪಿಟಿಐ): ‘ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನ ನೀಡಿರುವ ಸಂವಿಧಾನ ರಚನಾಸಭೆಗೆ ಇಡೀ ದೇಶವೇ ಕೃತಜ್ಞವಾಗಿದೆ. ಆದರೆ, ಕೆಲ ‘ಅಪ್ರಾಮಾಣಿಕರು’ ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ’ ಎಂದು ರಾಜ್ಯಸಭೆಯಲ್ಲಿ ಬಿಜೆಪಿಯ ಸದನ ನಾಯಕ ಹಾಗೂ ಕೇಂದ್ರ ಸಚಿವ ಜೆ.ಪಿ.ನಡ್ಡಾ ಮಂಗಳವಾರ ಹೇಳಿದ್ದಾರೆ.

ಸಂವಿಧಾನ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಅನುಷ್ಠಾನಗೊಳಿಸುವವರು ಅಪ್ರಾಮಾಣಿಕರಾಗಿದ್ದಾಗ, ಒಳ್ಳೆಯ ಸಂವಿಧಾನವೊಂದು ಕೂಡ ಕೆಟ್ಟದಾಗಿ ಪರಿಣಮಿಸುತ್ತದೆ’ ಎಂಬ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೇಳಿಕೆ ಉಲ್ಲೇಖಿಸಿದರು.



ಜೆ.ಪಿ.ನಡ್ಡಾ

ಸಂವಿಧಾನ ಪ್ರಸ್ತಾವನೆಗೆ ತಿದ್ದುಪಡಿ, ತುರ್ತು ಪರಿಸ್ಥಿತಿ ಹೇರಿಕೆ ಹಾಗೂ 370ನೇ ವಿಧಿ ಪ್ರಸ್ತಾಪಿಸಿ ಕಾಂಗ್ರೆಸ್ ವಿರುದ್ಧ ಟೀಕೆ ಹರಿತಗೊಳಿಸಿದರು.

‘ಅಂಬೇಡ್ಕರ್ 370ನೇ ವಿಧಿಯಲ್ಲಿನ ಅವಕಾಶವನ್ನು ವಿರೋಧಿಸಿದ್ದರು. ಸಂಸತ್‌ನಲ್ಲಿ ಚರ್ಚೆ ಇಲ್ಲದೆಯೇ, ರಾಷ್ಟ್ರಪತಿಗಳ ಅಂಕಿತ ಪಡೆಯುವ ಮೂಲಕ 35ಎ ವಿಧಿಯನ್ನು ಜಾರಿಗೊಳಿಸಲಾಗಿತ್ತು’ ಎಂದರು.

‘ಮುಂದಿನ ವರ್ಷ, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದಕ್ಕೆ 50 ವರ್ಷ ತುಂಬುತ್ತವೆ. ಇದರ ಅಂಗವಾಗಿ ನಾವು ‘ಪ್ರಜಾಪ್ರಭುತ್ವ ವಿರೋಧಿ ದಿನ’ ಹಮ್ಮಿಕೊಳ್ಳುತ್ತೇವೆ. ಆ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಪಕ್ಷಕ್ಕೂ ಆಹ್ವಾನ ನೀಡುತ್ತೇವೆ’ ಎಂದು ನಡ್ಡಾ ಹೇಳಿದರು.

‘ಮಣಿಪುರ ವಿದ್ಯಮಾನ ಪ್ರಸ್ತಾಪಿಸದ ಬಿಜೆಪಿ’: ‘ಮಣಿಪುರದಲ್ಲಿ ಜನರ ಸಾಂವಿಧಾನಿಕ ಹಕ್ಕುಗಳನ್ನೇ ಕಿತ್ತುಕೊಳ್ಳಲಾಗಿದೆ. ಆದರೆ, ಸಂವಿಧಾನ ಕುರಿತ ಚರ್ಚೆಯ ವೇಳೆ ಬಿಜೆಪಿ ಸದಸ್ಯರು ಈ ವಿಚಾರವನ್ನು ಪ್ರಸ್ತಾಪಿಸದೇ ಇದ್ದದ್ದು ಖಂಡನೀಯ’ ಎಂದು ಪ್ರತಿಪಕ್ಷಗಳಾದ ಟಿಎಂಸಿ ಹಾಗೂ ಸಿಪಿಎಂ ಆರೋಪಿಸಿವೆ.

‘ಮಣಿಪುರ ಜನರ ಸಾಂವಿಧಾನಿಕ ಹಕ್ಕುಗಳನ್ನು ದಮನ ಮಾಡಿದ್ದಕ್ಕಾಗಿ ಈಶಾನ್ಯ ಭಾಗದ ಎಲ್ಲ ಆಡಳಿತ ಪಕ್ಷಗಳ ಸಂಸದರು ರಾಜೀನಾಮೆ ನೀಡಬೇಕು’ ಎಂದು ಟಿಎಂಸಿ ಸಂಸದೆ ಸುಷ್ಮಿತಾ ದೇವ್ ಆಗ್ರಹಿಸಿದರು.

ಈ ಮಾತಿಗೆ ದನಿಗೂಡಿಸಿದ ಸಿಪಿಎಂನ ಜಾನ್ ಬ್ರಿಟ್ಟಾಸ್, ‘ಮಣಿಪುರ ವಿಚಾರವಾಗಿ ನರೇಂದ್ರ ಮೋದಿ ಅವರು ಒಬ್ಬ ಪ್ರಧಾನಿಯಾಗಿ ತಮ್ಮ ಕರ್ತವ್ಯ ನಿಭಾಯಿಸಬೇಕು’ ಎಂದು ಆಗ್ರಹಿಸಿದರು.

ಸೆಂಗೋಲ್ ಮಹತ್ವ: ವಾಗ್ವಾದ ಹರಿತ



ಬ್ರಿಟಿಷರಿಂದ ಅಧಿಕಾರ ಹಸ್ತಾಂತರ ಆಗಿರುವುದರ ಸಂಕೇತ ಎನಿಸಿರುವ ‘ಸೆಂಗೋಲ್’ (ರಾಜದಂಡ) ವಿಚಾರವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಸಂಸದರ ನಡುವಿನ ವಾಗ್ವಾದಕ್ಕೆ ರಾಜ್ಯಸಭೆ ಕಲಾಪ ಮಂಗಳವಾರ ಸಾಕ್ಷಿಯಾಯಿತು.

‘ಸಂಸತ್‌ನಲ್ಲಿ ಸ್ಥಾಪಿಸಲಾಗಿರುವ ಸೆಂಗೋಲ್‌ನ ಮಹತ್ವ ಕುರಿತು ಕತೆ ಕಟ್ಟಲಾಗಿದೆ’ ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ದೂರಿದರೆ, ಆಡಳಿತ ಪಕ್ಷಗಳು ಈ ಮಾತಿಗೆ ತಿರುಗೇಟು ನೀಡಿದವು.

ಸಂವಿಧಾನ ಅಳವಡಿಸಿಕೊಂಡಿರುವುದಕ್ಕೆ 75 ವರ್ಷ ತುಂಬಿರುವ ಕುರಿತು ನಡೆದ ಚರ್ಚೆ ವೇಳೆ ಕೇಂದ್ರ ಸಚಿವ ಭೂಪೇಂದ್ರ ಯಾದವ್, ಸೆಂಗೋಲ್ ಕುರಿತು ಪ್ರಸ್ತಾಪಿಸಿದ್ದು, ಜಟಾಪಟಿಗೆ ಕಾರಣವಾಯಿತು.

‘ಬ್ರಿಟಿಷರು ಅಧಿಕಾರ ಹಸ್ತಾಂತರಿಸುವ ವೇಳೆ ನೀಡಿದ್ದ ಸೆಂಗೋಲ್, ನ್ಯಾಯದ ಸಂಕೇತವಾಗಿದೆ. ಆದರೆ, ಇದನ್ನು ಜವಾಹರ ಲಾಲ್ ನೆಹರೂ ಅವರ ಊರುಗೋಲು ಎಂಬಂತೆ ಬಿಂಬಿಸಲಾಗಿತ್ತು’ ಎಂದು ಯಾದವ್ ಹೇಳಿದರು.

ಇದಕ್ಕೆ ಕಾಂಗ್ರೆಸ್‌ನ ಜೈರಾಮ್ ರಮೇಶ್ ಆಕ್ಷೇಪಿಸಿ, ಸೆಂಗೋಲ್ ಅನ್ನು ಯಾರಿಗೂ ಕೊಟ್ಟಿರಲಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಯಾದವ್, ‘ಈ 75 ವರ್ಷ ಸೆಂಗೋಲ್ ಅನ್ನು ಎಲ್ಲಿ ಇಡಲಾಗಿತ್ತು ಎಂಬ ಬಗ್ಗೆ ಜೈರಾಮ್ ರಮೇಶ್ ಮಾತನಾಡಿಲ್ಲ’ ಎಂದು ತಿವಿದರು.

ಸಭಾಪತಿ ಪೀಠದಲ್ಲಿದ್ದ ರಾಜೀವ್ ಶುಕ್ಲಾ, ರಮೇಶ್ ಅವರಿಗೆ ಮಾತನಾಡಲು ಅವಕಾಶ ನೀಡಿದರು.

‘ಸೆಂಗೋಲ್ ಕುರಿತು ಆಡಳಿತ ಪಕ್ಷ ಕತೆಯೊಂದನ್ನು ಹಬ್ಬಿಸಿದೆ. ಇದು ಇತಿಹಾಸವೇ ಅಲ್ಲ’ ಎಂದು ರಮೇಶ್ ಹೇಳಿದರು.

ಆಗ ಮಧ್ಯಪ್ರವೇಶಿಸಿದ ಜೆ.ಪಿ.ನಡ್ಡಾ,‘ಅಧಿಕಾರ ಹಸ್ತಾಂತರ ಪ್ರಕ್ರಿಯೆ ಕುರಿತು ಲಾರ್ಡ್ ಮೌಂಟ್‌ಬ್ಯಾಟನ್ ಅವರು ನೆಹರೂ ಅವರಲ್ಲಿ ಮಾಹಿತಿ ಕೇಳಿದ್ದರು. ನೆಹರೂ ನೆರವಿಗೆ ಬಂದಿದ್ದ ಸಿ.ರಾಜಗೋಪಾಲಾಚಾರಿ, ಚೋಳ ರಾಜರ ಆಳ್ವಿಕೆ ವೇಳೆ ಸೆಂಗೋಲ್ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸುವ ಪದ್ಧತಿ ರೂಢಿ ಇರುವ ಕುರಿತು ತಿಳಿಸಿದ್ದರು’ ಎಂದು ವಿವರಿಸಿದರು. ಈ ಹೇಳಿಕೆಗೆ ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪಿಸಿದ್ದರಿಂದ ಸದನದಲ್ಲಿ ಮತ್ತೆ ಗದ್ದಲ ಶುರುವಾಯಿತು.

ಮೀಸಲಾತಿ ಜಟಾಪಟಿ

ಸಂವಿಧಾನ ಕುರಿತು ಚರ್ಚೆ ವೇಳೆ, ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವ ವಿಚಾರವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಜಟಾಪಟಿ ನಡೆಯಿತು.

‘ಕಾಂಗ್ರೆಸ್, ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಯತ್ನಿಸುತ್ತಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ನಡೆಸಿದ ಇಂತಹ ಪ್ರಯತ್ನವನ್ನು ಹೈಕೋರ್ಟ್ ರದ್ದು ಮಾಡಿದೆ’ ಎಂದು ಬಿಜೆಪಿಯ ಜೆ.ಪಿ.ನಡ್ಡಾ ಹೇಳಿದರು.

‘ಓಲೈಕೆ ರಾಜಕಾರಣಕ್ಕಾಗಿ ಕಾಂಗ್ರೆಸ್‌ನವರು ಸಂವಿಧಾನವನ್ನು ತಪ್ಪಾಗಿ ಅರ್ಥೈಸಲು ಯತ್ನಿಸುತ್ತಿದ್ದಾರೆ ಎಂಬುದು ದೇಶಕ್ಕೆ ತಿಳಿಯಬೇಕು’ ಎಂದರು.

ಇದಕ್ಕೆ ಆಕ್ಷೇಪಿಸಿದ ಕಾಂಗ್ರೆಸ್‌ನ ಜೈರಾಮ್ ರಮೇಶ್, ಗುಜರಾತ್ ಸರ್ಕಾರ ನೀಡಿರುವ ಮೀಸಲಾತಿಯನ್ನು ಪ್ರಸ್ತಾಪಿಸಿದರು. ಅಗ, ನಡ್ಡಾ ಅವರ ನೆರವಿಗೆ ಧಾವಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್,‘ಜೈರಾಮ್ ರಮೇಶ್ ಹೇಳುತ್ತಿರುವುದು ತಪ್ಪು. ಗುಜರಾತ್‌ನಲ್ಲಿ ಆರ್ಥಿಕ ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ನೀಡಲಾಗಿದೆ’ ಎಂದರು. ಈ ಹಿಂದಿನ ಕಾಂಗ್ರೆಸ್ ಸರ್ಕಾರವಿದ್ದಾಗ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಹೊರಡಿಸಿದ್ದು ಎನ್ನಲಾದ ಸುತ್ತೋಲೆಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದರು.

‘ಈ ಸುತ್ತೋಲೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಕುರಿತು ಹೇಳಲಾಗಿದೆ. ಗುಜರಾತ್ ಸರ್ಕಾರ ನೀಡಿರುವ ಮೀಸಲಾತಿ ಮತ್ತು ಡಿಒಪಿಟಿಯ ಸುತ್ತೋಲೆಯಲ್ಲಿನ ವಿಷಯ ಬೇರೆಯೇ ಇವೆ. ಇದನ್ನು ತಪ್ಪಾಗಿ ತಿಳಿದುಕೊಂಡಿರುವ ರಮೇಶ್, ಸದನದ ದಾರಿ ತಪ್ಪಿಸುತ್ತಿದ್ದಾರೆ’ ಎಂದರು.

ನಿರ್ಮಲಾ ಮಾತಿಗೆ ಪ್ರತಿಕ್ರಿಯಿಸಿದ ಜೈರಾಮ್ ರಮೇಶ್, ‘ಕಾಂಗ್ರೆಸ್‌ನವರು ಧರ್ಮ ಆಧಾರಿತ ಮೀಸಲಾತಿ ಕುರಿತು ಎಂದಿಗೂ ಮಾತನಾಡಿಲ್ಲ’ ಎಂದು ತಿರುಗೇಟು ನೀಡಿದರು.

‘ಕರ್ನಾಟಕದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ನೀಡಲಾಗಿದೆಯೇ ಹೊರತು ಧರ್ಮಾಧಾರಿತವಾಗಿ ಅಲ್ಲ’ ಎಂದೂ ರಮೇಶ್ ಹೇಳಿದರು. ‘ರಮೇಶ್ ಅವರು ಎಷ್ಟೇ ಸ್ಪಷ್ಟೀಕರಣಗಳನ್ನು ನೀಡಬಹುದು. ಆದರೆ, ಈ ವಿಚಾರವಾಗಿ ಅವರು ಸದನದ ದಾರಿ ತಪ್ಪಿಸುತ್ತಿದ್ದಾರೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

‘ಬಾಂಗ್ಲಾ ಅಲ್ಪಸಂಖ್ಯಾತರ ಪರ ನಿಲ್ಲಿ’

ಬಾಂಗ್ಲಾದೇಶದಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ಹಿಂದೂಗಳು ಮತ್ತು ಕ್ರೈಸ್ತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ ಕಾಂಗ್ರೆಸ್‌ನ ಹಲವು ಸಂಸದರು ಸಂಸತ್ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಬಾಂಗ್ಲಾದೇಶದ ಅಲ್ಪಸಂಖ್ಯಾತರ ಪರವಾಗಿ ನಿಲ್ಲಿ’ ಎಂಬ ಬರಹ ಇದ್ದ ಕೈಚೀಲಗಳೊಂದಿಗೆ ಕಾಂಗ್ರೆಸ್ ಸದಸ್ಯರು ಸಂಸತ್‌ಗೆ ಬಂದರು. ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು.

ಪ್ರಿಯಾಂಕಾ ಗಾಂಧಿ ಅವರು ಹಿಡಿದುಕೊಂಡಿದ್ದ ಕೈಚೀಲದಲ್ಲಿ ‘ಬಾಂಗ್ಲಾದೇಶ ಕೆ ಹಿಂದೂ ಔರ್ ಈಸಾಯಿಯೋಂಕೆ ಸಾಥ್ ಖಡೆ ಹೊ’ (ಬಾಂಗ್ಲಾದೇಶದ ಹಿಂದೂಗಳು ಮತ್ತು ಕ್ರೈಸ್ತರ ಪರವಾಗಿ ನಿಲ್ಲಿ) ಎಂದು ಬರೆಯಲಾಗಿತ್ತು.

ಪ್ರಿಯಾಂಕಾ ಅವರು ಸೋಮವಾರ ‘ಪ್ಯಾಲೆಸ್ಟೀನ್’ ಎಂದು ಬರೆದಿದ್ದ ಕೈಚೀಲವನ್ನು ಸಂಸತ್ತಿಗೆ ತಂದು ಗಮನ ಸೆಳೆದಿದ್ದರು. ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದಲ್ಲಿ ಮೊದಲಿನಿಂದಲೂ ಇಸ್ರೇಲ್ ನಡೆಯನ್ನು ಖಂಡಿಸುತ್ತಿರುವ ಅವರು, ಪ್ಯಾಲೆಸ್ಟೀನ್ ಜನರಿಗೆ ಬೆಂಬಲ ಸೂಚಿಸಲು ಈ ಹೆಜ್ಜೆಯಿಟ್ಟಿದ್ದರು.



ಪ್ರಿಯಾಂಕಾ ಗಾಂಧಿ ಒಳಗೊಂಡಂತೆ ಕಾಂಗ್ರೆಸ್ ಸಂಸದರು ಬಾಂಗ್ಲಾದೇಶದ ಅಲ್ಪಸಂಖ್ಯಾತರಿಗೆ ಬೆಂಬಲ ಸೂಚಿಸಿ ಪ್ರತಿಭಟಿಸಿದರು — ಪಿಟಿಐ ಚಿತ್ರ

ವಿಮಾನಗಳಿಗೆ ಹುಸಿ ಕರೆಗೆ ₹ 1 ಕೋಟಿವರೆಗೂ ದಂಡ

ನವದೆಹಲಿ: ವಿಮಾನಯಾನಕ್ಕೆ ತೊಡಕಾಗುವಂತೆ ಹುಸಿ ಬಾಂಬ್ ಕರೆ ಪ್ರಕರಣದಲ್ಲಿ, ಆರೋಪ ಸಾಬೀತಾದಲ್ಲಿ ₹ 1 ಕೋಟಿವರೆಗೂ ದಂಡ ವಿಧಿಸಲು ಅವಕಾಶ ಇರುವಂತೆ ಕೇಂದ್ರ ಸರ್ಕಾರ ನಿಯಮಗಳಿಗೆ ತಿದ್ದುಪಡಿ ತಂದಿದೆ.

ವಿಮಾನಯಾನ (ಸುರಕ್ಷತಾ) ನಿಯಮ 2023ಕ್ಕೆ ತರಲಾಗಿರುವ ತಿದ್ದುಪಡಿ ಕುರಿತು ಕೇಂದ್ರ ಸರ್ಕಾರ ಭಾನುವಾರ ಅಧಿಸೂಚನೆ ಹೊರಡಿಸಿದೆ.

ತಪ್ಪು ಮಾಹಿತಿ ನೀಡಿದರೆ ಅದನ್ನು ವಿಮಾನಯಾನ ಸುರಕ್ಷತೆ ಮತ್ತು ಭದ್ರತೆ ಅಸ್ತವ್ಯಸ್ತಗೊಳಿಸುವಿಕೆ ಅಥವಾ ವಿಮಾನನಿಲ್ದಾಣದಲ್ಲಿ ಗೊಂದಲ ಮೂಡಿಸುವುದು ಎಂದು ಪರಿಗಣಿಸಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ಒಂದು ಚುನಾವಣೆ: ಚರ್ಚೆಗೆ ಮಣೆ

ಒಂದನೇ ಪುಟದಿಂದ..

‘ಮಸೂದೆಯು ಸಂವಿಧಾನದ ಮೂಲ ರಚನೆಗೆ ವಿರುದ್ಧವಾಗಿದೆ. ರಾಜ್ಯಗಳಿಗೆ ಚುನಾವಣೆಗಳನ್ನು ಯಾವಾಗ ನಡೆಸಬೇಕು ಎಂಬುದನ್ನು ನಿರ್ಧರಿಸಲು ಚುನಾವಣಾ ಆಯೋಗಕ್ಕೆ ಅನಿಯಂತ್ರಿತ ಅಧಿಕಾರವನ್ನು ನೀಡುತ್ತದೆ. ರಾಜ್ಯಗಳನ್ನು ಕೇಂದ್ರ ಸರ್ಕಾರಕ್ಕೆ ಅಧೀನಗೊಳಿಸುತ್ತದೆ. ಪ್ರಾದೇಶಿಕ ಪಕ್ಷಗಳನ್ನು ದುರ್ಬಲಗೊಳಿಸುತ್ತದೆ’ ಎಂಬ ಕಾರಣ ನೀಡಿ ವಿಪಕ್ಷಗಳು ಮಸೂದೆಗೆ ವಿರೋಧ ವ್ಯಕ್ತಪಡಿಸಿದವು. ವಿಪಕ್ಷಗಳ ಆರೋಪವನ್ನು ಕಾನೂನು ಸಚಿವರು ತಳ್ಳಿ ಹಾಕಿದರು. ಹೆಚ್ಚಿನ ಪರಿಶೀಲನೆಗಾಗಿ ಎರಡು ಮಸೂದೆಗಳನ್ನು ಸಂಸತ್ತಿನ ಜಂಟಿ ಸಮಿತಿಗೆ ಕಳುಹಿಸುವ ವಿವರವಾದ ನಿರ್ಣಯವನ್ನು ಶೀಘ್ರದಲ್ಲೇ ಮಂಡಿಸುವುದಾಗಿ ಗೃಹ ಸಚಿವ ಅಮಿತ್ ಶಾ ಅವರು ಸದನಕ್ಕೆ ತಿಳಿಸಿದರು.

ಮಸೂದೆ ಮಂಡಿಸುವುದನ್ನು ವಿರೋಧಿಸಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ಡಿಎಂಕೆ, ತೃಣಮೂಲ ಕಾಂಗ್ರೆಸ್, ಮುಸ್ಲಿಂ ಲೀಗ್, ಶಿವಸೇನೆ (ಯುಬಿಟಿ), ಎಐಎಂಐಎಂ, ಸಿಪಿಐ(ಎಂ), ಎನ್‌ಸಿಪಿ (ಶರದ್ ಪವಾರ್ ಬಣ) ಮತ್ತು ಆರ್‌ಎಸ್‌ಪಿ ಸಂಸದರು ನೋಟಿಸ್‌ಗಳನ್ನು ಸಲ್ಲಿಸಿದ್ದರು.

ಬೇಕು ಮೂರನೇ ಎರಡರಷ್ಟು ಬಹುಮತ

ಒಂದನೇ ಪುಟದಿಂದ..

ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಈ ಹಿಂದೆ ಏಕಕಾಲಿಕ ಚುನಾವಣೆಯನ್ನು ಬೆಂಬಲಿಸಿತ್ತು. ಈ ಪಕ್ಷವು ನಾಲ್ವರು ಸಂಸದರನ್ನು ಹೊಂದಿದೆ. ಟಿಡಿಪಿಯು ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಯಾದ ಬಳಿಕ ಈ ಪಕ್ಷವು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದೆ. ಈ ಪಕ್ಷವು ಮಸೂದೆ ಕುರಿತ ತನ್ನ ನಿಲುವು ಬದಲಾಯಿಸುವ ಸಾಧ್ಯತೆ ಇದೆ.

ನಾಲ್ವರು ಪಕ್ಷೇತರ ಸಂಸದರಾದ ಇಂಜಿನಿಯರ್ ರಶೀದ್, ಅಮೃತಪಾಲ್ ಸಿಂಗ್, ಸರಬ್ಜೀತ್ ಖಾಲ್ಸಾ ಮತ್ತು ಉಮೇಶ್‌ಬಾಯಿ ಪಟೇಲ್ ಅವರು ತಮ್ಮ ನಿಲುವು ತಿಳಿಸಿಲ್ಲ. 543 ಸದಸ್ಯ ಬಲದ ಲೋಕಸಭೆಯಲ್ಲಿ ಒಂದು ಸ್ಥಾನ ಖಾಲಿಯಿದೆ. ಸದನವು ಪೂರ್ಣ ಬಲದಲ್ಲಿದ್ದಾಗ ಮೂರನೇ ಎರಡರಷ್ಟು ಬಹುಮತಕ್ಕೆ 362 ಮತಗಳ ಅಗತ್ಯವಿದೆ.

ರಾಜ್ಯಸಭೆಯಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಆರು ನಾಮನಿರ್ದೇಶಿತ ಸದಸ್ಯರು ಸೇರಿದಂತೆ 125 ಸಂಸದರ ಬೆಂಬಲ ಹೊಂದಿದೆ. ಇಂಡಿಯಾ ಮೈತ್ರಿಕೂಟದ ಬಲ 86. ವೈಎಸ್‌ಆರ್ ಕಾಂಗ್ರೆಸ್ ಎಂಟು, ಬಿಜೆಡಿ ಏಳು, ಎಐಎಡಿಎಂಕೆ 4, ಬಿಆರ್‌ಎಸ್ 4 ಮತ್ತು ಬಿಎಸ್‌ಪಿ 1 ಸಂಸದರನ್ನು ಮೇಲ್ಮನೆಯಲ್ಲಿ ಹೊಂದಿವೆ.

ಸಂಸದರ ಗೈರು: ಕಾರಣ ಕೇಳಲಿರುವ ಬಿಜೆಪಿ

ನವದೆಹಲಿ: ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಕಾರ್ಯವಿಧಾನ ರೂಪಿಸುವ ಎರಡು ಮಸೂದೆಗಳನ್ನು ಲೋಕಸಭೆಯಲ್ಲಿ ಮಂಗಳವಾರ ಮಂಡಿಸುವ ಸಂದರ್ಭ ತನ್ನ 20ರಷ್ಟು ಸಂಸದರು ಗೈರಾಗಿದ್ದದ್ದನ್ನು ಬಿಜೆಪಿಯು ಗಂಭೀರವಾಗಿ ಪರಿಗಣಿಸಿದೆ.

ಮಸೂದೆ ಮಂಡನೆ ವೇಳೆ ಸದನದಲ್ಲಿ ಹಾಜರಿರಲು ಬಿಜೆಪಿಯು ತನ್ನ ಸದಸ್ಯರಿಗೆ ‘ವಿಪ್’ ನೀಡಿತ್ತು. ಆದರೂ, ಇಂತಹ ನಿರ್ಣಾಯಕ ಸಂದರ್ಭದಲ್ಲಿ ಹಲವು ಸಂಸದರು ಗೈರುಹಾಜರಾಗಿದ್ದು ಬಿಜೆಪಿ ನಾಯಕರಿಗೆ ಕೋಪ ತರಿಸಿದೆ ಎಂದು ಮೂಲಗಳು ಹೇಳಿವೆ.

ಸದನದಲ್ಲಿ ಗೈರುಹಾಜರಾಗುವ ಬಗ್ಗೆ ಕೆಲವು ಸಂಸದರು ಪಕ್ಷದ ಮುಖ್ಯ ಸಚೇತಕರಿಗೆ ಮುಂಚಿತವಾಗಿಯೇ ಮಾಹಿತಿ ನೀಡಿದ್ದರು. ಗೈರು ಹಾಜರಾದ ಉಳಿದ ಸದಸ್ಯರಿಂದ ಕಾರಣ ಕೇಳಲು ಪಕ್ಷವು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ಸಿ.ಆರ್. ಪಾಟೀಲ್ ಸೇರಿದಂತೆ ಕೆಲವು ಸಂಸದರು ರಾಜಸ್ಥಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದರಿಂದ ಸಂಸತ್‌ನಲ್ಲಿ ಹಾಜರಿರಲಿಲ್ಲ.

ಬಿಜೆಪಿಯ ಮಿತ್ರಪಕ್ಷಗಳ ನಾಲ್ಕರಿಂದ ಐದು ಸಂಸದರು ಮತದಾನದ ವೇಳೆ ಉಪಸ್ಥಿತರಿರಲಿಲ್ಲ. ಅವರ ಬಗ್ಗೆಯೂ ವಿಚಾರಿಸಲು ಬಿಜೆಪಿ ನಿರ್ಧರಿಸಿದೆ ಎನ್ನಲಾಗಿದೆ.

ಮಸೂದೆಯನ್ನು ಮಂಡಿಸಬಹುದೇ ಎಂದು ಪ್ರಶ್ನಿಸಿ ಮತಕ್ಕೆ ಹಾಕಿದಾಗ, ಪರವಾಗಿ 269 ಹಾಗೂ ವಿರುದ್ಧವಾಗಿ 198 ಮತಗಳು ಬಿದ್ದವು.

ನೀಟ್ ಸ್ವರೂಪ ಶೀಘ್ರ ನಿರ್ಧಾರ

ಒಂದನೇ ಪುಟದಿಂದ...

‘ನೀಟ್‌ಗೆ ಸಂಬಂಧಿಸಿದ ಆಡಳಿತಾತ್ಮಕ ವಿಚಾರಗಳು ಆರೋಗ್ಯ ಸಚಿವಾಲಯ ವ್ಯಾಪ್ತಿಗೆ ಬರುತ್ತವೆ. ಹೀಗಾಗಿ, ಈ ಪ್ರವೇಶ ಪರೀಕ್ಷೆಯನ್ನು ಯಾವ ವಿಧಾನದಲ್ಲಿ ನಡೆಸಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ. ಅತ್ಯುತ್ತಮ ಎಂಬುದಾಗಿ ಕಂಡುಬರುವ ವಿಧಾನದಲ್ಲಿಯೇ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ), ‘ನೀಟ್’ ಅನ್ನು ಸಂಘಟಿಸಲಿದೆ’ ಎಂದು ಪ್ರಧಾನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಕೆಲ ಪಠ್ಯಪುಸ್ತಕ ಬೆಲೆ ಕಡಿತ’

ಒಂದನೇ ಪುಟದಿಂದ...

ಎನ್‌ಸಿಇಆರ್‌ಟಿ ಪ್ರಸ್ತುತ ವರ್ಷಕ್ಕೆ 5 ಕೋಟಿ ಪಠ್ಯಪುಸ್ತಕಗಳನ್ನು ಮುದ್ರಿಸುತ್ತಿದೆ. ಮುಂದಿನ ವರ್ಷದಿಂದ 15 ಕೋಟಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಸಾಧ್ಯವಾಗುವಂತೆ ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ.

ಕೆಲ ತರಗತಿಗಳ ಪಠ್ಯಪುಸ್ತಕಗಳನ್ನು ಅಧಿಕ ಪ್ರಮಾಣದಲ್ಲಿ ಮುದ್ರಿಸಲಾಗುತ್ತಿದ್ದರೆ, ಕೆಲ ತರಗತಿಗಳ ಪಠ್ಯಪುಸ್ತಕಗಳ ಬೆಲೆಗಳನ್ನು ಕಡಿತಗೊಳಿಸಲಾಗುತ್ತದೆ. ಆದರೆ, ಪಾಲಕರ ಮೇಲೆ ಹಣಕಾಸಿನ ಹೊರೆ ಆಗಬಾರದು ಎಂಬ ದೃಷ್ಟಿಯಿಂದ ಯಾವುದೇ ತರಗತಿಯ ಪಠ್ಯಪುಸ್ತಕಗಳ ಬೆಲೆಗಳನ್ನು ಹೆಚ್ಚಳ ಮಾಡುತ್ತಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೇ, ನೂತನ ಪಠ್ಯಕ್ರಮದ ಅನ್ವಯ ಸಿದ್ಧಪಡಿಸಲಾಗುತ್ತಿರುವ 9 ರಿಂದ 12ನೇ ತರಗತಿ ವರೆಗಿನ ಪಠ್ಯಪುಸ್ತಕಗಳು 2026–27ನೇ ಶೈಕ್ಷಣಿಕ ವರ್ಷದಿಂದ ಲಭ್ಯವಾಗಲಿವೆ ಎಂದೂ ಅವರು ತಿಳಿಸಿದ್ದಾರೆ.



ಸಂಭ್ರಮ ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ತಂಗಮಾರ್ಗ್ ಬಳಿಯ ದ್ರುಂಗ್ ಜಲಪಾತ ಹೆಪ್ಪುಗಟ್ಟಿದೆ. ಈ ಮನಮೋಹಕ ತಾಣದಲ್ಲಿ ಪ್ರವಾಸಿಗರು ಮಂಗಳವಾರ ಸಂಭ್ರಮಿಸಿದರು – ಪಿಟಿಐ ಚಿತ್ರ

ಈ ಮಸೂದೆಗಳು ಮೂಲಭೂತ ರಚನೆಯ ಸಿದ್ಧಾಂತದ ಮೇಲೆ ದಾಳಿ ಮಾಡಿಲ್ಲ. ಸಂಸತ್ತಿನ ಅಧಿಕಾರವನ್ನು ಮೊಟಕುಗೊಳಿಸುವುದಿಲ್ಲ. ನ್ಯಾಯಾಂಗ ಪರಾಮರ್ಶೆ, ಸಂವಿಧಾನದ ಒಕ್ಕೂಟ ಸ್ವರೂಪ, ಜಾತ್ಯತೀತ ಗುಣ, ಸಂವಿಧಾನದ ಪರಮಾಧಿಕಾರದಂತಹ ತತ್ವಗಳ ಬದಲಾವಣೆ ಆಗುವುದಿಲ್ಲ. ರಾಜಕೀಯದ ಕಾರಣದಿಂದ ವಿಪಕ್ಷಗಳ ಸದಸ್ಯರು ಮಸೂದೆಗಳನ್ನು ವಿರೋಧಿಸುತ್ತಿದ್ದಾರೆ.

ಅರ್ಜುನ್ ರಾಮ್ ಮೇಘವಾಲ್, ಕಾನೂನು ಸಚಿವ

ಮಸೂದೆಗಳು ಸರ್ವಾಧಿಕಾರ ತರುವ ಪ್ರಯತ್ನ. ಈ ಕ್ರಮವು ಸಂವಿಧಾನ ವಿರೋಧಿ, ಒಕ್ಕೂಟ ವ್ಯವಸ್ಥೆಯ ವಿರೋಧಿ, ಬಡವರು, ಹಿಂದುಳಿದವರು ಮತ್ತು ಮುಸ್ಲಿಂ ವಿರೋಧಿ.

ಧರ್ಮೇಂದ್ರ ಯಾದವ್, ಸಮಾಜವಾದಿ ಪಕ್ಷ

ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರ ಅಥವಾ ಸಂಸತ್ತಿಗೆ ಅಧೀನವಾಗಿಲ್ಲ. ಇದು ಚುನಾವಣಾ ಸುಧಾರಣೆ ಅಲ್ಲ. ಇದು ಕೇವಲ ಒಬ್ಬ ವ್ಯಕ್ತಿಯ ಆಕಾಂಕ್ಷೆಗಳಿಗೆ ಅನುಗುಣವಾಗಿದೆ.

ಕಲ್ಯಾಣ್ ಬ್ಯಾನರ್ಜಿ, ಟಿಎಂಸಿ

ಈ ಮಸೂದೆಯು ಅಧ್ಯಕ್ಷೀಯ ವ್ಯವಸ್ಥೆಯನ್ನು ಪರಿಚಯಿಸುತ್ತದೆ. ರಾಜಕೀಯ ಲಾಭದ ಗುರಿಯನ್ನಷ್ಟೇ ಹೊಂದಿದೆ. ಇದು ಜಾರಿಯಾದರೆ ಪ್ರಾದೇಶಿಕ ಪಕ್ಷಗಳು ನಾಶವಾಗಲಿವೆ. ಇದೊಂದು ಕರಾಳ ಮಸೂದೆ.

ಅಸಾದುದ್ದೀನ್ ಒವೈಸಿ, ಎಐಎಂಐಎಂ

ಸರ್ಕಾರಕ್ಕೆ ಮೂರನೇ ಎರಡರಷ್ಟು ಬಹುಮತವಿಲ್ಲ. ಐದು ವರ್ಷ ಅವಧಿಗೆ ಸರ್ಕಾರವನ್ನು ಆಯ್ಕೆ ಮಾಡುವ ಹಕ್ಕು ಮತದಾರರಿಗೆ ಇದೆ. ಈ ಹಕ್ಕನ್ನು ಮೊಟಕುಗೊಳಿಸಲು ಸಾಧ್ಯವಿಲ್ಲ. ಹೆಚ್ಚಿನ ಪರಾಮರ್ಶೆಗೆ ಜಂಟಿ ಸಂಸದೀಯ ಸಮಿತಿಗೆ ಕಳುಹಿಸಬೇಕು.

ಟಿ.ಆರ್.ಬಾಲು, ಡಿಎಂಕೆ

ಲೋಕಸಭೆಯೊಂದಿಗೆ ನಿರ್ದಿಷ್ಟ ರಾಜ್ಯಕ್ಕೆ ಚುನಾವಣೆ ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡುವುದು ಸರಿಯಲ್ಲ.

ಅನಿಲ್ ದೇಸಾಯಿ, ಶಿವಸೇನಾ (ಯುಬಿಟಿ)

ಈ ಮಸೂದೆಗಳು ದೇಶದಲ್ಲಿ ಸರ್ವಾಧಿಕಾರಕ್ಕೆ ಕಾರಣವಾಗುತ್ತವೆ.

ಅಮ್ರಾ ರಾಮ್, ಸಿಪಿಎಂ

ವಿಧಾನಸಭೆಗಳನ್ನು ವಿಸರ್ಜಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ನೀಡುವುದು ತರವಲ್ಲ. ಮಸೂದೆ ಮಂಡಿಸಿದರೂ ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕು.

ಸುಪ್ರಿಯಾ ಸುಳೆ, ಎನ್‌ಸಿಪಿ (ಶರದ್ ಪವಾರ್ ಬಣ)

ಮಸೂದೆಯು ಅಸ್ಪಷ್ಟ. 2029ರ ನಂತರ 17 ವಿಧಾನಸಭೆಗಳಿಗೆ ಚುನಾವಣೆಗಳು ನಡೆಯಲಿವೆ. ಒಂದು ವೇಳೆ ಮಸೂದೆ ಅಂಗೀಕರಿಸಿದರೆ ಅವುಗಳ ಅಧಿಕಾರಾವಧಿ ಮೊಟಕುಗೊಳ್ಳಲಿದೆ.

ಎನ್.ಕೆ. ಪ್ರೇಮಚಂದ್ರನ್, ಆರ್‌ಎಸ್‌ಪಿ

ಏಕಕಾಲದಲ್ಲಿ ಚುನಾವಣೆ ನಡೆಸುವ ಮಸೂದೆಗೆ ಪಕ್ಷದ ಬೆಂಬಲ ಇದೆ. ಇದರಿಂದ ಚುನಾವಣಾ ವೆಚ್ಚ ಕಡಿಮೆಯಾಗಲಿದೆ.

ಚಂದ್ರಶೇಖರ್ ಪೆಮ್ಮಸಾನಿ, ಕೇಂದ್ರ ಸಚಿವ (ಟಿಡಿಪಿ)

ಕಳೆದ ಆರು ತಿಂಗಳಿಂದ ವಿಪಕ್ಷಗಳು ಅದರಲ್ಲೂ ಕಾಂಗ್ರೆಸ್ ಪ್ರತಿ ಸುಧಾರಣೆಯನ್ನೂ ಅಸಾಂವಿಧಾನಿಕ ಎಂದು ಬಿಂಬಿಸುತ್ತಿದೆ. ವಿಪಕ್ಷಗಳಿಗೆ ಸುಧಾರಣೆಗಳೆಂದರೆ ಅಲರ್ಜಿ.

ಶ್ರೀಕಾಂತ್ ಶಿಂದೆ, ಶಿವಸೇನಾ

ಹಂತಕನಿಗೆ ಜೀವದಾನ ನೀಡಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): 2016ರಲ್ಲಿ 4 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ, ಹತ್ಯೆ ಮಾಡಿದ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಶಂಭುಭಾಯ್ ರಾಯ್ಸಂಗ್‌ಭಾಯಿ ಪಡಿಹಾರ್ ಎಂಬಾತನಿಗೆ ಜೀವದಾನ ನೀಡಿರುವ ಸುಪ್ರೀಂ ಕೋರ್ಟ್, ಶಿಕ್ಷೆಯನ್ನು 25 ವರ್ಷಗಳ ಜೈಲುವಾಸಕ್ಕೆ ಮಿತಿಗೊಳಿಸಿದೆ.

ಅಪರಾಧವು ಪೈಶಾಚಿಕ ಕೃತ್ಯವಾಗಿತ್ತು ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಅರವಿಂದ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ಪೀಠವು, ಅಪರಾಧಿಯಲ್ಲಿ ಸುಧಾರಣೆ ಕಂಡುಬರುವ ಸಾಧ್ಯತೆಯು ಸಂಪೂರ್ಣವಾಗಿ ಇಲ್ಲವಾಗಿಲ್ಲ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಮೂರನೇ ಬಾರಿ ಡಿಡಿಸಿಎ ಅಧ್ಯಕ್ಷರಾಗಿ ರೋಹನ್ ಜೇಟ್ಲಿ



ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಸಚಿವ ದಿವಂಗತ ಅರುಣ್ ಜೇಟ್ಲಿ ಅವರ ಪುತ್ರ ರೋಹನ್ ಜೇಟ್ಲಿ ಅವರು ಸತತ ಮೂರನೇ ಅವಧಿಗೆ ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಮಂಡಳಿಯ (ಡಿಡಿಸಿಎ) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಅವರು 800 ಮತಗಳಿಂದ ಕ್ರಿಕೆಟಿಗ ಮತ್ತು ಸಂಸದ ಕೀರ್ತಿ ಆಜಾದ್ ಅವರನ್ನು ಮಣಿಸಿದರು.

ರೋಹನ್ 1,577 ಮತ್ತು ಆಜಾದ್ 777 ಮತಗಳನ್ನು ಪಡೆದರು. ಮೂರು ವರ್ಷಗಳ ಅವಧಿಗೆ ರೋಹನ್ ಅಧ್ಯಕ್ಷರಾಗಿರುತ್ತಾರೆ. ಅವರ ತಂದೆ ಅರುಣ್ ಜೇಟ್ಲಿ ಅವರು 14 ವರ್ಷಗಳ ಕಾಲ ಡಿಡಿಸಿಎ ಅಧ್ಯಕ್ಷರಾಗಿದ್ದರು.

ಕರ್ನಾಟಕಕ್ಕೆ ಮಣಿದ ಜಮ್ಮು

ಬೆಂಗಳೂರು: ಶಿಖರ್ ಶೆಟ್ಟಿ (46ಕ್ಕೆ 4) ಮತ್ತು ಮೊಹಸಿನ್ ಖಾನ್ (21ಕ್ಕೆ 3) ಅವರ ಬೌಲಿಂಗ್ ದಾಳಿಯ ಬಲದಿಂದ ಕರ್ನಾಟಕ ತಂಡವು ಬಿಸಿಸಿಐ ಪುರುಷರ (23 ವರ್ಷದೊಳಗಿನ) ರಾಜ್ಯ ‘ಎ’ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಮ್ಮು ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತು.



ಶಿಖರ್ ಶೆಟ್ಟಿ

ಭಿಲಾಯ್‌ನ ಸೆಕ್ಟರ್ 10 ಬಿಎಸ್‌ಪಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಮ್ಮು ತಂಡವು 44.2 ಓವರ್‌ಗಳಲ್ಲಿ 209 ರನ್‌ಗೆ ಕುಸಿಯಿತು. ಕರ್ನಾಟಕ ತಂಡವು ಹರ್ಷಿಲ್ ಧರ್ಮಾನಿ (86; 85ಎ) ಮತ್ತು ಅನೀಶ್ವರ್ ಗೌತಮ್ (51;61ಎ) ಅವರ ಬ್ಯಾಟಿಂಗ್ ನೆರವಿನಿಂದ 38.5 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 210 ರನ್ ಗಳಿಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಜಮ್ಮು: 42.2 ಓವರ್‌ಗಳಲ್ಲಿ 209 (ಆರ್ಯ ಠಾಕೂರ್ 39, ಯಾವರ್ ಹಸನ್ 39, ಕನ್ಹಯ್ಯ ವಾಧ್ವಾನ್ 465; ಮನ್ವಂತ್ ಕುಮಾರ್ ಎಲ್ 43ಕ್ಕೆ 2, ಮೊಹಸಿನ್ ಖಾನ್ 21ಕ್ಕೆ 3, ಶಿಖರ್ ಶೆಟ್ಟಿ 46ಕ್ಕೆ 4). ಕರ್ನಾಟಕ: 38.5 ಓವರ್‌ಗಳಲ್ಲಿ 3 ವಿಕೆಟ್‌ಗೆ 210 (ಪ್ರಖರ್ ಚತುರ್ವೇದಿ 38, ಹರ್ಷಿಲ್ ಧರ್ಮಾನಿ 86, ಅನೀಶ್ವರ್ ಗೌತಮ್ 51).

ಪ್ರೊ ಕಬಡ್ಡಿ: ಯೋಧಾಸ್‌ಗೆ ಜಯ

ಪುಣೆ (ಪಿಟಿಐ): ಭವಾನಿ ರಜಪೂತ್ (11) ಅವರ ರೇಡಿಂಗ್ ಬಲದಿಂದ ಯುಪಿ ಯೋಧಾಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 31–24ರಿಂದ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು.

ಇಲ್ಲಿನ ಬಾಲೇವಾಡಿ ಕ್ರೀಡಾ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ 15–13 ಮುನ್ನಡೆ ಹೊಂದಿದ್ದ ಯೋಧಾಸ್, ಉತ್ತರಾರ್ಧದಲ್ಲಿ ಅಂತರವನ್ನು ಮತ್ತಷ್ಟು ಹೆಚ್ಚಿಸಿಕೊಂಡಿತು.

ಈ ಸೋಲಿನ ಹೊರತಾಗಿಯೂ ಹರಿಯಾಣ ತಂಡವು 79 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಯೋಧಾಸ್ (69) ಮೂರನೇ ಸ್ಥಾನಕ್ಕೆ ಏರಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 35–26ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಸೋಲಿಸಿತು. ಬುಲ್ಸ್‌ಗೆ ಇದು 20 ಪಂದ್ಯಗಳಲ್ಲಿ 17ನೇ ಸೋಲು.

ಬೆಳೆದ ಬಾಲ ದೂರವಾದ ಸೋಲು!

ಗಾಬಾ ಟೆಸ್ಟ್: ರಾಹುಲ್–ಜಡೇಜ ಅರ್ಧಶತಕ • ಫಾಲೋ ಆನ್ ತಪ್ಪಿಸಿದ ಆಕಾಶ್ – ಬೂಮ್ರಾ

• ಮಧು ಜವಳಿ



ರವೀಂದ್ರ ಜಡೇಜ

ಕೆ.ಎಲ್‌.ರಾಹುಲ್

ಬ್ರಿಸ್ಬೇನ್: ಕೆ.ಎಲ್. ರಾಹುಲ್ ಮತ್ತೊಮ್ಮೆ ಮಹತ್ವದ ಕಾಣಿಕೆ ನೀಡಿದರು. ರವೀಂದ್ರ ಜಡೇಜ ಅವರು ಕೆಳಕ್ರಮಾಂಕದಲ್ಲಿ ತಾವೆಷ್ಟು ಮುಖ್ಯ ಎಂಬುದನ್ನು ಮತ್ತೆ ಸಾಬೀತುಮಾಡಿದರು. ಇವರಿಬ್ಬರ ಅರ್ಧಶತಕಗಳ ಬಲದಿಂದ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಫಾಲೋ ಆನ್ ತಪ್ಪಿಸಿಕೊಂಡಿತು.

ಮುಖ್ಯಾಂಶಗಳು

- ಪ್ಯಾಟ್ ಕಮಿನ್ಸ್‌ಗೆ ನಾಲ್ಕು ವಿಕೆಟ್
- ಜೋಷ್ ಹ್ಯಾಜಲ್‌ವುಡ್‌ಗೆ ಗಾಯ
- ಕೊನೆಯ ವಿಕೆಟ್ ಜೊತೆಯಾಟದಲ್ಲಿ ಮಿಂಚಿದ ಬೂಮ್ರಾ–ಆಕಾಶ್

ಕೊನೆಯ ವಿಕೆಟ್ ಜೊತೆಯಾಟದಲ್ಲಿ ಆಕಾಶ್ ದೀಪ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಚೆಂದದ ಬ್ಯಾಟಿಂಗ್ ಭಾರತವನ್ನು ಸೋಲಿನ ಆತಂಕದಿಂದ ದೂರ ಕರೆದೊಯ್ಯುವ ವಿಶ್ವಾಸ ತುಂಬಿತು.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೂರನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಮಂಗಳವಾರ ‘ಬಾಲಂಗೋಚಿ’ ಬ್ಯಾಟರ್‌ಗಳಾದ ಆಕಾಶ್ (ಬ್ಯಾಟಿಂಗ್ 27; 31ಎ, 4X2, 6X1) ಮತ್ತು ಬೂಮ್ರಾ (ಬ್ಯಾಟಿಂಗ್ 10; 27ಎ, 6X1) ಅವರು ಆಸ್ಟ್ರೇಲಿಯಾದ ಬೌಲರ್‌ಗಳ ಬಿರುಗಾಳಿ ವೇಗ, ಬೌನ್ಸರ್‌ಗಳನ್ನು ಸಮರ್ಥವಾಗಿ ಎದುರಿಸಿದರು.

ಫಾಲೋಆನ್ ತಪ್ಪಿಸಿಕೊಳ್ಳಲು ಭಾರತಕ್ಕೆ 33 ರನ್ ಅಗತ್ಯವಿತ್ತು. ಆದರೆ ಇನಿಂಗ್ಸ್‌ಗೆ ತೆರೆಯೆಳೆಯಲು ಆತಿಥೇಯರಿಗೆ ಒಂದು ವಿಕೆಟ್ ಬೇಕಿತ್ತು. ಈ ನಾಟಕೀಯ ಸನ್ನಿವೇಶದಲ್ಲಿ ಆಕಾಶ್ ಮತ್ತು ಬೂಮ್ರಾ ಅವರ ಆಟ ರಂಗೇರಿತು. ಪ್ಯಾಟ್ ಕಮಿನ್ಸ್ ಹಾಗೂ ಮಿಚೆಲ್ ಸ್ಟಾರ್ಕ್ ಅವರ ಸ್ವಿಂಗ್, ಬೌನ್ಸ್ ಎಸೆತಗಳಿಗೆ ದಿಟ್ಟ ಉತ್ತರ ಕೊಟ್ಟರು. ಮನರಂಜನೆ ಮತ್ತು ಮೌಲ್ಯಯುತವಾದ ಜೊತೆಯಾಟ ಬೆಸೆದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ಭಾರತ 9 ವಿಕೆಟ್‌ಗಳಿಗೆ 252 ರನ್ ಗಳಿಸಿತು.

ಇನಿಂಗ್ಸ್ ಮುಗಿಸಿ ಪೆವಿಲಿಯನ್‌ನತ್ತ ನಡೆದ ಆಕಾಶ್ ಮತ್ತು ಬೂಮ್ರಾ ಅವರನ್ನು ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವಿಸಿದರು. ರೋಹಿತ್ ಪಡೆಗೆ ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಇನ್ನೂ 193 ರನ್ ಬೇಕು. ಪಂದ್ಯದ ಕೊನೆಯ ದಿನವಾದ ಬುಧವಾರ ಬಹುತೇಕ ಅವಧಿಯಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಸೋಮವಾರ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗಳಿಗೆ 51 ರನ್ ಗಳಿಸಿದ್ದ ಭಾರತ ತಂಡವನ್ನು ಸಂಕಷ್ಟದಿಂದ ಪಾರು ಮಾಡುವಲ್ಲಿ ಜಡೇಜ ದಿಟ್ಟತನ ತೋರಿದರು. ಎಡಗೈ ಬ್ಯಾಟರ್ 23 ಓವರ್‌ಗಳಲ್ಲಿ ಒಂದೂ ವಿಕೆಟ್ ಪತನವಾಗದಂತೆ ನೋಡಿಕೊಂಡರು. 35 ವರ್ಷದ ಆಲ್‌ರೌಂಡರ್ ಅರ್ಧಶತಕ ತಲುಪಿದಾಕ್ಷಣ ತಮ್ಮ ಬ್ಯಾಟ್ ಅನ್ನು ಖಡ್ಗದಂತೆ ತಿರುಗಿಸಿ ಸಂಭ್ರಮಿಸಿದರು.

ಕೆ.ಎಲ್. ರಾಹುಲ್ ಅವರೊಂದಿಗೆ ಜಡೇಜ ಇನಿಂಗ್ಸ್‌ಗೆ ಸ್ಥಿರತೆ ತುಂಬಿದರು. ರಾಹುಲ್ ಜೊತೆ ಮೂರನೇ ದಿನದಾಟದಲ್ಲಿ ಕ್ರೀಸ್‌ನಲ್ಲಿ ಉಳಿದಿದ್ದ ರೋಹಿತ್ ಶರ್ಮಾ (10; 27ಎ) ಕಮಿನ್ಸ್ ಬೌಲಿಂಗ್‌ನಲ್ಲಿ ಔಟಾಗುವ ಮುನ್ನ ಒಂದಷ್ಟು ಭರವಸೆಯ ಆಟ ತೋರಿಸಿದರು. ಈ ಹಂತದಲ್ಲಿ ತಮಗೆ ಉತ್ತಮವಾಗಿ ಜೊತೆ ನೀಡುವ ಬ್ಯಾಟರ್ ನಿರೀಕ್ಷೆಯಲ್ಲಿದ್ದ ರಾಹುಲ್ ಅವರಿಗೆ ರವೀಂದ್ರ ಲಭಿಸಿದರು. ರಾಹುಲ್ 33 ರನ್ ಗಳಿಸಿ ಆಡುವಾಗ ಸ್ಲಿಪ್ ಫೀಲ್ಡರ್ ಸ್ಟೀವ್ ಸ್ಮಿತ್ ಅವರಿಂದ ಜೀವದಾನ ಪಡೆದರು. ಇದರಿಂದಾಗಿ ಕನ್ನಡನಾಡಿನ ಆಟಗಾರ 84 (139ಎ) ಗಳಿಸಲು ಸಾಧ್ಯವಾಯಿತು. ಅತ್ಯಂತ ಶಿಸ್ತುಬದ್ಧ ರಕ್ಷಣಾತ್ಮಕ ಆಟವಾಡಿದ ಅವರು ಕೆಲವು ಎಸೆತಗಳಲ್ಲಿ ದೇಹಕ್ಕೆ ಪೆಟ್ಟು ತಿಂದರು. ಚೆಂದದ ಕವರ್ ಡ್ರೈವ್ ಕೂಡ ಆಡಿದರು. ಬೆಳಿಗ್ಗೆ ಅಭ್ಯಾಸ ಮಾಡುವಾಗ ವೇಗಿ ಜೋಷ್ ಹ್ಯಾಜಲ್‌ವುಡ್ ಮೀನಖಂಡದ ಸ್ನಾಯುಸೆಳೆತದಿಂದ ಬಳಲಿದ್ದರು. ದಿನದಾಟದಲ್ಲಿ ಅವರು ಒಂದು ಓವರ್ ಮಾತ್ರ ಹಾಕಿದರು. ಸರಣಿಯ ಮುಂದಿನ ಎಲ್ಲ ಪಂದ್ಯಗಳಿಗೂ ಅವರು ಅಲಭ್ಯರಾಗಲಿದ್ದಾರೆ ಎಂಬ ಕಹಿಸುದ್ದಿ ಆಸ್ಟ್ರೇಲಿಯಾವನ್ನು ಕಾಡಿತು. ಮಧ್ಯದಲ್ಲಿ ಒಂದಿಷ್ಟು ಹೊತ್ತು ಮಳೆಯೂ ಸುರಿಯಿತು.

ಇದರ ಲಾಭ ಪಡೆದ ರಾಹುಲ್ –ರವೀಂದ್ರ ಜೊತೆಯಾಟ ಕಟ್ಟಿದರು. ಆಸ್ಟ್ರೇಲಿಯಾದ ಮೊತ್ತವನ್ನು ನಿಧಾನವಾಗಿ ಕರಗಿಸುವತ್ತ ಹೆಜ್ಜೆ ಹಾಕಿದರು. ಶತಕ ಬಾರಿಸುವ ನಿರೀಕ್ಷೆ ಮೂಡಿಸಿದ್ದ ರಾಹುಲ್ ಓಟಕ್ಕೆ ಸ್ಪಿನ್ನರ್ ನೇಥನ್ ಲಯನ್ ಕಡಿವಾಣ ಹಾಕಿದರು. ಈ ಬಾರಿ ಯಾವುದೇ ತಪ್ಪು ಮಾಡದ ಫೀಲ್ಡರ್ ಸ್ಮಿತ್ ಅವರು ರಾಹುಲ್ ಕ್ಯಾಚ್ ಪಡೆದರು. ಇಲ್ಲಿಗೆ 67 ರನ್‌ಗಳ ಐದನೇ ವಿಕೆಟ್ ಜೊತೆಯಾಟ ಮುರಿಯಿತು. ಕಳೆದೆರಡು ಪಂದ್ಯಗಳಲ್ಲಿ ಮಿಂಚಿದ್ದ ನಿತೀಶ್ ಕುಮಾರ್ ರೆಡ್ಡಿ ಇಲ್ಲಿ ಹೆಚ್ಚು ಹೊತ್ತು ಆಡಲಿಲ್ಲ. ಕಮಿನ್ಸ್ ಹಾಕಿದ ಬೌನ್ಸರ್ ಪುಲ್ ಮಾಡುವ ಭರದಲ್ಲಿ ಮಿಚೆಲ್ ಮಾರ್ಷ್‌ಗೆ ಕ್ಯಾಚಿತ್ತರು. ಸ್ಟಾರ್ಕ್ ಎಸೆತದಲ್ಲಿ ಸಿರಾಜ್ ಔಟಾದರು. ಈ ಹಂತದಲ್ಲಿ ಭಾರತದ ಮೇಲೆ ಫಾಲೋ ಆನ್ ಹೇರುವ ತರಾತುರಿಯಲ್ಲಿದ್ದ ಆತಿಥೇಯರಿಗೆ ಬೂಮ್ರಾ ಮತ್ತು ಆಕಾಶ್ ಅಡ್ಡಿಯಾದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 445 (117.1 ಓವರ್‌ಗಳಲ್ಲಿ)
ಭಾರತ 9 ವಿಕೆಟ್‌ಗೆ 252 (74.5 ಓವರ್‌ಗಳಲ್ಲಿ) (ಸೋಮವಾರ 17 ಓವರ್‌ಗಳಲ್ಲಿ 4 ಕ್ಕೆ 51)
ರೋಹಿತ್ ಸಿ ಕ್ಯಾರಿ ಬಿ ಕಮಿನ್ಸ್ 10 (27 ಎ, 4x2)
ರಾಹುಲ್ ಸಿ ಸ್ಮಿತ್ ಬಿ ಲಯನ್ 84 (139 ಎ, 4x8)
ಜಡೇಜ ಸಿ ಮಾರ್ಷ್ ಬಿ ಕಮಿನ್ಸ್ 77 (123 ಎ, 4x7, 6x1)
ನಿತೀಶ್ ಬಿ ಕಮಿನ್ಸ್ 16 (61 ಎ, 4x1)
ಸಿರಾಜ್ ಸಿ ಕ್ಯಾರಿ ಬಿ ಸ್ಟಾರ್ಕ್ 1 (11 ಎ)
ಜಸ್‌ಪ್ರೀತ್ ಬೂಮ್ರಾ ಅಜೇಯ 10 (27ಎ, 6x1)
ಆಕಾಶ್ ದೀಪ್ ಅಜೇಯ 27 (31 ಎ, 4x2, 6x1)
ಇತರೆ:10(ಬೈ 4, ಲೆಗ್‌ಬೈ 2, ನೋಬಾಲ್ 3, ವೈಡ್ 1)
ವಿಕೆಟ್ ಪತನ: 5–74 (ರೋಹಿತ್ ಶರ್ಮಾ, 23.3), 6–141 (ಕೆ.ಎಲ್.ರಾಹುಲ್, 42.3), 7– 194 (ನಿತೀಶ್ ಕುಮಾರ್ ರೆಡ್ಡಿ, 59.5), 8–201 (ಮೊಹಮ್ಮದ್ ಸಿರಾಜ್, 62.6), 9–213 (ರವೀಂದ್ರ ಜಡೇಜ, 65.6)
ಬೌಲಿಂಗ್:ಮಿಚೆಲ್ ಸ್ಟಾರ್ಕ್ 24–3–83–3, ಜೋಶ್ ಹ್ಯಾಜಲ್‌ವುಡ್ 6–2–22–1, ಪ್ಯಾಟ್ ಕಮಿನ್ಸ್ 20.5–2–80–4, ನೇಥನ್ ಲಯನ್ 21–0–54–1, ಟ್ರಾವಿಸ್ ಹೆಡ್ 1–0–1–0, ಮಿಚೆಲ್ ಮಾರ್ಷ್ 2–0–6–0.



ಆಕಾಶ್ ಮತ್ತು ಬೂಮ್ರಾ ಎಎಫ್‌ಪಿ/ಪಿಟಿಐ ಚಿತ್ರಗಳು

ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಇಂದಿನಿಂದ

ಕಣದಲ್ಲಿ ಅನ್ಮೋಲ್, ಚಿರಾಗ್

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ)ಯ ಕೋರ್ಟ್‌ನಲ್ಲಿ ಅಭ್ಯಾಸನಿರತ ಆಟಗಾರರು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಬೆಂಗಳೂರು: ದೇಶದ ಬ್ಯಾಡ್ಮಿಂಟನ್ ಕ್ರೀಡೆಯ ಉದಯೋನ್ಮುಖ ಪ್ರತಿಭೆ ಅನ್ಮೋಲ್ ಖರ್ಬ್, ಮಿಥುನ್ ಮಂಜುನಾಥ್ ಮತ್ತು ಚಿರಾಗ್ ಸೇನ್ ಅವರು ಬುಧವಾರ ಆರಂಭವಾಗಲಿರುವ ಯಾನೆಕ್ಸ್– ಸನ್‌ರೈಸ್ 77ನೇ ಅಂತರ ರಾಜ್ಯ, ಅಂತರ ವಲಯ ಮತ್ತು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಮೂರನೇ ಬಾರಿ ಈ ಟೂರ್ನಿಯನ್ನು ಆಯೋಜಿಸುತ್ತಿದೆ. ಇದೇ 24ರವರೆಗೆ ನಡೆಯುವ ಟೂರ್ನಿಯಲ್ಲಿ ದೇಶದ ಎಲ್ಲ ರಾಜ್ಯಗಳ ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ ರೈಲ್ವೆಸ್, ಸರ್ವಿಸಸ್, ಎಲ್‌ಐಸಿ ಸಂಸ್ಥೆಗಳ ತಂಡಗಳು ಕಣದಲ್ಲಿವೆ. ಹೋದ ವರ್ಷದ ಟೂರ್ನಿಯ ಪುರುಷರ ಸಿಂಗಲ್ಸ್ ಚಾಂಪಿಯನ್ ಚಿರಾಗ್ ಸೇನ್ ಮತ್ತು ಮಹಿಳೆಯರ ಚಾಂಪಿಯನ್ ಅನ್ಮೋಲ್ ಸೇರಿದಂತೆ 456 ಸ್ಪರ್ಧಿಗಳು ಭಾಗವಹಿಸಲಿದ್ದಾರೆ.

‘18 ಮತ್ತು 19ರಂದು ಅಂತರ ವಲಯ ಟೀಮ್ ಚಾಂಪಿಯನ್‌ಷಿಪ್, 20ರಿಂದ 24ರವರೆಗೆ ವೈಯಕ್ತಿಕ ಚಾಂಪಿಯನ್‌ಷಿಪ್ ಪಂದ್ಯಗಳು ನಡೆಯಲಿವೆ. ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಬಹುಮಾನದ ಮೊತ್ತವು ಒಟ್ಟು ₹ 50 ಲಕ್ಷ ನೀಡಲಾಗುವುದು. ಅದರಲ್ಲಿ ತಂಡ ಚಾಂಪಿಯನ್‌ಷಿಪ್‌ಗೆ ₹ 10 ಲಕ್ಷ, ವೈಯಕ್ತಿಕ ವಿಭಾಗಕ್ಕೆ ₹ 40 ಲಕ್ಷ ನಿಗದಿಪಡಿಸಲಾಗಿದೆ’ ಎಂದು ಕೆಬಿಎ ಅಧ್ಯಕ್ಷ ಮನೋಜಕುಮಾರ್ ಹೊಸಪೇಟೆಮಠ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಟೂರ್ನಿಯು ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ನಡೆಯಲಿದೆ. ರ‍್ಯಾಂಕಿಂಗ್ ಪಟ್ಟಿಯಲ್ಲಿರುವ ಭಾರ್ಗವ್, ಚಿರಾಗ್, ಆರ್ಯನ್, ಭರತ್, ಅದಿತಿ ರಾವ್, ಇಶಾ ರಾಣಾ, ಕರ್ನಾಟಕದ ಸಾಯಿನಾಥ್ ದಯಾನಂದ, ಮಿಥುನ್ ಮಂಜುನಾಥ್, ತಾನ್ಯಾ, ಅಶ್ವಿನಿ ಭಟ್, ಶಿಖಾ ಗೌತಮ್ ಅವರು ಕಣದಲ್ಲಿದ್ದಾರೆ.

‘ರಾಜ್ಯದಲ್ಲಿ ಮೂರನೇ ಬಾರಿ ಟೂರ್ನಿಯನ್ನು ಆಯೋಜಿಸಲಾಗುತ್ತಿದೆ. 2006ರಲ್ಲಿ ಮತ್ತು 2012ರಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಇಲ್ಲಿ ಆಯೋಜನೆಯಾಗಿದ್ದವು. ಈ ಟೂರ್ನಿಗೆ ₹ 1.5 ಕೋಟಿ ವೆಚ್ಚವಾಗುತ್ತಿದೆ‘ ಎಂದರು.

2006ರಲ್ಲಿ ಅನುಭವಿ ಅಪರ್ಣಾ ಪೋಪಟ್ ಅವರು ಆಗಿನ್ನೂ ಉದಯೋನ್ಮುಖ ಆಟಗಾರ್ತಿ ಯಾಗಿದ್ದ ಸೈನಾ ನೆಹ್ವಾಲ್ ವಿರುದ್ಧ ಗೆದ್ದು ಸತತ ಒಂಬತ್ತನೇ ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಅನೂಪ್ ಶ್ರೀಧರ್ ತಮ್ಮ ಗೆಳೆಯ ಅರವಿಂದ್ ಭಟ್ ಅವರನ್ನು ಮಣಿಸಿದ್ದರು. 2012ರಲ್ಲಿ ಪಿ.ವಿ. ಸಿಂಧು ಇಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. ಅದರ ನಂತರ ಅವರು ಸಾಧನೆಗಳ ಉತ್ತುಂಗ ಶಿಖರವೇರಿದರು.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳು ಮೊದಲಿನಿಂದಲೂ ಪ್ರತಿಭೆಗಳಿಗೆ ಉತ್ತಮ ವೇದಿಕೆಯಾಗಿವೆ. ಅದರಲ್ಲೂ ಬೆಂಗಳೂರಿನಲ್ಲಿ ನಡೆದ ಚಾಂಪಿಯನ್‌ಷಿಪ್‌ಗಳಲ್ಲಿ ಆಡಿದವರು ವಿಶ್ವ ಬ್ಯಾಡ್ಮಿಂಟನ್, ಒಲಿಂಪಿಕ್ಸ್ ಸಾಧನೆಯವರೆಗೂ ಬೆಳೆದಿದ್ದು ವಿಶೇಷ. ಈ ಸಲವೂ ಭರವಸೆಯ ಯುವ ಆಟಗಾರರು ಕಣದಲ್ಲಿದ್ದಾರೆ. ಭವ್ಯ ಭವಿಷ್ಯದ ಕನಸು ಕಾಣುತ್ತಿದ್ದಾರೆ.

ಹೆಯಲಿ ಅಬ್ಬರ: ವಿಂಡೀಸ್‌ಗೆ ಜಯ

ನವಿ ಮುಂಬೈ (ಪಿಟಿಐ): ನಾಯಕಿ ಹೆಯಲಿ ಮ್ಯಾಥ್ಯೂಸ್ ಅಜೇಯ ಅರ್ಧ ಶತಕದ ಬಲದಿಂದ ವೆಸ್ಟ್ ಇಂಡೀಸ್ ಮಹಿಳೆಯರ ತಂಡವು ಮಂಗಳವಾರ ನಡೆದ ಭಾರತದ ಎದುರಿನ ಟಿ20 ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ವಿಂಡೀಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮಂದಾನ (62; 41ಎ, 4X9, 6X1) ಮತ್ತು ರಿಚಾ ಘೋಷ್ (32; 17ಎ, 4X6) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಗುರಿ ಬೆನ್ನಟ್ಟಿದ ಪ್ರವಾಸಿ ಬಳಗವು ಮ್ಯಾಥ್ಯೂಸ್ (ಔಟಾಗದೆ 85; 47ಎ) ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ 15.4 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿ ಜಯಿಸಿತು.



ವೆಸ್ಟ್ ಇಂಡೀಸ್ ತಂಡದ ಹೆಯಲಿ ಮ್ಯಾಥ್ಯೂಸ್ ಬ್ಯಾಟಿಂಗ್

ಮ್ಯಾಥ್ಯೂಸ್ ಮತ್ತು ಕಿಯಾನಾ ಜೋಸೆಫ್ (38 ರನ್) ಮೊದಲ ವಿಕೆಟ್ ಜೊತೆಯಾಟದಲ್ಲಿ 66 ರನ್ ಗಳಿಸಿದರು. ಕಿಯಾನಾ ಔಟಾದ ನಂತರ ಶೆಮೈನ್ ಕ್ಯಾಂಪ್‌ಬೆಲ್ 26 ಎಸೆತಗಳಲ್ಲಿ 29 ರನ್ ಗಳಿಸಿದರು. ಹೆಯಲಿ 17 ಬೌಂಡರಿ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 9ಕ್ಕೆ159 (ಸ್ಮೃತಿ ಮಂದಾನ 62, ರಿಚಾ ಘೋಷ್ 32, ಚೈನೆಲಿ ಹೆನ್ರಿ 37ಕ್ಕೆ2, ದಿಯಾಂದ್ರ ಡಾಟಿನ್ 14ಕ್ಕೆ2, ಹೆಯಲಿ ಮ್ಯಾಥ್ಯೂಸ್ 36ಕ್ಕೆ2, ಅಫ್ಟೈ ಫ್ಲೆಚರ್ 28ಕ್ಕೆ2) ವೆಸ್ಟ್ ಇಂಡೀಸ್: 15.4 ಓವರ್‌ಗಳಲ್ಲಿ 1 ವಿಕೆಟ್‌ಗೆ 160 (ಹೆಯಲಿ ಮ್ಯಾಥ್ಯೂಸ್ ಔಟಾಗದೆ 85, ಕಿಯಾನಾ ಜೋಸೆಫ್ 38, ಶೆಮೈನ್ ಕ್ಯಾಂಪ್‌ಬೆಲ್ 29, ಸೈಮಾ ಠಾಕೂರ್ 27ಕ್ಕೆ1. ಫಲಿತಾಂಶ: ವೆಸ್ಟ್ ಇಂಡೀಸ್ 9 ವಿಕೆಟ್‌ಗಳ ಜಯ.



ಹರ್ಮೀತ್ ದೇಸಾಯಿ ಆಟದ ವೈಖರಿ ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಟಿಟಿ: ಕ್ವಾರ್ಟರ್‌ಗೆ ಹರ್ಮೀತ್, ಅಂಕುರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಅಗ್ರಶ್ರೇಯಾಂಕದ ಹರ್ಮೀತ್ ದೇಸಾಯಿ ಅವರು ಯುಟಿಟಿ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ (ಕೆಟಿಟಿಎ) ಆಶ್ರಯದಲ್ಲಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಮೂರನೇ ದಿನವಾದ ಮಂಗಳವಾರ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ ತಂಡವನ್ನು ಪ್ರತಿನಿಧಿಸುತ್ತಿರುವ ಹರ್ಮೀತ್ 7-11, 11-5, 11-13, ಹರ್ಮೀತ್ ದೇಸಾಯಿ 11-6, 11-6ರಿಂದ ಮಿಜೋರಾಂನ ಕ್ವಾಲಿಫೈಯರ್ ಆಟಗಾರ ಎಚ್. ಜೆಹೊ ಅವರನ್ನು ಸೋಲಿಸಿದರು.

ಪಿಎಸ್‌ಪಿಬಿ ತಂಡದ ಮತ್ತೊಬ್ಬ ಆಟಗಾರ ಅಂಕುರ್ ಭಟ್ಟಾಚಾರ್ಯ ನಿರಾಯಾಸವಾಗಿ ಮುನ್ನಡೆದರು. ಎರಡ ನೇ ಶ್ರೇಯಾಂಕದ ಅವರು 11-9, 11-8, 11-9ರಲ್ಲಿ ನೇರ ಗೇಮ್‌ಗಳಿಂದ ತಮಿಳುನಾಡಿನ ಪ್ರೇಯೇಶ್ ರಾಜ ಸುರೇಶ್ ಅವರನ್ನು ಹಿಮ್ಮೆಟ್ಟಿಸಿದರು. ಮೂರನೇ ಶ್ರೇಯಾಂಕದ ಪಯಸ್ ಜೈನ್ (ದೆಹಲಿ) 12-10, 7-11, 11-8, 11-8ರಿಂದ ಮಹಾರಾಷ್ಟ್ರದ ಜಶ್ ಮೋದಿ ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು.

ನಾಲ್ಕನೇ ಶ್ರೇಯಾಂಕದ ಮಾನವ್ ಠಕ್ಕರ್ ಅವರೂ ಹೆಚ್ಚು ಶ್ರಮವಿಲ್ಲದೆ ಮುಂದಿನ ಸುತ್ತು ತಲುಪಿದರು. ಪಿಎಸ್‌ಪಿಬಿ ತಂಡವನ್ನು ಪ್ರತಿನಿಧಿಸುತ್ತಿರುವ ಅವರು 11-6, 11-9, 11-8ರಲ್ಲಿ ನೇರ ಗೇಮ್‌ಗಳಿಂದ ಅಸ್ಸಾಂನ ಪ್ರಿಯಾನುಜ್ ಭಟ್ಟಾಚಾರ್ಯ ವಿರುದ್ಧ ಗೆದ್ದರು. ಐದನೇ ಶ್ರೇಯಾಂಕದ ರೋನಿತ್ ಭಂಜಾ (ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿ), ಮಾಜಿ ರಾಷ್ಟ್ರೀಯ ಚಾಂಪಿಯನ್ ಆ್ಯಂಟನಿ ಅಮಲರಾಜ್ ಮುಂದಿನ ಸುತ್ತು ಪ್ರವೇಶಿಸಿದರು. ಆ್ಯಂಟನಿ 11-7, 11-7, 9-11, 7-11, 11-8ರಿಂದ ಎಂಟನೇ ಶ್ರೇಯಾಂಕದ ಅನಿರ್ಬನ್ ಘೋಷ್ (ಆರ್‌ಎಸ್‌ಪಿಬಿ) ಅವರಿಗೆ ಆಘಾತ ನೀಡಿದರು.

ಯಶಸ್ವಿನಿ ಘೋರ್ಪಡೆ ಮುನ್ನಡೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಪೊಯಮಂತಿ ಬೈಸ್ಯ, ಮೂರನೇ ಶ್ರೇಯಾಂಕದ ಸ್ವಸ್ತಿಕಾ ಘೋಷ್ ಮತ್ತು ನಾಲ್ಕನೇ ಶ್ರೇಯಾಂಕದ ಯಶಸ್ವಿನಿ ಘೋರ್ಪಡೆ ಅವರು ಎಂಟರ ಘಟ್ಟಕ್ಕೆ ಮುನ್ನಡೆದರು.

ಆರ್‌ಎಸ್‌ಪಿಬಿ ತಂಡದ ಬೈಸ್ಯ 11-8, 10-12, 11-13, 11-6, 11-8ರಿಂದ ಪಿಎಸ್‌ಪಿಬಿಯ ಮೌಮಾ ದಾಸ್ ಅವರನ್ನು ಸೋಲಿಸಿದರು. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ತಂಡದ ಸ್ವಸ್ತಿಕಾ 11-7, 7-11, 11-4, 11-4ರಿಂದ ಆರ್‌ಎಸ್‌ಪಿಬಿಯ ಟೇಕ್ಮೆ ಸರ್ಕಾರ್ ವಿರುದ್ಧ ಜಯ ಸಾಧಿಸಿದರು. ಪಿಎಸ್‌ಪಿಬಿ ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಯಶಸ್ವಿನಿ 9-11, 5-11, 11-5, 11-8, 11-5ರಿಂದ ತಮಿಳುನಾಡಿನ ಸೆಲೆನಾ ದೀಪ್ತಿ ಸೆಲ್ವಕುಮಾರ್ ಅವರನ್ನು ಮಣಿಸಿದರು.

ಮಾಜಿ ರಾಷ್ಟ್ರೀಯ ಚಾಂಪಿಯನ್ ಮಧುರಿಕಾ ಪಾಟ್ಕರ್ 14-12, 14-12, 11-5ರಿಂದ ಐದನೇ ಶ್ರೇಯಾಂಕದ ಪೃಥಾ ವರ್ತಿಕರ್ (ಮಹಾರಾಷ್ಟ್ರ) ಅವರಿಗೆ ಆಘಾತ ನೀಡಿದರು.

19 ವರ್ಷದೊಳಗಿನ ಸಿಂಗಲ್ಸ್‌ನಲ್ಲಿ ಕರ್ನಾಟಕದ ಆಟಗಾರರು ನಿರಾಸೆ ಮೂಡಿಸಿದರು. ಬಾಲಕರ ವಿಭಾಗದ 32ರ ಘಟ್ಟದ ಪಂದ್ಯದಲ್ಲಿ ರೋಹಿತ್ ಶಂಕರ್ 1–3ರಿಂದ ಮಹಾರಾಷ್ಟ್ರದ ಸಮಂತ್ ಶರ್ವೇಯ ಅವರಿಗೆ ಸೋತರು. ಬಾಲಕಿಯರ ವಿಭಾಗದ 32ರ ಘಟ್ಟದ ಪಂದ್ಯದಲ್ಲಿ ಹಿಮಾಂಶಿ ಚೌಧರಿ 1–3ರಿಂದ ಉತ್ತರಪ್ರದೇಶದ ಸುಹಾನಿ ಮಹಾಜನ್ ಅವರಿಗೆ ಶರಣಾದರು.

ಗೆಲುವಿನೊಡನೆ ಟಿಮ್ ಸೌಥಿಗೆ ವಿದಾಯ

ಹ್ಯಾಮಿಲ್ಟನ್ (ಎಪಿ): ಮಿಚೆಲ್ ಸ್ಯಾಂಟನರ್ (85ಕ್ಕೆ 4) ಅವರ ಬೌಲಿಂಗ್ ದಾಳಿಯ ನೆರವಿನಿಂದ ಆತಿಥೇಯ ನ್ಯೂಜಿಲೆಂಡ್, ಇಲ್ಲಿ ನಡೆದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 423 ರನ್‌ಗಳಿಂದ ಮಣಿಸಿತು.

ಗೆಲುವಿಗೆ 658 ರನ್‌ಗಳ ಗುರಿ ಪಡೆದ ಆಂಗ್ಲರ ಪಡೆ 234 ರನ್‌ಗೆ ಕುಸಿಯಿತು. ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದ ಕಿವೀಸ್‌ನ ವೇಗದ ಬೌಲರ್ ಟಿಮ್ ಸೌಥಿ ಅವರಿಗೆ ಈ ಮೂಲಕ ಗೆಲುವಿನ ವಿದಾಯ ದೊರೆಯಿತು. 34 ವರ್ಷ ವಯಸ್ಸಿನ ಸೌಥಿ 107 ಟೆಸ್ಟ್ ಪಂದ್ಯಗಳಲ್ಲಿ 391 ವಿಕೆಟ್ ಪಡೆದಿದ್ದಾರೆ.

ವಿದರ್ಭ ತಂಡಕ್ಕೆ ಕರುಣ್ ನಾಯಕ



ಬೆಂಗಳೂರು: ಕರ್ನಾಟಕದ ಕರುಣ್ ನಾಯರ್ ಅವರು ವಿದರ್ಭ ಕ್ರಿಕೆಟ್ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಇದೇ 21ರಿಂದ ಅಹಮದಾಬಾದಿನಲ್ಲಿ ಆರಂಭವಾಗಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರುಣ್ ಅವರು ತಂಡವನ್ನು ಮುನ್ನಡೆಸುವರು. ಅವರು ಕಳೆದ ಋತುವಿನಿಂದ ವಿದರ್ಭ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಸುಧೀರ್ ವಾಂಖೆಡೆ ನೇತೃತ್ವದ ಆಯ್ಕೆ ಸಮಿತಿಯು 17 ಆಟಗಾರರ ತಂಡವನ್ನು ಆಯ್ಕೆ ಮಾಡಿದೆ.

ತಂಡ ಇಂತಿದೆ: ಕರುಣ್ ನಾಯರ್ (ನಾಯಕ), ಧ್ರುವ ಶೋರೆ, ಅಥರ್ವ ತೈಡೆ, ಯಶ್ ರಾಥೋಡ್, ಅಪೂರ್ವ್ ವಾಂಖೆಡೆ, ಶುಭಂ ದುಬೆ, ಅಮನ್ ಮೊಖಡೆ, ಯಶ್ ಕದಂ, ಜಿತೇಶ್ ಶರ್ಮಾ, ಅಕ್ಷಯ್ ವಾಡಕರ್, ಹರ್ಷ ದುಬೆ, ಪಾರ್ಥ ರೆಖಡೆ, ಯಶ್ ಠಾಕೂರ್, ಆದಿತ್ಯ ಠಾಕರೆ, ಪ್ರಫುಲ್ ಹಿಂಜೆ, ದರ್ಶನ್ ನಾಯ್ಕಂಡೆ, ನಚಿಕೇತ್ ಭೂತೆ.

ಮೈಸೂರು ರೇಸ್

ರೈಸ್ ಎ ಬಕ್ ಗೆಲ್ಲುವ ನಿರೀಕ್ಷೆ

ಸಿ.ದಶರಥರಾಮ ಶೆಟ್ಟಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೈಸ್ ಎ ಬಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಕ್ವಾಂಟೊ 6, ಮಿರಾಕಲ್ ಹನಿ 5, ಇಕೊ ಸಿಸ್ಟಮ್ 4
2ನೇ ರೇಸ್: ರಾಜ್ 3, ಫ್ರೀ ಸ್ಪಿರಿಟೆಡ್ 1, ಪೆಟ್ಟೀಸ್ ಬಾಯ್ಸ್ 4
3ನೇ ರೇಸ್: ವರ್ದಾನ್ 3, ಡೀಮ್ಡ್ ಟು ಫೈರ್ 2, ಪ್ರಾಸ್ಪರಸ್ ಪ್ರಿನ್ಸ್ 4
4ನೇ ರೇಸ್: ರೆಡ್ ಹಿಲ್ಸ್ 2, ಸ್ಪಿರಿಚ್ಯುಯಲ್ ಫೋರ್ಸ್ 3, ನ್ಯಾಚುರಲ್ ಗೋಲ್ಡ್ 5
5ನೇ ರೇಸ್: ರೈಸ್ ಎ ಬಕ್ 4, ಐರನ್ ಕ್ಲಾಡ್ 1, ದಿ ಪ್ರೊಟೆಕ್ಟರ್ 2
6ನೇ ರೇಸ್: ರೋಡ್ ರನ್ನರ್ 9, ಮಾಸ್ಟರಿ 5, ಡ್ರಿಸಾನ 2
7ನೇ ರೇಸ್: ತಲೈವಾ 6, ಸರ್ ಕ್ಯಾಲ್ಕ್ಯುಲಸ್ 5, ಕಾಂಟ್ರಿಬ್ಯೂಟರ್ 1

ಉತ್ತಮ ಬೆಟ್: ಸ್ಕ್ವಾಂಟೊ

ಜಾಕ್‌ಪಾಟ್‌ಗೆ 3,4,5,6,7 | 1ನೇ ಟ್ರಿಬಲ್ 2,3,4 | 2ನೇ ಟ್ರಿಬಲ್ 5,6,7